ಸೂ. 286 | **2. ಅಲ್ ಬಕರಃ** | ರು. 40

سُوْرَةُ الْبَقَرَةِ مَدَنِيَّةٌ — اٰيَاتُهَا ٢٨٦ — رُكُوْعَاتُهَا ٤٠

(ಅವತೀರ್ಣ - ಮದೀನಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ○ الجزء ١

1. ಅಲಿಫ್ ಲಾಮ್ ಮೀಮ್[1].

الٓمّٓ ①

2. ಇದು (ದೈವಿಕ) ಗ್ರಂಥ; ಸಂದೇಹಾತೀತವಿದು.
ಭಯಭಕ್ತಿಯುಳ್ಳವರಿಗೆ ಇದು ಮಾರ್ಗದರ್ಶಿ.

ذٰلِكَ الْكِتٰبُ لَا رَيْبَ ۛۚ فِيْهِ ۛۚ هُدًى لِّلْمُتَّقِيْنَ ② معانقة

3. ಪರೋಕ್ಷದ[2] ಮೇಲೆ ವಿಶ್ವಾಸವಿರಿಸುವವರಿಗೆ, ನಮಾಝನ್ನು ಸಂಸ್ಥಾಪಿಸುವವರಿಗೆ,[3] ನಾವು ನೀಡಿರುವ ಸಂಪತ್ಸೌಕರ್ಯಗಳಿಂದ ವ್ಯಯಿಸುವವರಿಗೆ-

الَّذِيْنَ يُؤْمِنُوْنَ بِالْغَيْبِ وَيُقِيْمُوْنَ الصَّلٰوةَ
وَمِمَّا رَزَقْنٰهُمْ يُنْفِقُوْنَ ③

4. ನಿಮಗೆ ಅವತೀರ್ಣಗೊಳಿಸಿದ ಗ್ರಂಥದ (ಅರ್ಥಾತ್ ಕುರ್‌ಆನ್) ಮತ್ತು ನಿಮಗಿಂತ ಮೊದಲು ಅವತೀರ್ಣಗೊಳಿಸಿದ್ದ ಎಲ್ಲಾ ಗ್ರಂಥಗಳ ಮೇಲೆ ವಿಶ್ವಾಸವಿಡುವವರಿಗೆ ಮತ್ತು ಪರಲೋಕದ ಮೇಲೆ ದೃಢ ವಿಶ್ವಾಸವಿಡುವವರಿಗೆ (ಇದು ಮಾರ್ಗದರ್ಶಿ)

وَالَّذِيْنَ يُؤْمِنُوْنَ بِمَآ اُنْزِلَ اِلَيْكَ وَمَآ
اُنْزِلَ مِنْ قَبْلِكَ ۚ وَبِالْاٰخِرَةِ هُمْ يُوْقِنُوْنَ ④

---

1. ಇಂತಹ ಬಿಡಿ ಅಕ್ಷರಗಳು ಪವಿತ್ರ ಕುರ್‌ಆನಿನ ಕೆಲವು ಅಧ್ಯಾಯಗಳ ಆರಂಭದಲ್ಲಿ ಕಂಡು ಬರುತ್ತದೆ. ವ್ಯಾಖ್ಯಾನಕಾರರು ಇದನ್ನು ವಿವಿಧ ರೀತಿಯಲ್ಲಿ ವಿವರಿಸಿದ್ದಾರೆ. ಆದರೆ ಯಾವುದೇ ವಿವರಣೆಯ ಬಗ್ಗೆ ಒಮ್ಮತವಿಲ್ಲ. ಅದರ ಅರ್ಥವರಿಯುವುದು ಅತ್ಯವಶ್ಯಕವೂ ಅಲ್ಲ. ಏಕೆಂದರೆ ಅದರ ಅರ್ಥವರಿಯದಿದ್ದರೂ ಕುರ್‌ಆನ್‌ನಿಂದ ಮಾರ್ಗದರ್ಶನ ಪಡೆಯಲು ಅದು ಬಾಧಕವಾಗುವುದಿಲ್ಲ.

2. ಪರೋಕ್ಷವೆಂದರೆ ಮಾನವನ ಇಂದ್ರಿಯಗಳಿಗೆ ನಿಲುಕದ, ಸಾಮಾನ್ಯ ಮನುಷ್ಯರ ನೇರ ಅನುಭವ ಮತ್ತು ವೀಕ್ಷಣೆಗೆ ಅತೀತವಾದ ವಾಸ್ತವಿಕತೆಗಳಾಗಿವೆ. ಉದಾಹರಣೆಗೆ ಅಲ್ಲಾಹನ ಅಸ್ತಿತ್ವ ಮತ್ತು ಗುಣಗಳು, ದೇವಚರರು, ದೇವವಾಣಿ, ಸ್ವರ್ಗ, ನರಕ ಇತ್ಯಾದಿಗಳು.

3. ನಮಾಝ್ ಸಂಸ್ಥಾಪಿಸುವುದೆಂದರೆ ಮಾನವನು ಕಟ್ಟುನಿಟ್ಟಿನಿಂದ ನಮಾಝ್ ನಿರ್ವಹಿಸಬೇಕೆಂದು ಮಾತ್ರವಲ್ಲ, ನಮಾಝ್‌ನ ಸಾಮೂಹಿಕ ವ್ಯವಸ್ಥೆಯನ್ನೂ ವಿಧ್ಯುಕ್ತವಾಗಿ ಸ್ಥಾಪಿಸಬೇಕೆಂದಾಗಿದೆ. ಯಾವುದಾದರೊಂದು ಊರಿನಲ್ಲಿ ವೈಯಕ್ತಿಕವಾಗಿ ಜನರು ನಮಾಝ್ ನಿರ್ವಹಿಸುತ್ತಿದ್ದು, ಸಾಮೂಹಿಕ ನಮಾಝ್ ನಿರ್ವಹಣೆಗೆ ಯಾವುದೇ ವ್ಯವಸ್ಥೆ ಇಲ್ಲದಿದ್ದರೆ ಅಲ್ಲಿ ನಮಾಝ್‌ನ ಸಂಸ್ಥಾಪನೆಯಾಗುತ್ತಿದೆ ಎಂದು ಹೇಳುವಂತಿಲ್ಲ.

5. ಅಂತಹವರು ತಮ್ಮ ಪ್ರಭುವಿನ ಸನ್ಮಾರ್ಗದಲ್ಲಿದ್ದಾರೆ ಮತ್ತು ಅವರೇ ಯಶಸ್ವಿಯಾಗುವವರು.

أُولَٰٓئِكَ عَلَىٰ هُدًى مِّن رَّبِّهِمْ ۖ وَأُولَٰٓئِكَ
هُمُ الْمُفْلِحُونَ ﴿٥﴾

6. ಈ ವಿಷಯಗಳನ್ನು ನಿಷೇಧಿಸಿದವರಿಗೆ ನೀವು ಎಚ್ಚರಿಕೆ ಕೊಟ್ಟರೂ ಕೊಡದಿದ್ದರೂ ಸರಿಯೇ. ಅವರಂತೂ ವಿಶ್ವಾಸವಿಡುವವರಲ್ಲ.

إِنَّ الَّذِينَ كَفَرُوا سَوَآءٌ عَلَيْهِمْ ءَأَنذَرْتَهُمْ
أَمْ لَمْ تُنذِرْهُمْ لَا يُؤْمِنُونَ ﴿٦﴾

7. ಅಲ್ಲಾಹನು ಅವರ ಹೃದಯಗಳ ಹಾಗೂ ಕಿವಿಗಳ ಮೇಲೆ ಮುದ್ರೆಯೊತ್ತಿರುತ್ತಾನೆ.[4] ಅವರ ದೃಷ್ಟಿಗಳ ಮೇಲೆ ಪರದೆ ಬಿದ್ದಿದೆ. ಅವರಿಗೆ ಘೋರ ಶಿಕ್ಷೆ ಕಾದಿದೆ.

خَتَمَ اللَّهُ عَلَىٰ قُلُوبِهِمْ وَعَلَىٰ سَمْعِهِمْ ۖ وَعَلَىٰٓ
أَبْصَارِهِمْ غِشَاوَةٌ ۖ وَلَهُمْ عَذَابٌ عَظِيمٌ ﴿٧﴾

8. ಮನುಷ್ಯರಲ್ಲಿ ಕೆಲವರು, "ನಾವು ಅಲ್ಲಾಹನಲ್ಲಿ ಹಾಗೂ ಅಂತಿಮ ದಿವಸದಲ್ಲಿ ವಿಶ್ವಾಸವಿಟ್ಟಿದ್ದೇವೆ" ಎಂದು ಹೇಳುವವರೂ ಇದ್ದಾರೆ. ಆದರೆ ನಿಜವಾಗಿ ಅವರು ವಿಶ್ವಾಸಿಗಳಲ್ಲ.

وَمِنَ النَّاسِ مَن يَقُولُ ءَامَنَّا بِاللَّهِ وَبِالْيَوْمِ
الْءَاخِرِ وَمَا هُم بِمُؤْمِنِينَ ﴿٨﴾

9. ಅವರು ಅಲ್ಲಾಹನನ್ನೂ ವಿಶ್ವಾಸಿಗಳನ್ನೂ ವಂಚಿಸುತ್ತಾರೆ. ವಾಸ್ತವದಲ್ಲಿ ಅವರು ತಮ್ಮನ್ನು ತಾವೇ ವಂಚಿಸಿಕೊಳ್ಳುತ್ತಿದ್ದಾರೆ ಮತ್ತು ಅವರಿಗೆ ಅದರ ಬೋಧವಿರುವುದಿಲ್ಲ.

يُخَٰدِعُونَ اللَّهَ وَالَّذِينَ ءَامَنُوا وَمَا يَخْدَعُونَ
إِلَّآ أَنفُسَهُمْ وَمَا يَشْعُرُونَ ﴿٩﴾

10. ಅವರ ಹೃದಯಗಳಲ್ಲಿ ಒಂದು ರೋಗವಿದೆ. ಅದನ್ನು ಅಲ್ಲಾಹನು ಇನ್ನಷ್ಟು ಉಲ್ಬಣಗೊಳಿಸಿದನು.[5] ಅವರು ಹೇಳುತ್ತಿರುವ ಸುಳ್ಳಿನ ಪ್ರತಿಫಲವಾಗಿ ಅವರಿಗೆ ವೇದನಾಯುಕ್ತ ಶಿಕ್ಷೆ ಕಾದಿದೆ.

فِي قُلُوبِهِم مَّرَضٌ فَزَادَهُمُ اللَّهُ مَرَضًا ۖ
وَلَهُمْ عَذَابٌ أَلِيمٌۢ بِمَا كَانُوا يَكْذِبُونَ ﴿١٠﴾

11. ಭೂಮಿಯ ಮೇಲೆ ಕ್ಷೋಭೆಯನ್ನುಂಟು ಮಾಡದಿರಿ ಎಂದು ಅವರೊಡನೆ ಹೇಳಿದಾಗಲೆಲ್ಲ ಅವರು, "ನಾವು ಸುಧಾರಕರು ಮಾತ್ರ" ಎಂದು ಹೇಳುತ್ತಾರೆ.

وَإِذَا قِيلَ لَهُمْ لَا تُفْسِدُوا فِي الْأَرْضِ قَالُوٓا
إِنَّمَا نَحْنُ مُصْلِحُونَ ﴿١١﴾

12. ಜಾಗ್ರತೆ! ವಾಸ್ತವದಲ್ಲಿ ಅವರೇ ಗೊಂದಲಕಾರಿಗಳು. ಆದರೆ ಅವರಿಗೆ ಬೋಧವಿರುವುದಿಲ್ಲ.

أَلَآ إِنَّهُمْ هُمُ الْمُفْسِدُونَ وَلَٰكِن لَّا يَشْعُرُونَ ﴿١٢﴾

4. ಅಲ್ಲಾಹನು ಮುದ್ರೆಯೊತ್ತಿದ್ದ ಕಾರಣದಿಂದ ಅವರು ಅನುಸರಣೆಯನ್ನು ನಿರಾಕರಿಸಿದರೆಂದು ಇದರ ಅರ್ಥವಲ್ಲ. ಮೇಲೆ ಪ್ರಸ್ತಾಪಿಸಲಾದ ಮೂಲಭೂತ ವಿಷಯಗಳನ್ನು ಅಲ್ಲಗಳೆದು, ತಮಗಾಗಿ ಕುರ್‌ಆನ್ ಪ್ರಸ್ತಾವಿಸಿರುವುದಕ್ಕಿಂತ ಭಿನ್ನವಾದ ಮಾರ್ಗವನ್ನು ಆಯ್ಕೆ ಮಾಡಿದ್ದರಿಂದಾಗಿ ಅಲ್ಲಾಹನು ಅವರ ಹೃದಯ ಮತ್ತು ಕಿವಿಗಳಿಗೆ ಮುದ್ರೆಯೊತ್ತಿದನು ಎಂಬುದು ಇದರ ಅರ್ಥವಾಗಿದೆ.

5. ರೋಗವೆಂದರೆ ಕಾಪಟ್ಯದ ರೋಗವಾಗಿದೆ. ಅಲ್ಲಾಹನು ರೋಗವನ್ನು ಉಲ್ಬಣಿಸುತ್ತಾನೆಂದರೆ, ಕಪಟವಿಶ್ವಾಸಿಯನ್ನು ಅಲ್ಲಾಹನು ತಕ್ಷಣ ಶಿಕ್ಷಿಸದೆ ಸಡಿಲ ಬಿಟ್ಟು ಬಿಡುತ್ತಾನೆ. ಇದರಿಂದ ಆತನ ಕಾಪಟ್ಯ ಇನ್ನಷ್ಟು ಹೆಚ್ಚುತ್ತದೆ.

13. "ಇತರರು ವಿಶ್ವಾಸವಿಟ್ಟಂತೆಯೇ ನೀವು ವಿಶ್ವಾಸವಿಡಿರಿ" ಎಂದು ಅವರೊಡನೆ ಹೇಳಲಾದಾಗ, "ಏನು? ಮೂರ್ಖರ ಹಾಗೆ ನಾವೂ ವಿಶ್ವಾಸವಿಡಬೇಕೇ?" ಎಂದು ಅವರು ಹೇಳುತ್ತಾರೆ. ಎಚ್ಚರಿಕೆ! ನಿಜವಾಗಿ ಅವರೇ ಸ್ವತಃ ಮೂರ್ಖರಾಗಿದ್ದಾರೆ ಎಂಬುದನ್ನು ಅವರು ಅರಿತಿಲ್ಲ.

وَإِذَا قِيلَ لَهُمْ آمِنُوا كَمَا آمَنَ النَّاسُ قَالُوا
أَنُؤْمِنُ كَمَا آمَنَ السُّفَهَاءُ ۗ أَلَا إِنَّهُمْ هُمُ
السُّفَهَاءُ وَلَٰكِنْ لَا يَعْلَمُونَ ﴿١٣﴾

14. ಇವರು ವಿಶ್ವಾಸಿಗಳನ್ನು ಕಂಡಾಗ, "ನಾವು ವಿಶ್ವಾಸವಿಟ್ಟಿದ್ದೇವೆ" ಎನ್ನುತ್ತಾರೆ. ಅತ್ತ ತಮ್ಮ ಶೈತಾನರನ್ನು ಸಂಧಿಸಿದಾಗ ಅವರೊಡನೆ, "ನಿಜವಾಗಿ ನಾವು ನಿಮ್ಮ ಜೊತೆಯಲ್ಲೇ ಇದ್ದೇವೆ. ನಾವು ವಿಶ್ವಾಸ ವಿಡುವವರನ್ನು ಕೇವಲ ಅಪಹಾಸ್ಯ ಮಾಡುತ್ತಿದ್ದೇವೆ" ಎನ್ನುತ್ತಾರೆ.

وَإِذَا لَقُوا الَّذِينَ آمَنُوا قَالُوا آمَنَّا وَإِذَا
خَلَوْا إِلَىٰ شَيَاطِينِهِمْ قَالُوا إِنَّا مَعَكُمْ إِنَّمَا
نَحْنُ مُسْتَهْزِئُونَ ﴿١٤﴾

15. ಅಲ್ಲಾಹನು ಇವರನ್ನು ಅಪಹಾಸ್ಯ ಮಾಡುತ್ತಿದ್ದಾನೆ. ಇವರು ಈ ದ್ರೋಹದಲ್ಲಿ ಕುರುಡರಂತೆ ಅಲೆದಾಡುತ್ತಿರಲು ಇನ್ನಷ್ಟು ದೀರ್ಘ ಅವಕಾಶವನ್ನು ನೀಡುತ್ತಿದ್ದಾನೆ.

اللَّهُ يَسْتَهْزِئُ بِهِمْ وَيَمُدُّهُمْ فِي طُغْيَانِهِمْ
يَعْمَهُونَ ﴿١٥﴾

16. ಇವರು ಸನ್ಮಾರ್ಗಕ್ಕೆ ಬದಲಾಗಿ ದುರ್ಮಾರ್ಗವನ್ನು ಖರೀದಿಸಿಕೊಂಡವರಾಗಿದ್ದಾರೆ. ಆದರೆ ಈ ವ್ಯಾಪಾರ ಇವರಿಗೆ ಲಾಭದಾಯಕವಾದುದಲ್ಲ ಮತ್ತು ಇವರು ಸನ್ಮಾರ್ಗ ಸಿದ್ಧಿಸಿದವರು ಅಲ್ಲವೇ ಅಲ್ಲ.

أُولَٰئِكَ الَّذِينَ اشْتَرَوُا الضَّلَالَةَ بِالْهُدَىٰ فَمَا
رَبِحَتْ تِجَارَتُهُمْ وَمَا كَانُوا مُهْتَدِينَ ﴿١٦﴾

17. ಇವರ ಉದಾಹರಣೆ ಹೀಗಿದೆ:- ಒಬ್ಬನು ಬೆಂಕಿ ಉರಿಸಿದನು. ಸುತ್ತಮುತ್ತಲೂ ಬೆಳಗಿದಾಗ ಅಲ್ಲಾಹನು ಇವರ ದೃಷ್ಟಿಯನ್ನು ಕಿತ್ತುಕೊಂಡನು ಮತ್ತು ಇವರನ್ನು ಕತ್ತಲೆಯಲ್ಲಿ ಏನೂ ಕಾಣದ ಸ್ಥಿತಿಯಲ್ಲಿ ಬಿಟ್ಟುಬಿಟ್ಟನು.[6]

مَثَلُهُمْ كَمَثَلِ الَّذِي اسْتَوْقَدَ نَارًا فَلَمَّا
أَضَاءَتْ مَا حَوْلَهُ ذَهَبَ اللَّهُ بِنُورِهِمْ وَ
تَرَكَهُمْ فِي ظُلُمَاتٍ لَا يُبْصِرُونَ ﴿١٧﴾

18. ಇವರು ಕಿವುಡರೂ ಮೂಕರೂ ಅಂಧರೂ ಆಗಿದ್ದಾರೆ. ಇನ್ನಿವರು ಮರಳುವವರಲ್ಲ.

صُمٌّ بُكْمٌ عُمْيٌ فَهُمْ لَا يَرْجِعُونَ ﴿١٨﴾

19. ಅಥವಾ ಇವರ ಉದಾಹರಣೆ ಹೀಗಿದೆ: ಆಕಾಶದಿಂದ ಧಾರಾಕಾರವಾಗಿ ಮಳೆ ಸುರಿಯುತ್ತಲಿದೆ. ಅದರೊಂದಿಗೆ ಕಾರ್ಮೋಡ, ಗುಡುಗು, ಮಿಂಚುಗಳೂ ಇವೆ. ಇವರು ಗುಡುಗಿನ ಗರ್ಜನೆಯನ್ನು ಕೇಳಿ ಮರಣಭಯದಿಂದ ಕಿವಿಗಳಲ್ಲಿ ಬೆರಳುಗಳನ್ನು ಒತ್ತಿಟ್ಟುಕೊಳ್ಳುತ್ತಾರೆ. ಅಲ್ಲಾಹನು ಈ ಸತ್ಯನಿಷೇಧಿಗಳನ್ನು ಎಲ್ಲ ದಿಕ್ಕುಗಳಿಂದಲೂ ಆವರಿಸಿಕೊಂಡಿರುತ್ತಾನೆ.

أَوْ كَصَيِّبٍ مِنَ السَّمَاءِ فِيهِ ظُلُمَاتٌ وَرَعْدٌ
وَبَرْقٌ يَجْعَلُونَ أَصَابِعَهُمْ فِي آذَانِهِمْ مِنَ
الصَّوَاعِقِ حَذَرَ الْمَوْتِ ۚ وَاللَّهُ مُحِيطٌ بِالْكَافِرِينَ ﴿١٩﴾

6. ಅರ್ಥಾತ್- ಅಲ್ಲಾಹನ ದಾಸನೋರ್ವ ಪ್ರಕಾಶವನ್ನು ಹರಡಿ, ಸತ್ಯವನ್ನು ಮಿಥ್ಯದಿಂದ ಬೇರ್ಪಡಿಸಿ ಸ್ಪಷ್ಟವಾಗಿ ತೋರಿಸಿಕೊಟ್ಟಾಗ ದೃಷ್ಟಿಯುಳ್ಳವರ ಮುಂದೆ ವಾಸ್ತವಿಕತೆಗಳೆಲ್ಲವೂ ವ್ಯಕ್ತವಾದವು. ಆದರೆ ಸ್ವೇಚ್ಛಾವೃತ್ತಿಯಿಂದ ಕುರುಡರಾಗಿದ್ದ ಆ ಕಪಟವಿಶ್ವಾಸಿಗಳಿಗೆ, ಆ ಬೆಳಕಿನಲ್ಲೂ ಏನೂ ಕಾಣಿಸಲಿಲ್ಲ.

20. ಮಿಂಚು ಇವರ ದೃಷ್ಟಿಯನ್ನು ಕಸಿದುಕೊಳ್ಳುವಂತಿದೆ. ಅದು ಕಿಂಚಿತ್ ಬೆಳಗಿದಾಗಲೆಲ್ಲ ಅದರ ಬೆಳಕಿನಲ್ಲಿ ಇವರು ಸ್ವಲ್ಪ ದೂರ ನಡೆಯುತ್ತಾರೆ ಮತ್ತು ಇವರ ಮೇಲೆ ಕತ್ತಲೆಯು ಕವಿದಾಗ ಇವರು ನಿಂತುಬಿಡುತ್ತಾರೆ.[7] ಅಲ್ಲಾಹ್ ಬಯಸಿದ್ದರೆ ಇವರ ಶ್ರವಣ ಮತ್ತು ದೃಷ್ಟಿಗಳನ್ನು ಸಂಪೂರ್ಣವಾಗಿ ಕಸಿದುಕೊಳ್ಳುತ್ತಿದ್ದನು. ನಿಶ್ಚಯವಾಗಿಯೂ ಅಲ್ಲಾಹನು ಪ್ರತಿಯೊಂದು ವಸ್ತುವಿನ ಮೇಲೆ ಸಾಮರ್ಥ್ಯವನ್ನು ಹೊಂದಿದ್ದಾನೆ.

يَكَادُ الْبَرْقُ يَخْطَفُ أَبْصَارَهُمْ ۖ كُلَّمَا أَضَاءَ لَهُم مَّشَوْا
فِيهِ وَإِذَا أَظْلَمَ عَلَيْهِمْ قَامُوا ۚ وَلَوْ شَاءَ اللَّهُ لَذَهَبَ
بِسَمْعِهِمْ وَأَبْصَارِهِمْ ۚ إِنَّ اللَّهَ عَلَىٰ كُلِّ شَيْءٍ قَدِيرٌ ٢٠

21. ಹೇ ಜನರೇ, ನಿಮ್ಮನ್ನೂ ನಿಮ್ಮ ಪೂರ್ವಿಕರನ್ನೂ ಸೃಷ್ಟಿಸಿದ ನಿಮ್ಮ ಪ್ರಭುವಿನ ದಾಸ್ಯ-ಆರಾಧನೆ ಮಾಡಿರಿ. (ಹೀಗೆ ಮಾಡಿದರೆ) ನೀವು ರಕ್ಷಣೆ ಹೊಂದಬಹುದು.[8]

يَا أَيُّهَا النَّاسُ اعْبُدُوا رَبَّكُمُ الَّذِي خَلَقَكُمْ
وَالَّذِينَ مِن قَبْلِكُمْ لَعَلَّكُمْ تَتَّقُونَ ٢١

22. ಅವನೇ ಭೂಮಿಯನ್ನು ನಿಮಗೆ ಹಾಸನ್ನಾಗಿ ಹಾಸಿದನು; ಆಕಾಶದ ಮೇಲ್ಛಾವಣಿ ಮಾಡಿದನು; ಮೇಲ್ಭಾಗದಿಂದ ಮಳೆ ಸುರಿಸಿದನು. ಅದರ ಮೂಲಕ ತರತರದ ಬೆಳೆಗಳನ್ನು ಉತ್ಪಾದಿಸಿ ನಿಮಗೆ ಆಹಾರ ಒದಗಿಸಿದನು. ಇದನ್ನು ನೀವು ಅರಿತಿರುತ್ತ ಇತರರನ್ನು ಅಲ್ಲಾಹನಿಗೆ ಪ್ರತಿಸ್ಪರ್ಧಿಗಳನ್ನಾಗಿ ಮಾಡದಿರಿ.[9]

الَّذِي جَعَلَ لَكُمُ الْأَرْضَ فِرَاشًا وَالسَّمَاءَ
بِنَاءً وَأَنزَلَ مِنَ السَّمَاءِ مَاءً فَأَخْرَجَ بِهِ
مِنَ الثَّمَرَاتِ رِزْقًا لَّكُمْ ۖ فَلَا تَجْعَلُوا
لِلَّهِ أَندَادًا وَأَنتُمْ تَعْلَمُونَ ٢٢

23. ನಾವು ನಮ್ಮ ದಾಸನಿಗೆ ಅವತೀರ್ಣಗೊಳಿಸಿದ ಈ ಗ್ರಂಥವು ನಮ್ಮದೋ ಅಲ್ಲವೋ ಎಂಬ ವಿಷಯದಲ್ಲಿ ನಿಮಗೆ ಸಂದೇಹವಿದ್ದರೆ ಇದಕ್ಕೆ ಸರಿಸಮಾನವಾದ ಒಂದು ಅಧ್ಯಾಯ ವನ್ನಾದರೂ ರಚಿಸಿ ತನ್ನಿರಿ. ಅಲ್ಲಾಹನ ಹೊರತು ನಿಮ್ಮೆಲ್ಲ ಸಾಕ್ಷಿಗಳನ್ನೂ ನಿಮ್ಮ ಸಹಾಯಕ್ಕಾಗಿ ಕರೆದು ತನ್ನಿರಿ. ನೀವು ಸತ್ಯವಾದಿಗಳಾಗಿದ್ದರೆ ಈ ಕಾರ್ಯವನ್ನು ಮಾಡಿ ತೋರಿಸಿರಿ.

وَإِن كُنتُمْ فِي رَيْبٍ مِّمَّا نَزَّلْنَا عَلَىٰ عَبْدِنَا
فَأْتُوا بِسُورَةٍ مِّن مِّثْلِهِ وَادْعُوا شُهَدَاءَكُم
مِّن دُونِ اللَّهِ إِن كُنتُمْ صَادِقِينَ ٢٣

24. ಆದರೆ ನೀವು ಹಾಗೆ ಮಾಡದಿದ್ದಲ್ಲಿ- ಮತ್ತು ಖಂಡಿತವಾಗಿಯೂ ನೀವು ಹಾಗೆಂದೂ ಮಾಡಲಾರಿರಿ- ಸತ್ಯನಿಷೇಧಿಗಳಿಗಾಗಿ

فَإِن لَّمْ تَفْعَلُوا وَلَن تَفْعَلُوا فَاتَّقُوا النَّارَ الَّتِي

---

7. ಮೊದಲ ಉದಾಹರಣೆಯು, ಮನಸ್ಸಿನಲ್ಲಿ ಸಂಪೂರ್ಣ ನಿರಾಕರಣೆಯಿದ್ದರೂ ಯಾವುದಾದರೂ ಸ್ವಾರ್ಥ ಅಥವಾ ದುರುದ್ದೇಶದಿಂದ ಮುಸ್ಲಿಮರಾಗಿ ಬಿಟ್ಟ ಕಪಟವಿಶ್ವಾಸಿಗಳ ಕುರಿತಾಗಿದೆ. ಈ ಎರಡನೆಯ ಉದಾಹರಣೆಯು ಸಂಶಯ, ಚಂಚಲತೆ ಮತ್ತು ದುರ್ಬಲ ವಿಶ್ವಾಸಕ್ಕೆ ಒಳಗಾದವರ ಕುರಿತಾಗಿದೆ. ಅವರು ಸ್ವಲ್ಪ ಮಟ್ಟಿಗೆ ಸತ್ಯವನ್ನು ನಂಬುವವರಾಗಿದ್ದರು. ಆದರೆ ಅವರು ಸತ್ಯಕ್ಕಾಗಿ ಎಂತಹ ಕಷ್ಟಕಾರ್ಪಣ್ಯಗಳನ್ನೂ ಸಹಿಸಲು ಸಿದ್ಧರಿರಲಿಲ್ಲ.

8. ಅಂದರೆ ಲೋಕದಲ್ಲಿ ಕೆಟ್ಟ ದೃಷ್ಟಿ ಮತ್ತು ದುಷ್ಕೃತ್ಯದಿಂದ ಹಾಗೂ ಪರಲೋಕದಲ್ಲಿ ದೇವಶಿಕ್ಷೆಯಿಂದ ಸುರಕ್ಷಿತರಾಗಬಹುದು.

9. ಇತರರನ್ನು ಅಲ್ಲಾಹನ ಪ್ರತಿಸ್ಪರ್ಧಿಗಳನ್ನಾಗಿ ಮಾಡುವುದೆಂದರೆ ದಾಸ್ಯ ಮತ್ತು ಆರಾಧನೆಯ ವಿವಿಧ ಪ್ರಕಾರಗಳಲ್ಲಿ ಯಾವುದಾದರೊಂದು ಪ್ರಕಾರದ ಮೂಲಕ ದೇವೇತರರೊಂದಿಗೆ ವ್ಯವಹರಿಸುವುದು.

ಸಿದ್ಧಗೊಳಿಸಲ್ಪಟ್ಟಿರುವ ಹಾಗೂ ಮನುಷ್ಯರನ್ನೂ ಶಿಲೆಗಳನ್ನೂ[10] ಇಂಧನವಾಗಿ ಉರಿಸುವ ಆ ನರಕವನ್ನು ಭಯಪಡಿರಿ.

وَقُودُهَا النَّاسُ وَالْحِجَارَةُ ۖ أُعِدَّتْ لِلْكَافِرِينَ ﴿٢٤﴾

25. ಪೈಗಂಬರರೇ, ಈ ಗ್ರಂಥದ ಮೇಲೆ ವಿಶ್ವಾಸವಿರಿಸಿ (ಅದರಂತೆ) ತಮ್ಮ ಕರ್ಮಗಳನ್ನು ಸರಿಪಡಿಸಿಕೊಳ್ಳುವವರಿಗಾಗಿ ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವ ಸ್ವರ್ಗೋದ್ಯಾನಗಳಿವೆ ಎಂಬ ಸುವಾರ್ತೆಯನ್ನು ಕೊಡಿರಿ. ಆ ಉದ್ಯಾನಗಳ ಫಲಗಳು ಇಹಲೋಕದ ಫಲಗಳನ್ನು ಹೋಲುತ್ತಿರುವುವು. ಅವರಿಗೆ ಆ ಫಲಗಳನ್ನು ತಿನ್ನಲು ಕೊಡಲಾದಾಗ ಅವರು, "ಇಂತಹ ಫಲಗಳೇ ಈ ಮುಂಚೆ ಭೂಲೋಕದಲ್ಲಿ ನಮಗೆ ಕೊಡಲಾಗುತ್ತಿದ್ದುವು" ಎಂದು ಹೇಳುವರು. ಅವರಿಗೆ ಅಲ್ಲಿ ಪರಿಶುದ್ಧ ಪತ್ನಿಯರಿರುವರು ಮತ್ತು ಅವರು ಅಲ್ಲಿ ಸದಾ ಕಾಲ ಇರುವರು.

وَبَشِّرِ الَّذِينَ آمَنُوا وَعَمِلُوا الصَّالِحَاتِ أَنَّ لَهُمْ
جَنَّاتٍ تَجْرِي مِن تَحْتِهَا الْأَنْهَارُ ۖ كُلَّمَا رُزِقُوا
مِنْهَا مِن ثَمَرَةٍ رِّزْقًا ۙ قَالُوا هَٰذَا الَّذِي
رُزِقْنَا مِن قَبْلُ ۖ وَأُتُوا بِهِ مُتَشَابِهًا ۖ وَلَهُمْ
فِيهَا أَزْوَاجٌ مُّطَهَّرَةٌ ۖ وَهُمْ فِيهَا خَالِدُونَ ﴿٢٥﴾

26. ಅಹುದು, ಅಲ್ಲಾಹನು ನುಸಿ ಅಥವಾ ಅದಕ್ಕಿಂತಲೂ ಕ್ಷುಲ್ಲಕ ವಸ್ತುವಿನ ಉಪಮೆ ಕೊಡುವ ಬಗ್ಗೆ ನಾಚುವುದಿಲ್ಲ.[11] "ಸತ್ಯವನ್ನು ಸ್ವೀಕರಿಸುವವರು ಈ ಉಪಮೆಗಳನ್ನು ಕಂಡು, ಇದು ಅವರ ಪ್ರಭುವಿನ ಕಡೆಯಿಂದಲೇ ಬಂದ ಪರಮಾರ್ಥವಾಗಿದೆ ಎಂದು ಗ್ರಹಿಸುತ್ತಾರೆ ಮತ್ತು ನಿಷೇಧಿಸುವವರು ಇವುಗಳನ್ನು ಕೇಳಿ, "ಇಂತಹ ಉಪಮೆಗಳೊಂದಿಗೆ ಅಲ್ಲಾಹನಿಗೇನು ಸಂಬಂಧ?" ಎನ್ನುತ್ತಾರೆ. ಹೀಗೆ ಅಲ್ಲಾಹನು ಒಂದೇ ವಿಷಯದ ಮೂಲಕ ಅನೇಕರನ್ನು ಮಾರ್ಗಭ್ರಷ್ಟರನ್ನಾಗಿ ಮಾಡುತ್ತಾನೆ ಮತ್ತು ಅನೇಕರಿಗೆ ಸನ್ಮಾರ್ಗ ತೋರಿಸುತ್ತಾನೆ. ಅವನು ಧರ್ಮಭ್ರಷ್ಟ(ಫಾಸಿಕ)[12]ರನ್ನು ಮಾತ್ರ ಮಾರ್ಗಭ್ರಷ್ಟರನ್ನಾಗಿ ಮಾಡುತ್ತಾನೆ.

إِنَّ اللَّهَ لَا يَسْتَحْيِي أَن يَضْرِبَ مَثَلًا مَّا بَعُوضَةً
فَمَا فَوْقَهَا ۚ فَأَمَّا الَّذِينَ آمَنُوا فَيَعْلَمُونَ أَنَّهُ
الْحَقُّ مِن رَّبِّهِمْ ۖ وَأَمَّا الَّذِينَ كَفَرُوا فَيَقُولُونَ
مَاذَا أَرَادَ اللَّهُ بِهَٰذَا مَثَلًا ۘ يُضِلُّ بِهِ كَثِيرًا وَ
يَهْدِي بِهِ كَثِيرًا ۚ وَمَا يُضِلُّ بِهِ إِلَّا الْفَاسِقِينَ ﴿٢٦﴾

الربع

27. ಅಲ್ಲಾಹನ ಜೊತೆ ದೃಢವಾದ ಕರಾರು ಮಾಡಿಕೊಂಡ ಬಳಿಕ ಅದನ್ನು ಮುರಿದು ಹಾಕುವವರು,[13] ಅಲ್ಲಾಹನು ಜೋಡಿಸಲು

الَّذِينَ يَنقُضُونَ عَهْدَ اللَّهِ مِن بَعْدِ مِيثَاقِهِ

10. ಅರ್ಥಾತ್- ಅಲ್ಲಿ ನೀವು ಮಾತ್ರ ನರಕದ ಉರುವಲಾಗಿ ಮಾರ್ಪಡುವುದಲ್ಲ. ನೀವು ದಾಸ್ಯ ಮತ್ತು ಸಾಷ್ಟಾಂಗಕ್ಕೆ ಅರ್ಹರೆಂದು ಭಾವಿಸುತ್ತಿದ್ದ ವಿಗ್ರಹಗಳೂ ನಿಮ್ಮ ಜತೆಗಿರುವುದು.

11. ಇಲ್ಲಿ ಒಂದು ಆಕ್ಷೇಪದ ಪ್ರಸ್ತಾಪ ಮಾಡದೆ ಅದಕ್ಕೆ ಉತ್ತರ ನೀಡಲಾಗಿದೆ. ಕುರ್‌ಆನಿನ ವಿವಿಧೆಡೆಗಳಲ್ಲಿ ವಿಷಯದ ನಿರೂಪಣೆಗಾಗಿ ಜೇಡ, ನೊಣ, ಸೊಳ್ಳೆ ಮುಂತಾದುವುಗಳ ಉದಾಹರಣೆ ಕೊಡಲಾಗಿದೆ. ಇಂತಹ ಕ್ಷುಲ್ಲಕ ಉದಾಹರಣೆಗಳನ್ನು ಪ್ರಸ್ತಾಪಿಸಿರುವ ದೇವಗ್ರಂಥವಾದರೂ ಎಂತಹುದು ಎಂಬುದು ವಿರೋಧಿಗಳ ಆಕ್ಷೇಪವಾಗಿತ್ತು.

12. ಧರ್ಮಭ್ರಷ್ಟ(ಫಾಸಿಕ್)ರು ಎಂದರೆ ಆಜ್ಞೋಲ್ಲಂಘಕರು ಮತ್ತು ದೇವಾನುಸರಣೆಯ ಎಲ್ಲೆ ಮೀರಿ ವರ್ತಿಸುವವರು.

13. ರಾಜನು ತನ್ನ ಸೇವಕರು ಮತ್ತು ಪ್ರಜೆಗಳಿಗಾಗಿ ಹೊರಡಿಸುವ ಆದೇಶ ಅಥವಾ ಮಾರ್ಗಸೂಚಿಗಳನ್ನು ಅರಬಿ ಭಾಷೆಯಲ್ಲಿ 'ಅಹ್ದ್' ಅಥವಾ ಕರಾರು ಎನ್ನಲಾಗುತ್ತದೆ. ಅಲ್ಲಾಹನ 'ಅಹ್ದ್' ಎಂದರೆ ಅವನ ಸ್ಥಿರ ಆದೇಶವಾಗಿದೆ. ಅದರ ಮೂಲಕ ಸಮಸ್ತ ಮಾನವಕುಲ

ಆಜ್ಞಾಪಿಸಿದುದನ್ನು ಮುರಿದು ಹಾಕುವವರು[14] ಮತ್ತು ಭೂಮಿಯ ಮೇಲೆ ಕ್ಷೋಭೆಯನ್ನುಂಟು ಮಾಡುವವರು. ಯಥಾರ್ಥವಾಗಿ ಇವರೇ ನಷ್ಟಕ್ಕೊಳಗಾಗುವವರು.

وَيَقْطَعُونَ مَآ أَمَرَ ٱللَّهُ بِهِۦٓ أَن يُوصَلَ وَيُفْسِدُونَ
فِى ٱلْأَرْضِ ۚ أُو۟لَٰٓئِكَ هُمُ ٱلْخَٰسِرُونَ ﴿٢٧﴾

28. ನೀವು ಅಲ್ಲಾಹನನ್ನು ಹೇಗೆ ನಿರಾಕರಿಸುತ್ತೀರಿ? ನೀವಾದರೋ ನಿರ್ಜೀವಿಗಳಾಗಿದ್ದಿರಿ. ಅವನು ನಿಮಗೆ ಜೀವವಿತ್ತನು. ಇನ್ನು ಅವನೇ ನಿಮ್ಮ ಪ್ರಾಣ ತೆಗೆಯುವನು ಮತ್ತು ಅವನೇ ನಿಮಗೆ ಪುನರ್ಜೀವನ ನೀಡುವನು. ತರುವಾಯ ನಿಮಗೆ ಆತನೆಡೆಗೇ ಮರಳಿ ಹೋಗಬೇಕಾಗಿದೆ.

كَيْفَ تَكْفُرُونَ بِٱللَّهِ وَكُنتُمْ أَمْوَٰتًا فَأَحْيَٰكُمْ ۖ
ثُمَّ يُمِيتُكُمْ ثُمَّ يُحْيِيكُمْ ثُمَّ إِلَيْهِ تُرْجَعُونَ ﴿٢٨﴾

29. ಭೂಮಿಯಲ್ಲಿರುವುದನ್ನೆಲ್ಲ ನಿಮಗಾಗಿಯೇ ಸೃಷ್ಟಿಸಿದವನು ಆತನೇ. ಬಳಿಕ ಗಗನದೆಡೆ ಗಮನ ಹರಿಸಿ ಸಪ್ತಗಗನಗಳಿಗೆ[15] ರೂಪು ಕೊಟ್ಟನು. ಆತನು ಸಕಲ ವಿಷಯಗಳ ಜ್ಞಾನಿಯಾಗಿರುತ್ತಾನೆ.

هُوَ ٱلَّذِى خَلَقَ لَكُم مَّا فِى ٱلْأَرْضِ جَمِيعًا ثُمَّ
ثُمَّ ٱسْتَوَىٰٓ إِلَى ٱلسَّمَآءِ فَسَوَّىٰهُنَّ سَبْعَ
سَمَٰوَٰتٍ ۚ وَهُوَ بِكُلِّ شَىْءٍ عَلِيمٌ ﴿٢٩﴾ ٣ع٩ ٢

30. ನಿಮ್ಮ ಪ್ರಭುವು ಮಲಾಯಿಕಃ(ದೇವಚರ)ರೊಡನೆ, "ನಾನು ಭೂಮಿಯಲ್ಲಿ ಒಬ್ಬ ಖಲೀಫಃನನ್ನು[16] (ಪ್ರತಿನಿಧಿ) ನೇಮಿಸಲಿದ್ದೇನೆ" ಎಂದು ಹೇಳಿದ ಸಂದರ್ಭವನ್ನು ಕೊಂಚ ಊಹಿಸಿರಿ. ಅವರು, (ಹೀಗೆ) ನಿವೇದಿಸಿದರು: "ಭೂಮಿಯಲ್ಲಿ ಅದರ ವ್ಯವಸ್ಥೆಯನ್ನು ಕೆಡಿಸುವ ಹಾಗೂ ರಕ್ತಪಾತವೆಸಗುವವನನ್ನು ನೀನು ನೇಮಿಸುವೆಯಾ? ನಾವಂತೂ ನಿನ್ನ ಗುಣಗಾನ ಮಾಡುತ್ತಿರುವುದರೊಂದಿಗೆ ನಿನ್ನನ್ನು ಸ್ತುತಿಸುತ್ತಲೂ ನಿನ್ನ ಪರಿಶುದ್ಧತೆಯನ್ನು ಕೊಂಡಾಡುತ್ತಲೂ ಇದ್ದೇವೆ." ಆಗ ಆತನು ಹೇಳಿದನು, "ವಾಸ್ತವದಲ್ಲಿ ನೀವು ಅರಿಯದುದನ್ನು ನಾನು ಅರಿತಿದ್ದೇನೆ."

وَإِذْ قَالَ رَبُّكَ لِلْمَلَٰٓئِكَةِ إِنِّى جَاعِلٌ فِى ٱلْأَرْضِ
خَلِيفَةً ۖ قَالُوٓا۟ أَتَجْعَلُ فِيهَا مَن يُفْسِدُ فِيهَا
وَيَسْفِكُ ٱلدِّمَآءَ وَنَحْنُ نُسَبِّحُ بِحَمْدِكَ وَ
نُقَدِّسُ لَكَ ۖ قَالَ إِنِّىٓ أَعْلَمُ مَا لَا تَعْلَمُونَ ﴿٣٠﴾

31. ಅನಂತರ ಅಲ್ಲಾಹನು ಆದಮರಿಗೆ ಸಕಲ ವಸ್ತುಗಳ ನಾಮಗಳನ್ನು

وَعَلَّمَ ءَادَمَ ٱلْأَسْمَآءَ كُلَّهَا ثُمَّ عَرَضَهُمْ عَلَى ٱلْمَلَٰٓئِكَةِ

ಕೇವಲ ಅವನ ದಾಸ್ಯ, ಅನುಸರಣೆ ಮತ್ತು ಆರಾಧನೆಗಾಗಿ ನಿಯುಕ್ತಗೊಂಡಿದೆ. "ದೃಢವಾದ ಕರಾರನ್ನು ಮಾಡಿಕೊಂಡ ಬಳಿಕ" ಎಂಬುದು- ಆದಮ್‌ರನ್ನು(ಅ) ಸೃಷ್ಟಿಸಿದಾಗ ಸರ್ವಮಾನವ ಕುಲದಿಂದ ಈ ಆದೇಶ ಪಾಲನೆಯ ವಾಗ್ದಾನಪಡೆಯಲಾಗಿರುವುದರ ಕಡೆಗೆ ಸೂಚನೆಯಾಗಿದೆ. ಈ ಕುರಿತು ಸೂರಃ ಅಲ್ ಅಅ್‌ರಾಫ್‌ನ 172ನೆಯ ಸೂಕ್ತದಲ್ಲಿ ಪ್ರಸ್ತಾಪವಿದೆ.

14. ಅರ್ಥಾತ್ ಯಾವ ಸಂಬಂಧಗಳ ಸ್ಥಾಪನೆ ಮತ್ತು ಸ್ಥಿರತೆಯಲ್ಲಿ ಮಾನವನ ವೈಯಕ್ತಿಕ ಮತ್ತು ಸಾಮೂಹಿಕ ಅಭ್ಯುದಯ ಅಡಕವಾಗಿದೆಯೋ ಮತ್ತು ಯಾವ ಸಂಬಂಧಗಳನ್ನು ಸರಿಪಡಿಸಲು ಸ್ವತಃ ಅಲ್ಲಾಹನೇ ಆದೇಶಿಸಿದ್ದಾನೋ ಆ ಸಂಬಂಧಗಳಲ್ಲಿ ಇವರು ಹುಳಿ ಹಿಂಡುತ್ತಾರೆ.

15. ಏಳು ಆಕಾಶಗಳಲ್ಲಿ ವಾಸ್ತವಿಕತೆ ಏನೆಂದು ನಿರ್ಧರಿಸುವುದು ಕಷ್ಟ. ಮನುಷ್ಯ ಎಲ್ಲಾ ಕಾಲಗಳಲ್ಲಿ ಆಕಾಶ ಅಥವಾ ನಭೋಮಂಡಲದ ಬಗ್ಗೆ ತನ್ನ ವೀಕ್ಷಣೆ ಮತ್ತು ಊಹೆಯ ಆಧಾರದಲ್ಲಿ ವಿಭಿನ್ನ ಕಲ್ಪನೆಗಳನ್ನು ಇರಿಸುತ್ತಾ ಬಂದಿದ್ದಾನೆ. ಅದು ನಿರಂತರ ಬದಲಾಗುತ್ತಾ ಬಂದಿದೆ. ಒಟ್ಟಿನಲ್ಲಿ ಅದರ ಅರ್ಥ ಭೂಮಿಯಿಂದ ಹೊರತಾದ ಅಗಾಧ ವಿಶ್ವವನ್ನು ಅಲ್ಲಾಹನು ನಿಖರವಾದ ಏಳು ವಿಭಾಗಗಳಲ್ಲಿ ವಿಂಗಡಿಸಿದ್ದಾನೆ ಅಥವಾ ಭೂಮಿ ವಿಶ್ವದ ಯಾವ ಭಾಗದಲ್ಲಿ ನೆಲೆನಿಂತಿದೆಯೋ, ಅದು ಏಳು ವಿಭಾಗಗಳನ್ನೊಳಗೊಂಡಿದೆ ಎಂದಾಗಿರಬಹುದು.

16. ಖಲೀಫ (ಪ್ರತಿನಿಧಿ): ಒಬ್ಬನ ಸೊತ್ತಿನಲ್ಲಿ ಪ್ರತಿನಿಧಿ ಎಂಬ ನೆಲೆಯಲ್ಲಿ ಅವನು ನೀಡಿದ ಅಧಿಕಾರಗಳನ್ನು ಉಪಯೋಗಿಸುವವನು.

ಕಲಿಸಿದನು. ತರುವಾಯ ಅವರನ್ನು ದೇವಚರರ ಮುಂದೆ ತಂದು ಹೇಳಿದನು, "(ಓರ್ವ ಪ್ರತಿನಿಧಿಯ ನೇಮಕದಿಂದ ವ್ಯವಸ್ಥೆಯು ಕೆಟ್ಟು ಹೋಗುವುದೆಂಬ) ನಿಮ್ಮ ಭಾವನೆಯು ದಿಟವೆಂದಾದರೆ, ಈ ವಸ್ತುಗಳ ಹೆಸರುಗಳನ್ನು ನನಗೆ ತಿಳಿಸಿರಿ"-

فَقَالَ أَنۢبِـُٔونِى بِأَسْمَآءِ هَٰٓؤُلَآءِ إِن كُنتُمْ صَٰدِقِينَ ٣١

32. ಅವರು ಹೇಳಿದರು, "ನೀನು ಮಹಾ ಮಹಿಮನು, ನಮಗಂತು ನೀನು ಕಲಿಸಿ ಕೊಟ್ಟಷ್ಟು ಜ್ಞಾನ ಮಾತ್ರ ಇದೆ. ನಿಶ್ಚಯವಾಗಿಯೂ ನೀನು ಜ್ಞಾನಪೂರ್ಣನೂ ಯುಕ್ತಿಪೂರ್ಣನೂ ಆಗಿರುತ್ತೀ."

قَالُوا۟ سُبْحَٰنَكَ لَا عِلْمَ لَنَآ إِلَّا مَا عَلَّمْتَنَآ ۖ إِنَّكَ أَنتَ ٱلْعَلِيمُ ٱلْحَكِيمُ ٣٢

33. ಆ ಬಳಿಕ ಅಲ್ಲಾಹ್ ಆದಮರೊಡನೆ ಇಂತೆಂದನು- "ನೀನು ಇವರಿಗೆ ಈ ವಸ್ತುಗಳ ಹೆಸರುಗಳನ್ನು ಹೇಳಿ ತೋರಿಸು." ಅವರು(ಆದಮರು) ಅವರಿಗೆ ಅವುಗಳ ನಾಮಗಳನ್ನು ಹೇಳಿ ತೋರಿಸಿದರು. ಆಗ ಅಲ್ಲಾಹನು ಹೀಗೆಂದನು, "ನಿಮಗೆ ಅಗೋಚರವಾಗಿರುವ ಆಕಾಶಗಳ ಮತ್ತು ಭೂಮಿಯ ಎಲ್ಲ ಯಥಾರ್ಥಗಳನ್ನು ನಾನು ಬಲ್ಲವನಾಗಿರುತ್ತೇನೆಂದೂ ನೀವು ಬಹಿರಂಗಗೊಳಿಸುವುದನ್ನೂ ಮರೆಮಾಚುವುದನ್ನೂ ನಾನು ಬಲ್ಲವನಾಗಿರುತ್ತೇನೆಂದೂ ನಿಮ್ಮೊಡನೆ ಹೇಳಿರಲಿಲ್ಲವೇ?"

قَالَ يَٰٓـَٔادَمُ أَنۢبِئْهُم بِأَسْمَآئِهِمْ ۖ فَلَمَّآ أَنۢبَأَهُم بِأَسْمَآئِهِمْ قَالَ أَلَمْ أَقُل لَّكُمْ إِنِّىٓ أَعْلَمُ غَيْبَ ٱلسَّمَٰوَٰتِ وَٱلْأَرْضِ وَأَعْلَمُ مَا تُبْدُونَ وَمَا كُنتُمْ تَكْتُمُونَ ٣٣

34. ತರುವಾಯ, "ಆದಮರ ಮುಂದೆ ಬಾಗಿರಿ" ಎಂದು ನಾವು ದೇವಚರರಿಗೆ ಆಜ್ಞಾಪಿಸಿದಾಗ- ಎಲ್ಲರೂ ಬಾಗಿದರು. ಆದರೆ ಇಬ್‌ಲೀಸನು ನಿರಾಕರಿಸಿದನು. ಅವನು ತನ್ನ ಶ್ರೇಷ್ಠತೆಯ ದುರಹಂಕಾರದಲ್ಲಿ ಬಿದ್ದು ಅವಿಧೇಯರಲ್ಲಾದನು.

وَإِذْ قُلْنَا لِلْمَلَٰٓئِكَةِ ٱسْجُدُوا۟ لِـَٔادَمَ فَسَجَدُوٓا۟ إِلَّآ إِبْلِيسَ أَبَىٰ وَٱسْتَكْبَرَ وَكَانَ مِنَ ٱلْكَٰفِرِينَ ٣٤

35. ಆ ಬಳಿಕ ನಾವು ಆದಮರೊಡನೆ, "ನೀನು ಮತ್ತು ನಿನ್ನ ಪತ್ನಿ- ಇಬ್ಬರೂ ಸ್ವರ್ಗದಲ್ಲಿರಿ ಮತ್ತು ಅಲ್ಲಿ ನೀವು ಇಚ್ಛಿಸಿದ್ದೆಲ್ಲವನ್ನೂ ಬೇಕಷ್ಟು ಉಣ್ಣಿರಿ. ಆದರೆ, ಆ ವೃಕ್ಷವನ್ನು ಸಮೀಪಿಸಬಾರದು. ಅನ್ಯಥಾ ಅಕ್ರಮಿಗಳಾಗುವಿರಿ" ಎಂದೆವು.

وَقُلْنَا يَٰٓـَٔادَمُ ٱسْكُنْ أَنتَ وَزَوْجُكَ ٱلْجَنَّةَ وَكُلَا مِنْهَا رَغَدًا حَيْثُ شِئْتُمَا وَلَا تَقْرَبَا هَٰذِهِ ٱلشَّجَرَةَ فَتَكُونَا مِنَ ٱلظَّٰلِمِينَ ٣٥

36. ಕೊನೆಗೆ ಶೈತಾನನು ಅವರಿಬ್ಬರನ್ನೂ ಆ ವೃಕ್ಷದ ಕಡೆಗೆ ಪ್ರೇರೇಪಿಸಿ ನಮ್ಮ ಆಜ್ಞಾಪಾಲನೆಯಿಂದ ತಡೆದುದಲ್ಲದೆ, ಅವರು ಹಿಂದೆ ಇದ್ದ ಸ್ಥಿತಿಯಿಂದ ಅವರನ್ನು ಹೊರತಂದುಬಿಟ್ಟನು. ಆಗ, "ನೀವಿನ್ನು ಇಲ್ಲಿಂದ ಹೊರಗಿಳಿಯಿರಿ. ನೀವು ಪರಸ್ಪರ ಶತ್ರುಗಳಾಗಿರುತ್ತೀರಿ ಮತ್ತು ನಿಮಗೆ ಒಂದು ನಿರ್ದಿಷ್ಟ ಕಾಲದವರೆಗೆ ಭೂಮಿಯ ಮೇಲಿದ್ದು ಅಲ್ಲಿ ಜೀವಿಸಬೇಕಾದೀತು" ಎಂದು ನಾವು ಆಜ್ಞಾಪಿಸಿದೆವು.

فَأَزَلَّهُمَا ٱلشَّيْطَٰنُ عَنْهَا فَأَخْرَجَهُمَا مِمَّا كَانَا فِيهِ ۖ وَقُلْنَا ٱهْبِطُوا۟ بَعْضُكُمْ لِبَعْضٍ عَدُوٌّ ۖ وَلَكُمْ فِى ٱلْأَرْضِ مُسْتَقَرٌّ وَمَتَٰعٌ إِلَىٰ حِينٍ ٣٦

37. ಆಗ ಆದಮ್ ತನ್ನ ಪ್ರಭುವಿನಿಂದ ಕೆಲವು ಮಾತುಗಳನ್ನು ಕಲಿತುಕೊಂಡು ಪಶ್ಚಾತ್ತಾಪ ಪ್ರಕಟಿಸಿದರು. ಅದನ್ನು ಅವರ ಪ್ರಭುವು ಸ್ವೀಕರಿಸಿದನು. ಏಕೆಂದರೆ, ಅವನು ಮಹಾಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

فَتَلَقّٰۤى اٰدَمُ مِنۡ رَّبِّهٖ كَلِمٰتٍ فَتَابَ عَلَيۡهِ‌ؕ
اِنَّهٗ هُوَ التَّوَّابُ الرَّحِيۡمُ ﴿۳۷﴾

38. ನಾವಂದೆವು, "ನೀವೆಲ್ಲರೂ ಇಲ್ಲಿಂದ ಹೊರಗಿಳಿಯಿರಿ. ಮುಂದೆ ನನ್ನ ಕಡೆಯಿಂದ ಮಾರ್ಗದರ್ಶನವು ನಿಮ್ಮ ಬಳಿ ಬಂದಾಗ, ಯಾರು ಆ ಮಾರ್ಗದರ್ಶನದಂತೆ ನಡೆಯುವರೋ ಅವರಿಗೆ ಯಾವುದೇ ಭಯ ಮತ್ತು ಚಿಂತೆ ಇರಲಾರದು."

قُلۡنَا اهۡبِطُوۡا مِنۡهَا جَمِيۡعًا ‌ۚ فَاِمَّا يَاۡتِيَنَّكُمۡ
مِّنِّىۡ هُدًى فَمَنۡ تَبِعَ هُدَاىَ فَلَا خَوۡفٌ
عَلَيۡهِمۡ وَلَا هُمۡ يَحۡزَنُوۡنَ ﴿۳۸﴾

39. ಆ ಮಾರ್ಗದರ್ಶನವನ್ನು ಮಾನ್ಯಮಾಡಲು ನಿರಾಕರಿಸುವವರೂ ನಮ್ಮ 'ದೃಷ್ಟಾಂತ'ಗಳನ್ನು ಸುಳ್ಳಾಗಿಸುವವರೂ ನರಕಾಗ್ನಿಯಲ್ಲಿ ಬೀಳುವವರಾಗಿದ್ದು ಅಲ್ಲಿ ಅವರು ಸದಾ ಕಾಲವೂ ಇರುವರು.

وَالَّذِيۡنَ كَفَرُوۡا وَكَذَّبُوۡا بِاٰيٰتِنَآ اُولٰٓـئِكَ اَصۡحٰبُ
النَّارِ‌ۚ هُمۡ فِيۡهَا خٰلِدُوۡنَ ﴿۳۹﴾

40. ಓ ಇಸ್ರಾಈಲ್ ಸಂತತಿಯವರೇ,[17] ನಾನು ನಿಮಗೆ ದಯಪಾಲಿಸಿದ ನನ್ನ ಕೊಡುಗೆಗಳನ್ನು ಸ್ಮರಿಸಿರಿ. ನನ್ನೊಡನೆ ನೀವು ಮಾಡಿದ ಕರಾರನ್ನು ಪೂರೈಸಿದರೆ ನಿಮ್ಮೊಡನೆ ಮಾಡಿದ್ದ ಕರಾರನ್ನು ನಾನೂ ಪೂರೈಸುವೆನು ಮತ್ತು ನನ್ನನ್ನು ಮಾತ್ರ ಭಯಪಡಿರಿ.

يٰبَنِىۡٓ اِسۡرَآءِيۡلَ اذۡكُرُوۡا نِعۡمَتِىَ الَّتِىۡٓ اَنۡعَمۡتُ
عَلَيۡكُمۡ وَاَوۡفُوۡا بِعَهۡدِىۡٓ اُوۡفِ بِعَهۡدِكُمۡ‌ۚ
وَاِيَّاىَ فَارۡهَبُوۡنِ ﴿۴۰﴾

41. ನಾನು ಕಳುಹಿಸಿದ ಗ್ರಂಥದ ಮೇಲೆ ವಿಶ್ವಾಸವಿಡಿರಿ. ಈ ಗ್ರಂಥವು ಈ ಮೊದಲೇ ನಿಮ್ಮ ಬಳಿಯಲ್ಲಿರುವ ಗ್ರಂಥವನ್ನು ಸಮರ್ಥಿಸುತ್ತದೆ. ಆದುದರಿಂದ ಅದನ್ನು ನಿಷೇಧಿಸುವವರಲ್ಲಿ ನೀವೇ ಮೊದಲಿಗರಾಗಬೇಡಿರಿ. ನನ್ನ ವಚನಗಳನ್ನು ಅಲ್ಪ ಬೆಲೆಗೆ ವಿಕ್ರಯಿಸಬೇಡಿರಿ[18] ಮತ್ತು ನನ್ನ ಕ್ರೋಧಕ್ಕೆ ಭಯಪಡಿರಿ.

وَاٰمِنُوۡا بِمَآ اَنۡزَلۡتُ مُصَدِّقًا لِّمَا مَعَكُمۡ وَلَا
تَكُوۡنُوۡٓا اَوَّلَ كَافِرٍۢ بِهٖ‌ۖ وَلَا تَشۡتَرُوۡا بِاٰيٰتِىۡ ثَمَنًا
قَلِيۡلًا وَّاِيَّاىَ فَاتَّقُوۡنِ ﴿۴۱﴾

42. ಮಿಥ್ಯದ ಬಣ್ಣ ಬಳಿದು ಸತ್ಯವನ್ನು ಸಂದೇಹಾಸ್ಪದವನ್ನಾಗಿ ಮಾಡಬೇಡಿರಿ ಮತ್ತು ತಿಳಿದೂ ತಿಳಿದೂ ಸತ್ಯವನ್ನು ಬಚ್ಚಿಡಲು ಪ್ರಯತ್ನಿಸಬೇಡಿರಿ.

وَلَا تَلۡبِسُوا الۡحَـقَّ بِالۡبَاطِلِ وَتَكۡتُمُوا الۡحَـقَّ
وَاَنۡتُمۡ تَعۡلَمُوۡنَ ﴿۴۲﴾

43. ನಮಾಝನ್ನು ಸಂಸ್ಥಾಪಿಸಿರಿ. ಝಕಾತ್ (ಕಡ್ಡಾಯದಾನ) ಕೊಡಿರಿ ಮತ್ತು ನನ್ನ ಮುಂದೆ ಬಾಗುವವರೊಂದಿಗೆ ನೀವೂ ಬಾಗಿರಿ.

وَاَقِيۡمُوا الصَّلٰوةَ وَاٰتُوا الزَّكٰوةَ وَارۡكَعُوۡا
مَعَ الرّٰكِعِيۡنَ ﴿۴۳﴾

17. ಮದೀನಾ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಯಹೂದಿಯರು ಅಧಿಕ ಸಂಖ್ಯೆಯಲ್ಲಿ ವಾಸವಾಗಿದ್ದರು. ಆದ್ದರಿಂದ ಇದರ ನಂತರ ಅನೇಕ ರುಕೂಅ್(ಪರಿಚ್ಛೇದ)ಗಳ ತನಕ ಅವರನ್ನುದ್ದೇಶಿಸಿ ಬೋಧನೆ ನೀಡಲಾಗಿದೆ.

18. ಯಾವ ಲೌಕಿಕ ಲಾಭಗಳಿಗಾಗಿ ಇವರು ಅಲ್ಲಾಹನ ಆದೇಶ ಮತ್ತು ಮಾರ್ಗದರ್ಶನವನ್ನು ನಿರಾಕರಿಸುತ್ತಿದ್ದರು ಅದನ್ನೇ ಇಲ್ಲಿ 'ಅಲ್ಪ ಬೆಲೆ' ಎನ್ನಲಾಗಿದೆ. ಸತ್ಯದ ವಿಕ್ರಯಕ್ಕೆ ಪ್ರತಿಯಾಗಿ ಮಾನವನು ಲೋಕದ ಸಕಲ ಸಂಪತ್ತನ್ನು ಪಡೆದರೂ ಅದು ಅಲ್ಪ ಬೆಲೆಯಾಗಿದೆ. ಏಕೆಂದರೆ ನಿಶ್ಚಯವಾಗಿಯೂ ಸತ್ಯ ಅದಕ್ಕಿಂತ ಶ್ರೇಷ್ಠವಾದುದು.

44. ನೀವು ಇತರರಿಗೆ ಸನ್ಮಾರ್ಗವನ್ನನುಸರಿಸಲು ಉಪದೇಶ ನೀಡುತ್ತೀರಿ. ಆದರೆ ನಿಮ್ಮನ್ನು ನೀವು ಮರೆತೇ ಬಿಡುತ್ತೀರಾ? ವಸ್ತುತಃ ನೀವು ದಿವ್ಯ ಗ್ರಂಥವನ್ನು ಪಠಿಸುತ್ತೀರಿ. ನೀವು ಒಂದಿಷ್ಟೂ ಯೋಚಿಸುವುದಿಲ್ಲವೇ?

أَتَأْمُرُونَ النَّاسَ بِالْبِرِّ وَتَنْسَوْنَ أَنْفُسَكُمْ وَأَنْتُمْ تَتْلُونَ الْكِتَابَ ۚ أَفَلَا تَعْقِلُونَ ﴿٤٤﴾

45-46. ಸಹನೆ ಮತ್ತು ನಮಾಝ್‌ಗಳಿಂದ ಸಹಾಯ ಪಡೆಯಿರಿ. ಖಂಡಿತವಾಗಿಯೂ ನಮಾಝ್ ಅತ್ಯಂತ ಕಷ್ಟಕರ ಕಾರ್ಯ. ಆದರೆ ಕಟ್ಟಕಡೆಗೆ ತಮ್ಮ ಪ್ರಭುವನ್ನು ಸಂಧಿಸಬೇಕೆಂದೂ ಆತನೆಡೆಗೇ ಮರಳಬೇಕೆಂದೂ ನಂಬಿರುವ ಆಜ್ಞಾಪಾಲಕ ದಾಸರಿಗೆ ಅದು ಕಷ್ಟಕರವಲ್ಲ.

وَاسْتَعِينُوا بِالصَّبْرِ وَالصَّلَاةِ ۚ وَإِنَّهَا لَكَبِيرَةٌ إِلَّا عَلَى الْخَاشِعِينَ ﴿٤٥﴾ الَّذِينَ يَظُنُّونَ أَنَّهُمْ مُلَاقُو رَبِّهِمْ وَأَنَّهُمْ إِلَيْهِ رَاجِعُونَ ﴿٤٦﴾

47. ಓ ಇಸ್ರಾಈಲ್ ಸಂತತಿಯವರೇ, ನಾನು ನಿಮಗೆ ದಯಪಾಲಿಸಿದ್ದ ನನ್ನ ಕೊಡುಗೆಗಳನ್ನೂ ಲೋಕದ ಎಲ್ಲಾ ಜನಾಂಗಗಳ ಮೇಲೆ ನಿಮಗೆ ಶ್ರೇಷ್ಠತೆ ದಯಪಾಲಿಸಿದ್ದುದನ್ನೂ ಸ್ಮರಿಸಿರಿ.[19]

يَا بَنِي إِسْرَائِيلَ اذْكُرُوا نِعْمَتِيَ الَّتِي أَنْعَمْتُ عَلَيْكُمْ وَأَنِّي فَضَّلْتُكُمْ عَلَى الْعَالَمِينَ ﴿٤٧﴾

48. ಯಾರೂ ಯಾರಿಗೂ ಕಿಂಚಿತ್ತೂ ಸಹಾಯಕನಾಗದ ಆ ದಿನವನ್ನು ಭಯಪಡಿರಿ. ಅಂದು ಯಾವನಿಂದಲೂ ಶಿಫಾರಸು ಸ್ವೀಕರಿಸಲಾಗದು; ಯಾವನಿಂದಲೂ ಪರಿಹಾರ ಪಡೆದು ಬಿಡುಗಡೆ ಮಾಡಲಾಗದು ಮತ್ತು ಅಪರಾಧಿಗಳಿಗೆ ಎಲ್ಲಿಂದಲೂ ಸಹಾಯವೊದಗದು.

وَاتَّقُوا يَوْمًا لَا تَجْزِي نَفْسٌ عَنْ نَفْسٍ شَيْئًا وَلَا يُقْبَلُ مِنْهَا شَفَاعَةٌ وَلَا يُؤْخَذُ مِنْهَا عَدْلٌ وَلَا هُمْ يُنْصَرُونَ ﴿٤٨﴾

49. ನಾವು ನಿಮ್ಮನ್ನು ಫಿರ್‌ಔನಿ[20]ಯರ ದಾಸ್ಯದಿಂದ ವಿಮೋಚನೆಗೊಳಿಸಿದ ಕಾಲವನ್ನು ಸ್ಮರಿಸಿರಿ. ಅವರು ನಿಮ್ಮನ್ನು ಘೋರ ಯಾತನೆಯಲ್ಲಿ ಸಿಲುಕಿಸಿದ್ದರು. ನಿಮ್ಮ ಗಂಡುಮಕ್ಕಳನ್ನು ಕೊಲೆ ಮಾಡುತ್ತಿದ್ದರು ಮತ್ತು ನಿಮ್ಮ ಹೆಣ್ಣುಮಕ್ಕಳನ್ನು ಬದುಕಿರಲು ಬಿಡುತ್ತಿದ್ದರು. ಆ ಪರಿಸ್ಥಿತಿಯಲ್ಲಿ ನಿಮ್ಮ ಪ್ರಭುವಿನ ಕಡೆಯಿಂದ ನಿಮಗೊಂದು ದೊಡ್ಡ ಪರೀಕ್ಷೆ ಎದುರಾಗಿತ್ತು.

وَإِذْ نَجَّيْنَاكُمْ مِنْ آلِ فِرْعَوْنَ يَسُومُونَكُمْ سُوءَ الْعَذَابِ يُذَبِّحُونَ أَبْنَاءَكُمْ وَيَسْتَحْيُونَ نِسَاءَكُمْ ۚ وَفِي ذَٰلِكُمْ بَلَاءٌ مِنْ رَبِّكُمْ عَظِيمٌ ﴿٤٩﴾

19. ನಿಮ್ಮನ್ನು ಶಾಶ್ವತವಾಗಿ ಜಗತ್ತಿನ ಸಮುದಾಯಗಳಲ್ಲಿ ಶ್ರೇಷ್ಠರಾಗಿ ಮಾಡಲಾಗಿದೆ ಎಂದು ಇದರ ಅರ್ಥವಲ್ಲ. ಒಂದು ಕಾಲದಲ್ಲಿ ಜಗತ್ತಿನ ಸಮುದಾಯಗಳ ಪೈಕಿ ಅಲ್ಲಾಹನ ಸತ್ಯಜ್ಞಾನವನ್ನು ಹೊಂದಿದ ಸಮುದಾಯ ನೀವು ಮಾತ್ರವಾಗಿದ್ದಿರಿ. ಆದ್ದರಿಂದಲೇ ನಿಮ್ಮನ್ನು ಜಾಗತಿಕ ಸಮುದಾಯಗಳ ನಾಯಕರಾಗಿಯೂ ಮಾರ್ಗದರ್ಶಿಗಳನ್ನಾಗಿಯೂ ಮಾಡಲಾಗಿತ್ತು. ದೇವನ ದಾಸ್ಯದ ಕಡೆಗೆ ಎಲ್ಲಾ ಸಮುದಾಯಗಳನ್ನು ಕರೆಯುವ ಮತ್ತು ಅವರನ್ನು ಅದರಲ್ಲಿ ಮುನ್ನಡೆಸುವ ಕರ್ತವ್ಯವನ್ನು ನಿಮಗೆ ನೀಡಲಾಗಿತ್ತು ಎಂಬುದು ಇದರ ಅರ್ಥವಾಗಿದೆ.

20. 'ಅಲ್ ಫಿರ್‌ಔನ್' ಎಂಬ ಪದವನ್ನು ನಾವು ಫಿರ್‌ಔನಿಯರು ಎಂದು ಅನುವಾದಿಸಿದ್ದೇವೆ. ಇದರಲ್ಲಿ ಫಿರ್‌ಔನ್‌ನ ಕುಟುಂಬ ಮತ್ತು ಈಜಿಪ್ಟ್‌ನ ಆಡಳಿತ ವರ್ಗಗಳೆರಡೂ ಸೇರಿವೆ.

50. ನಾವು ಸಮುದ್ರವನ್ನು ಭೇದಿಸಿ ನಿಮಗಾಗಿ ದಾರಿ ಮಾಡಿಕೊಟ್ಟ ಸಂದರ್ಭವನ್ನು ಸ್ಮರಿಸಿರಿ. ಬಳಿಕ ನಿಮ್ಮನ್ನು ಅದರೊಳಗಿಂದ ಸುರಕ್ಷಿತವಾಗಿ ಪಾರುಮಾಡಿಸಿದೆವು ಮತ್ತು ನಿಮ್ಮ ಕಣ್ಣೆದುರಲ್ಲೇ ಫಿರ್‌ಔನಿಯರನ್ನು ಮುಳುಗಿಸಿಬಿಟ್ಟೆವು.

وَاِذۡ فَرَقۡنَا بِكُمُ الۡبَحۡرَ فَاَنۡجَيۡنٰكُمۡ وَاَغۡرَقۡنَاۤ اٰلَ فِرۡعَوۡنَ وَاَنۡتُمۡ تَنۡظُرُوۡنَ ﴿٥٠﴾

51. ನಾವು 'ಮೂಸಾ'ರನ್ನು ನಲವತ್ತು ಆಹೋರಾತ್ರಿಗಳ ಕರಾರಿನಂತೆ ಕರೆಸಿಕೊಂಡ ಸಂದರ್ಭವನ್ನು ಸ್ಮರಿಸಿರಿ.[21] ಅವರಿಲ್ಲದಿರುವಾಗ ನೀವು ಹಸುವಿನ ಕರುವನ್ನು ಆರಾಧ್ಯವನ್ನಾಗಿಸಿಬಿಟ್ಟಿರಿ. ಆಗ ನೀವು ದೊಡ್ಡ ಅಕ್ರಮವನ್ನೇ ಎಸಗಿದ್ದಿರಿ.

وَاِذۡ وٰعَدۡنَا مُوۡسٰٓى اَرۡبَعِيۡنَ لَيۡلَةً ثُمَّ اتَّخَذۡتُمُ الۡعِجۡلَ مِنۡۢ بَعۡدِهٖ وَاَنۡتُمۡ ظٰلِمُوۡنَ ﴿٥١﴾

52. ಆದರೆ ಇಷ್ಟಾಗಿಯೂ, ಇನ್ನಾದರೂ ನೀವು ಕೃತಜ್ಞರಾಗಬಹುದೆಂದು ನಾವು ನಿಮ್ಮನ್ನು ಕ್ಷಮಿಸಿದೆವು.

ثُمَّ عَفَوۡنَا عَنۡكُمۡ مِّنۡۢ بَعۡدِ ذٰلِكَ لَعَلَّكُمۡ تَشۡكُرُوۡنَ ﴿٥٢﴾

53. (ನೀವು ಅಕ್ರಮವೆಸಗುತ್ತಿದ್ದ ಅದೇ ವೇಳೆಯಲ್ಲಿ) ನಿಮಗೆ ಸನ್ಮಾರ್ಗ ಲಭಿಸಲೆಂದು ಮೂಸಾರಿಗೆ ನಾವು ಗ್ರಂಥವನ್ನೂ ಫುರ್ಕಾನನ್ನೂ[22] ನೀಡಿದ್ದ ಸಂದರ್ಭವನ್ನು ಸ್ಮರಿಸಿರಿ.

وَاِذۡ اٰتَيۡنَا مُوۡسَى الۡكِتٰبَ وَالۡفُرۡقَانَ لَعَلَّكُمۡ تَهۡتَدُوۡنَ ﴿٥٣﴾

54. ಮೂಸಾ (ಈ ಕೊಡುಗೆಯನ್ನು ತೆಗೆದುಕೊಂಡು ಮರಳಿ ಬಂದು) ತನ್ನ ಜನಾಂಗದೊಡನೆ, "ಜನರೇ, ನೀವು ಹಸುವಿನ ಕರುವನ್ನು ಆರಾಧ್ಯವನ್ನಾಗಿ ಸ್ವೀಕರಿಸಿ ನಿಜಕ್ಕೂ ನಿಮ್ಮ ಮೇಲೆ ದೊಡ್ಡ ಅಕ್ರಮವೆಸಗಿದಿರಿ. ಆದುದರಿಂದ ನೀವು ನಿಮ್ಮ ಸೃಷ್ಟಿಕರ್ತನ ಮುಂದೆ ಪಶ್ಚಾತ್ತಾಪ ಪಡಿರಿ ಮತ್ತು ನಿಮ್ಮ ಜೀವಗಳನ್ನು ನೀವೇ ಸಂಹರಿಸಿರಿ.[23] ಇದರಲ್ಲೇ ನಿಮ್ಮ ಸೃಷ್ಟಿಕರ್ತನ ಬಳಿ ನಿಮಗೆ ಒಳಿತಿದೆ' ಎಂದು ಹೇಳಿದ ಸಂದರ್ಭವನ್ನು ಸ್ಮರಿಸಿರಿ. ಆಗ ನಿಮ್ಮ ಸೃಷ್ಟಿಕರ್ತನು ನಿಮ್ಮ ಪಶ್ಚಾತ್ತಾಪವನ್ನು ಸ್ವೀಕರಿಸಿದನು. ನಿಶ್ಚಯವಾಗಿಯೂ ಆತನು ಬಹಳವಾಗಿ ಪಶ್ಚಾತ್ತಾಪ ಸ್ವೀಕರಿಸುವವನೂ ಕರುಣಾನಿಧಿಯೂ ಆಗಿರುತ್ತಾನೆ.

وَاِذۡ قَالَ مُوۡسٰى لِقَوۡمِهٖ يٰقَوۡمِ اِنَّكُمۡ ظَلَمۡتُمۡ اَنۡفُسَكُمۡ بِاتِّخَاذِكُمُ الۡعِجۡلَ فَتُوۡبُوۡٓا اِلٰى بَارِئِكُمۡ فَاقۡتُلُوۡٓا اَنۡفُسَكُمۡ ؕ ذٰلِكُمۡ خَيۡرٌ لَّكُمۡ عِنۡدَ بَارِئِكُمۡ ؕ فَتَابَ عَلَيۡكُمۡ ؕ اِنَّهٗ هُوَ التَّوَّابُ الرَّحِيۡمُ ﴿٥٤﴾

55. ನೀವು ಮೂಸಾರೊಡನೆ, "ಓ ಮೂಸಾ, ಅಲ್ಲಾಹನನ್ನು (ಅವನು

وَاِذۡ قُلۡتُمۡ يٰمُوۡسٰى لَنۡ نُّؤۡمِنَ لَكَ حَتّٰى نَرَى اللّٰهَ

21. ಅಂದರೆ ಈಜಿಪ್ಟ್‌ನಿಂದ ವಿಮೋಚಿತರಾಗಿ ಬನೀಇಸ್ರಾಈಲರು ಸೀನಾಯ್ ಪರ್ಯಾಯ ದ್ವೀಪವನ್ನು ತಲಪಿದಾಗ ಅಲ್ಲಾಹನು ಹ. ಮೂಸಾರನ್ನು(ಅ) 40 ದಿನಗಳ ಮಟ್ಟಿಗೆ ತೂರ್ ಪರ್ವತಕ್ಕೆ ಕರೆದನು. ಆಗತಾನೆ ಸ್ವತಂತ್ರವಾಗಿದ್ದ ಆ ಸಮುದಾಯಕ್ಕೆ ಶರೀಅತ್‌ನ (ಧರ್ಮಶಾಸ್ತ್ರ) ನಿಯಮ ಹಾಗೂ ವ್ಯಾವಹಾರಿಕ ಜೀವನದ ಮಾರ್ಗದರ್ಶನಗಳನ್ನು ನೀಡುವುದೇ ಅದರ ಉದ್ದೇಶವಾಗಿತ್ತು.

22. 'ಫುರ್‌ಕಾನ್' ಎಂದರೆ ಸತ್ಯ-ಮಿಥ್ಯಗಳ ಅಂತರವನ್ನು ಸ್ಪಷ್ಟಪಡಿಸುವ ಸಾಧನವಾಗಿದೆ. ಅಂದರೆ ಮನುಷ್ಯ ಸತ್ಯ-ಮಿಥ್ಯಗಳ ನಡುವೆ ಭೇದ ಕಲ್ಪಿಸಲು ಸಾಧ್ಯವಾಗುವಂತೆ ಮಾಡುವ ಧಾರ್ಮಿಕ ತಿಳುವಳಿಕೆ ಮತ್ತು ಪರಿಜ್ಞಾನ.

23. ಅರ್ಥಾತ್- ನಿಮ್ಮ ಪೈಕಿ ಕರುವನ್ನು ಆರಾಧ್ಯವೆಂದು ಬಗೆದು ಪೂಜಿಸಿದ ವ್ಯಕ್ತಿಗಳನ್ನು ಕೊಲೆ ಮಾಡಿರಿ.

ನಿಮ್ಮೊಡನೆ ಮಾತಾಡುತ್ತಿರುವುದನ್ನು) ನಾವು ಕಣ್ಣಾರೆ ಕಾಣುವ ತನಕ ನಿಮ್ಮ ಮಾತಿನ ಮೇಲೆ ನಾವು ವಿಶ್ವಾಸವಿಡಲಾರೆವು" ಎಂದು ಹೇಳಿದ ಸಂದರ್ಭವನ್ನು ಸ್ಮರಿಸಿರಿ. ಆಗ, ನೀವು ನೋಡುತ್ತಿದ್ದಂತೆಯೇ ನಿಮ್ಮ ಮೇಲೊಂದು ಭೀಕರ ಸಿಡಿಲೆರಗಿತ್ತು. ನೀವು ನಿರ್ಜೀವಿಗಳಾಗಿ ನೆಲಕ್ಕುರುಳಿದಿರಿ.

جَهْرَةً فَأَخَذَتْكُمُ الصّٰعِقَةُ وَأَنْتُمْ تَنْظُرُوْنَ ﴿٥٥﴾

56. ಆದರೆ ನೀವು ಈ ಉಪಕಾರದ ಬಳಿಕ ಕೃತಜ್ಞರಾಗಬಹುದೆಂದು ನಿಮ್ಮನ್ನು ನಾವು ಪುನರ್ಜೀವಗೊಳಿಸಿ ಎಬ್ಬಿಸಿದೆವು.

ثُمَّ بَعَثْنٰكُمْ مِّنْ بَعْدِ مَوْتِكُمْ لَعَلَّكُمْ تَشْكُرُوْنَ ﴿٥٦﴾

57. ನಾವು ನಿಮ್ಮ ಮೇಲೆ ಮೇಘದ ನೆರಳನ್ನು ಮಾಡಿದೆವು. 'ಮನ್ನ್' ಮತ್ತು 'ಸಲ್ವಾ'ಗಳ ಆಹಾರವನ್ನು ನಿಮಗೆ ಒದಗಿಸಿದೆವು ಮತ್ತು "ನಾವು ನಿಮಗೆ ದಯಪಾಲಿಸಿರುವ ಶುದ್ಧವಾದ ಪದಾರ್ಥಗಳನ್ನು ಉಣ್ಣಿರಿ" ಎಂದೆವು. ಆದರೆ ನಿಮ್ಮ ಪೂರ್ವಿಕರು ಅಕ್ರಮ ವೆಸಗಿದ್ದುದು ನಮ್ಮ ಮೇಲಲ್ಲ; ಅವರು ತಮ್ಮ ಮೇಲೆಯೇ ಅಕ್ರಮವೆಸಗಿದ್ದರು.

وَظَلَّلْنَا عَلَيْكُمُ الْغَمَامَ وَأَنْزَلْنَا عَلَيْكُمُ الْمَنَّ وَالسَّلْوٰى ۖ كُلُوْا مِنْ طَيِّبٰتِ مَا رَزَقْنٰكُمْ ۖ وَمَا ظَلَمُوْنَا وَلٰكِنْ كَانُوْٓا أَنْفُسَهُمْ يَظْلِمُوْنَ ﴿٥٧﴾

58. ನಾವು ನಿಮ್ಮೊಡನೆ, "(ನಿಮ್ಮ ಮುಂದಿರುವ) ಆ ಗ್ರಾಮದೊಳಗೆ ಪ್ರವೇಶಿಸಿರಿ. ನಿಮಗೆ ಇಷ್ಟ ಬಂದಂತೆ ಅದರ ಉತ್ಪನ್ನವನ್ನು ಸವಿಯಿರಿ. ಆದರೆ ಗ್ರಾಮದ ದ್ವಾರದೊಳಗೆ ಪೊಡಮಡುತ್ತ ಪ್ರವೇಶಿಸಿರಿ ಮತ್ತು ಹಿತ್ತಃ ಹಿತ್ತಃ[24] ಎನ್ನುತ್ತ ಹೋಗಬೇಕು. ನಾವು ನಿಮ್ಮ ಪಾಪಗಳನ್ನು ಕ್ಷಮಿಸುವೆವು ಮತ್ತು ಸದ್ವರ್ತರಿಗೆ ಇನ್ನಷ್ಟು ಅನುಗ್ರಹಗಳನ್ನು ನೀಡುವೆವು" ಎಂದ ಸಂದರ್ಭವನ್ನು ಸ್ಮರಿಸಿರಿ.

وَإِذْ قُلْنَا ادْخُلُوْا هٰذِهِ الْقَرْيَةَ فَكُلُوْا مِنْهَا حَيْثُ شِئْتُمْ رَغَدًا وَّادْخُلُوا الْبَابَ سُجَّدًا وَّقُوْلُوْا حِطَّةٌ نَّغْفِرْ لَكُمْ خَطٰيٰكُمْ ۚ وَسَنَزِيْدُ الْمُحْسِنِيْنَ ﴿٥٨﴾

59. ಆದರೆ ಅಕ್ರಮಿಗಳು ಅವರೊಡನೆ ಹೇಳಲಾಗಿದ್ದ ಮಾತನ್ನು ಬದಲಾಯಿಸಿ ಏನಕ್ಕೇನೋ ಮಾಡಿಬಿಟ್ಟರು. ಕೊನೆಗೆ ನಾವು ಅಕ್ರಮವೆಸಗಿದವರ ಮೇಲೆ ಆಕಾಶದಿಂದ ಯಾತನೆಯನ್ನು ಇಳಿಸಿದೆವು. ಅದು ಅವರು ಮಾಡುತ್ತಿದ್ದ ಆಜ್ಞೋಲ್ಲಂಘನೆಗಳಿಗೆ ಶಿಕ್ಷೆಯಾಗಿತ್ತು.

فَبَدَّلَ الَّذِيْنَ ظَلَمُوْا قَوْلًا غَيْرَ الَّذِيْ قِيْلَ لَهُمْ فَأَنْزَلْنَا عَلَى الَّذِيْنَ ظَلَمُوْا رِجْزًا مِّنَ السَّمَآءِ بِمَا كَانُوْا يَفْسُقُوْنَ ﴿٥٩﴾

60. ಮೂಸಾ ತಮ್ಮ ಜನಾಂಗಕ್ಕಾಗಿ ಜಲವನ್ನು ಬೇಡಿದ ಸಂದರ್ಭವನ್ನು ಸ್ಮರಿಸಿರಿ. ಆಗ ನಾವು ಹೇಳಿದೆವು, "ನಿಮ್ಮ ಲಾಠಿಯಿಂದ ಆ

وَإِذِ اسْتَسْقٰى مُوْسٰى لِقَوْمِهٖ فَقُلْنَا اضْرِبْ بِّعَصَاكَ الْحَجَرَ ۖ فَانْفَجَرَتْ مِنْهُ اثْنَتَا

24 'ಹಿತ್ತಃ' ಎಂಬ ಪದಕ್ಕೆ ಎರಡು ಅರ್ಥ ಕಲ್ಪಿಸಬಹುದು. ಮೊದಲನೆಯದಾಗಿ ದೇವನಿಂದ ತನ್ನ ತಪ್ಪುಗಳ ಬಗ್ಗೆ ಕ್ಷಮೆ ಯಾಚಿಸುತ್ತಾ ಪ್ರವೇಶಿಸುವುದು. ಎರಡನೆಯದಾಗಿ ಲೂಟಿ ಮತ್ತು ವ್ಯಾಪಕ ಹತ್ಯಾಕಾಂಡದ ಬದಲು ಆ ಪ್ರದೇಶದ ನಿವಾಸಿಗಳಿಗೆ ಸಾರ್ವತ್ರಿಕ ಕ್ಷಮೆಯ ಘೋಷಣೆ ಮಾಡುತ್ತಾ ಪ್ರವೇಶಿಸುವುದು.

ಬಂಡೆಯ ಮೇಲೆ ಹೊಡೆಯಿರಿ." ಆ ಪ್ರಕಾರ ಅದರಿಂದ ಹನ್ನೆರಡು ಚಿಲುಮೆಗಳು ಹೊರ ಚಿಮ್ಮಿದವು. ಪ್ರತಿಯೊಂದು ಗೋತ್ರದವರೂ ತಾವು ನೀರು ಪಡೆಯಬೇಕಾದ ಸ್ಥಳವನ್ನು ಅರಿತುಕೊಂಡರು.[25] "ಅಲ್ಲಾಹನು ಕರುಣಿಸಿದ ಆಹಾರವನ್ನು ತಿನ್ನಿರಿ, ಕುಡಿಯಿರಿ ಮತ್ತು ಭೂಮಿಯ ಮೇಲೆ ಅಶಾಂತಿ ಯನ್ನುಂಟು ಮಾಡದಿರಿ" (ಎಂದು ಆಗ ಬೋಧಿಸಲಾಗಿತ್ತು.)

عَشْرَةَ عَيْنًا ۗ قَدْ عَلِمَ كُلُّ أُنَاسٍ مَّشْرَبَهُمْ ۖ كُلُوا وَاشْرَبُوا مِن رِّزْقِ اللَّهِ وَلَا تَعْثَوْا فِي الْأَرْضِ مُفْسِدِينَ ﴿٦٠﴾

61. "ಮೂಸಾರವರೇ, ನಾವು ಒಂದೇ ವಿಧದ ಆಹಾರವನ್ನು ಸಹಿಸಲಾರೆವು, ಭೂಮಿಯಲ್ಲಿ ಬೆಳೆಯುವ ಹರಿವೆ, ಕಾಯಿಪಲ್ಲೆ, ಗೋಧಿ, ಬೇಳೆ, ನೀರುಳ್ಳಿ ಇತ್ಯಾದಿಗಳನ್ನು ನಮಗಾಗಿ ಉಂಟು ಮಾಡಲು ನೀವು ನಿಮ್ಮ ಪ್ರಭುವಿನೊಡನೆ ಪ್ರಾರ್ಥಿಸಿರಿ" ಎಂದು ನೀವು ಹೇಳಿದುದನ್ನು ಸ್ಮರಿಸಿರಿ. ಆಗ ಮೂಸಾ ಹೇಳಿದರು, "ನೀವು ಉತ್ಕೃಷ್ಟವಾದ ವಸ್ತುಗಳ ಬದಲು ನಿಕೃಷ್ಟ ವಸ್ತುಗಳನ್ನು ಬಯಸುವಿರಾ? ಹಾಗಿದ್ದರೆ ನೀವು ಯಾವುದಾದರೊಂದು ಪಟ್ಟಣದಲ್ಲಿ ಹೋಗಿ ವಾಸಿಸಿರಿ. ನೀವು ಕೇಳುತ್ತಿರುವುದೆಲ್ಲ ಅಲ್ಲಿ ಸಿಗುವುದು." ಕೊನೆಗೆ ನಿಂದೆ ಮತ್ತು ದಾರಿದ್ರ್ಯಗಳು ಅವರನ್ನಾವರಿಸಿದವು ಮತ್ತು ಅವರು ಅಲ್ಲಾಹನ ಕ್ರೋಧಕ್ಕೆ ಪಾತ್ರರಾದರು. ಇದೆಲ್ಲ ಅವರು ಅಲ್ಲಾಹನ ವಚನಗಳನ್ನು ನಿರಾಕರಿಸುತ್ತಿದ್ದುದರ ಮತ್ತು ಪ್ರವಾದಿಗಳನ್ನು ಅನ್ಯಾಯವಾಗಿ ಕೊಲೆಗೈಯುತ್ತಿದ್ದುದರ ಫಲವಾಗಿತ್ತು. ಇದು ಅವರ ಆಜ್ಞೋಲ್ಲಂಘನೆಯ ಮತ್ತು ಧರ್ಮಸೀಮೋಲ್ಲಂಘನೆ ಮಾಡುತ್ತಲೇ ಸಾಗುತ್ತಿದ್ದುದರ ಪರಿಣಾಮವಾಗಿತ್ತು.

وَإِذْ قُلْتُمْ يَا مُوسَىٰ لَن نَّصْبِرَ عَلَىٰ طَعَامٍ وَاحِدٍ فَادْعُ لَنَا رَبَّكَ يُخْرِجْ لَنَا مِمَّا تُنبِتُ الْأَرْضُ مِن بَقْلِهَا وَقِثَّائِهَا وَفُومِهَا وَعَدَسِهَا وَبَصَلِهَا ۖ قَالَ أَتَسْتَبْدِلُونَ الَّذِي هُوَ أَدْنَىٰ بِالَّذِي هُوَ خَيْرٌ ۚ اهْبِطُوا مِصْرًا فَإِنَّ لَكُم مَّا سَأَلْتُمْ ۗ وَضُرِبَتْ عَلَيْهِمُ الذِّلَّةُ وَالْمَسْكَنَةُ وَبَاءُوا بِغَضَبٍ مِّنَ اللَّهِ ۗ ذَٰلِكَ بِأَنَّهُمْ كَانُوا يَكْفُرُونَ بِآيَاتِ اللَّهِ وَيَقْتُلُونَ النَّبِيِّينَ بِغَيْرِ الْحَقِّ ۗ ذَٰلِكَ بِمَا عَصَوا وَّكَانُوا يَعْتَدُونَ ﴿٦١﴾ ع

62. ನಿಶ್ಚಯವಾಗಿಯೂ ಪೈಗಂಬರರನ್ನು ನಂಬುವವರಿರಲಿ, ಯಹೂದಿಯರಿರಲಿ, ಕ್ರೈಸ್ತರಿರಲಿ, ಸಬಯನರಿರಲಿ, ಯಾರು ಅಲ್ಲಾಹ್ ಮತ್ತು ನಿರ್ಣಾಯಕ (ಪುನರುತ್ಥಾನ) ದಿನದ ಮೇಲೆ ವಿಶ್ವಾಸವಿಟ್ಟು, ಸತ್ಕರ್ಮಗಳನ್ನು ಮಾಡುವವರೋ ಅವರಿಗೆ ಅದರ ಪ್ರತಿಫಲವು ಅವರ ಪ್ರಭುವಿನ ಬಳಿ ಇದ್ದೇ ಇದೆ. ಅವರಿಗೆ ಯಾವ ಭಯವೂ ವ್ಯಥೆಯೂ ಇಲ್ಲ.[26]

إِنَّ الَّذِينَ آمَنُوا وَالَّذِينَ هَادُوا وَالنَّصَارَىٰ وَالصَّابِئِينَ مَنْ آمَنَ بِاللَّهِ وَالْيَوْمِ الْآخِرِ وَعَمِلَ صَالِحًا فَلَهُمْ أَجْرُهُمْ عِندَ رَبِّهِمْ ۚ وَلَا خَوْفٌ عَلَيْهِمْ وَلَا هُمْ يَحْزَنُونَ ﴿٦٢﴾

63. ನಾವು (ತೂರ್) ಪರ್ವತವನ್ನು ನಿಮ್ಮ ಮೇಲೆ ಎತ್ತಿ ಹಿಡಿದು, ನಿಮ್ಮಿಂದ ಬಲವಾದ ಕರಾರನ್ನು ಪಡೆದು, "ನಿಮಗೆ

وَإِذْ أَخَذْنَا مِيثَاقَكُمْ وَرَفَعْنَا فَوْقَكُمُ الطُّورَ خُذُوا مَا آتَيْنَاكُم بِقُوَّةٍ وَاذْكُرُوا

25. ಬನೀಇಸ್ರಾಈಲರಲ್ಲಿ ಹನ್ನೆರಡು ಗೋತ್ರಗಳಿದ್ದವು. ಅವರ ನಡುವೆ ನೀರಿಗಾಗಿ ಜಗಳವಾಗದಿರಲೆಂದು ಅಲ್ಲಾಹನು ಪ್ರತಿಯೊಂದು ಗೋತ್ರಕ್ಕೆ ಪ್ರತ್ಯೇಕ ಚಿಲುಮೆಯನ್ನು ಹೊರಡಿಸಿದನು.

ನೀಡಲಾಗುತ್ತಿರುವ ಗ್ರಂಥವನ್ನು ಭದ್ರವಾಗಿ ಆಧರಿಸಿಕೊಳ್ಳಿರಿ ಮತ್ತು ಅದರಲ್ಲಿ ಉಲ್ಲೇಖಿಸಿರುವ ಆಜ್ಞೆಗಳನ್ನೂ ಬೋಧನೆಗಳನ್ನೂ ನೆನಪಿಟ್ಟುಕೊಳ್ಳಿರಿ; ಅದರ ಮೂಲಕವೇ ನೀವು ಧರ್ಮನಿಷ್ಠೆಯ ಪಥದಲ್ಲಿ ನಡೆಯಬಲ್ಲಿರಿ" ಎಂದು ಹೇಳಿದ ಸಂದರ್ಭವನ್ನು ಸ್ಮರಿಸಿರಿ.

مَا فِيهِ لَعَلَّكُمْ تَتَّقُونَ ﴿٦٣﴾

64. ಆದರೆ ಆ ಬಳಿಕ ನೀವು ನಿಮ್ಮ ಕರಾರಿನಿಂದ ವಿಮುಖರಾದಿರಿ. ಆದರೂ ಅಲ್ಲಾಹನ ಅನುಗ್ರಹವೂ, ದಯೆಯೂ ನಿಮ್ಮನ್ನು ಬಿಡಲಿಲ್ಲ. ಅನ್ಯಥಾ ನೀವು ಎಂದೋ ನಾಶವಾಗುತ್ತಿದ್ದಿರಿ.

ثُمَّ تَوَلَّيْتُم مِّن بَعْدِ ذَٰلِكَ ۖ فَلَوْلَا فَضْلُ اللَّهِ
عَلَيْكُمْ وَرَحْمَتُهُ لَكُنتُم مِّنَ الْخَاسِرِينَ ﴿٦٤﴾

65. ನಿಮ್ಮ ಜನಾಂಗದವರ ಪೈಕಿ 'ಸಬ್ತ್'[27]ನ ನಿಯಮವನ್ನು ಮುರಿದವರ ವಿಷಯ ನಿಮಗೆ ತಿಳಿದೇ ಇದೆ. ನಾವು ಅವರೊಡನೆ, "ನೀವು ಕಪಿಗಳಾಗಿರಿ ಮತ್ತು ಎಲ್ಲ ಕಡೆಗಳಿಂದಲೂ ಧಿಕ್ಕರಿಸಲ್ಪಡುವ ಸ್ಥಿತಿಯಲ್ಲಿ ನೀವಿರಿ" ಎಂದು ಹೇಳಿದೆವು.

وَلَقَدْ عَلِمْتُمُ الَّذِينَ اعْتَدَوْا مِنكُمْ فِي السَّبْتِ
فَقُلْنَا لَهُمْ كُونُوا قِرَدَةً خَاسِئِينَ ﴿٦٥﴾

66. ಹೀಗೆ ನಾವು ಆ ಘಟನೆಯನ್ನು ಅಂದಿನವರಿಗೂ ಮುಂದಿನವರಿಗೂ ಒಂದು ನಿದರ್ಶನವನ್ನಾಗಿಯೂ ಭಯಪಡುವವರಿಗೆ ಉಪದೇಶ ವನ್ನಾಗಿಯೂ ಮಾಡಿದೆವು.

فَجَعَلْنَاهَا نَكَالًا لِّمَا بَيْنَ يَدَيْهَا وَمَا خَلْفَهَا
وَمَوْعِظَةً لِّلْمُتَّقِينَ ﴿٦٦﴾

67. ಮೂಸಾ ತನ್ನ ಜನಾಂಗದೊಡನೆ, "ಒಂದು ಗೋವನ್ನು ಬಲಿದಾನ ಕೊಡಲು ಅಲ್ಲಾಹನು ನಿಮಗೆ ಆಜ್ಞಾಪಿಸುತ್ತಾನೆ" ಎಂದು ಹೇಳಿದ ಸಂದರ್ಭವನ್ನು ಸ್ಮರಿಸಿರಿ. ಅವರಂದರು, "ನೀವು ನಮ್ಮನ್ನು ಅಣಕಿಸುತ್ತೀರಾ?" ಆಗ ಮೂಸಾ, "ಮೂಢರಂತಾಡುವುದರ ಬಗ್ಗೆ ನಾನು ಅಲ್ಲಾಹನ ಅಭಯವನ್ನು ಯಾಚಿಸುತ್ತೇನೆ" ಎಂದರು.

وَإِذْ قَالَ مُوسَىٰ لِقَوْمِهِ إِنَّ اللَّهَ يَأْمُرُكُمْ أَن
تَذْبَحُوا بَقَرَةً ۖ قَالُوا أَتَتَّخِذُنَا هُزُوًا ۖ قَالَ
أَعُوذُ بِاللَّهِ أَنْ أَكُونَ مِنَ الْجَاهِلِينَ ﴿٦٧﴾

26. ವಾಕ್ಸರಣಿಯನ್ನು ಗಮನಿಸಿದರೆ, ಯಾವ್ಯಾವ ವಿಷಯಗಳ ಮೇಲೆ ಮಾನವ ವಿಶ್ವಾಸವಿಡಬೇಕು ಮತ್ತು ಎಂತಹ ಕರ್ಮಗಳನ್ನು ಎಸಗಿದರೆ ಅವನು ದೇವನ ಬಳಿ ಪುಣ್ಯಕ್ಕೆ ಅರ್ಹನಾಗುವನು ಎಂಬ 'ವಿಶ್ವಾಸ ಮತ್ತು ಸತ್ಕರ್ಮ'ದ ವಿವರಗಳನ್ನು ನೀಡುವುದು ಇದರ ಉದ್ದೇಶವಲ್ಲವೆಂದು ತಾನಾಗಿಯೇ ವ್ಯಕ್ತವಾಗುತ್ತದೆ. ಯಹೂದಿಯರು ಮಾತ್ರವೇ ಮೋಕ್ಷದ ಗುತ್ತೇದಾರರು ಎಂಬ ಅವರ ಮಿಥ್ಯಾಭಿಮಾನವನ್ನು ನಿರಾಕರಿಸುವುದು ಇದರ ಉದ್ದೇಶವಾಗಿದೆ. ಅವರ ಕೂಟಕ್ಕೆ ಸೇರಿದವರು ವಿಶ್ವಾಸ ಮತ್ತು ಕರ್ಮದ ದೃಷ್ಟಿಯಿಂದ ಎಂತಹವರೇ ಆಗಿದ್ದರೂ ಮೋಕ್ಷ ಅವರ ಕಟ್ಟಿಟ್ಟ ಬುತ್ತಿ ಎಂಬ ಭ್ರಮೆಗೆ ಅವರು ಈಡಾಗಿದ್ದರು. ಅವರ ಪ್ರಕಾರ, ಅವರ ಕೂಟದಿಂದ ಹೊರಗಿರುವವರೆಲ್ಲರೂ ನರಕದ ಇಂಧನವಾಗಲಿಕ್ಕಾಗಿಯೇ ಸೃಷ್ಟಿಸಲ್ಪಟ್ಟವರಾಗಿದ್ದಾರೆ. ಈ ತಪ್ಪು ತಿಳುವಳಿಕೆಯನ್ನು ನೀಗಿಸಲಿಕ್ಕಾಗಿ- ಅಲ್ಲಾಹನ ಬಳಿ ನಿಮ್ಮ ಗುಂಪುಗಾರಿಕೆಗೆ ಮಹತ್ವವಿಲ್ಲ. ಅಲ್ಲಿ ಸತ್ಯವಿಶ್ವಾಸ ಮತ್ತು ಸತ್ಕರ್ಮವನ್ನು ಮಾತ್ರ ಪರಿಗಣಿಸಲಾಗುತ್ತದೆ. ಅದರೊಂದಿಗೆ ತನ್ನ ಪ್ರಭುವಿನ ಮುಂದೆ ಹಾಜರಾಗುವವನೇ ತನ್ನ ಪ್ರತಿಫಲ ಪಡೆಯುವನು. ದೇವನ ಬಳಿ ನಿಮ್ಮ ಗುಣವಿಶೇಷತೆಗಳ ಆಧಾರದಲ್ಲಿ ತೀರ್ಮಾನವಾಗುತ್ತದೆಯೇ ಹೊರತು ನಿಮ್ಮ ಜನಗಣತಿಯ ದಾಖಲೆಗಳ ಆಧಾರದಲ್ಲಲ್ಲ ಎಂದು ಹೇಳಲಾಗಿದೆ.

27. 'ಸಬ್ತ್' ಎಂದರೆ ಶನಿವಾರ. ಶನಿವಾರವನ್ನು ವಿಶ್ರಾಂತಿ ಮತ್ತು ಆರಾಧನೆಗಾಗಿ ಮೀಸಲಿರಿಸಬೇಕೆಂದು ಬನೀಇಸ್ರಾಈಲರಿಗೆ ವಿಧಿಸಲಾಗಿತ್ತು. ಆ ದಿನ ಲೌಕಿಕ ಕೆಲಸವನ್ನೂ ಮಾಡಬಾರದು. ಅಡುಗೆಯ ಕೆಲಸವನ್ನು ತಾನೂ ಮಾಡಬಾರದು, ಸೇವಕರಿಂದಲೂ ಮಾಡಿಸಬಾರದು ಎಂಬ ನಿಯಮವಿತ್ತು.

68. ಅವರಂದರು, "ಆ ಗೋವಿನ ಸ್ವಲ್ಪ ವಿವರವನ್ನು ನಮಗೆ ತಿಳಿಸಿ ಕೊಡಬೇಕೆಂದು ನಿಮ್ಮ ಪ್ರಭುವಿನೊಡನೆ ಬೇಡಿರಿ." ಆಗ ಮೂಸಾ, "ಆ ಗೋವು ಹೆಚ್ಚು ಪ್ರಾಯವಾದುದೂ ಆಗಿರಬಾರದು, ಎಳೆಕರುವೂ ಆಗಿರಬಾರದು; ನಡುಹರೆಯದ್ದಾಗಿರಬೇಕೆಂದು ಅಲ್ಲಾಹ್ ಆಜ್ಞಾಪಿಸುತ್ತಾನೆ. ಆದ ಕಾರಣ ನಿಮಗೆ ಆಜ್ಞಾಪಿಸಿದಂತೆ ವರ್ತಿಸಿರಿ" ಎಂದರು.

قَالُوا ادْعُ لَنَا رَبَّكَ يُبَيِّنْ لَّنَا مَا هِيَ ۚ قَالَ
إِنَّهُ يَقُولُ إِنَّهَا بَقَرَةٌ لَّا فَارِضٌ وَلَا بِكْرٌ
عَوَانٌ بَيْنَ ذَٰلِكَ ۖ فَافْعَلُوا مَا تُؤْمَرُونَ ﴿٦٨﴾

69. ಮತ್ತೆ ಅವರು, "ಅದರ ಬಣ್ಣ ಯಾವುದಾಗಿರಬೇಕೆಂದೂ ನಿಮ್ಮ ಪ್ರಭುವಿನೊಡನೆ ಕೇಳಿರಿ" ಎಂದರು. ಆಗ ಮೂಸಾ, "ಅದು ಪ್ರೇಕ್ಷಕರ ಕಣ್ಮನಗಳನ್ನು ತಣಿಸುವಂತಹ ಹೊಂಬಣ್ಣದ ಗೋವಾಗಿರಬೇಕೆಂದು ಅವನು ಹೇಳುತ್ತಾನೆ" ಎಂದರು.

قَالُوا ادْعُ لَنَا رَبَّكَ يُبَيِّن لَّنَا مَا لَوْنُهَا ۚ قَالَ
إِنَّهُ يَقُولُ إِنَّهَا بَقَرَةٌ صَفْرَاءُ فَاقِعٌ لَّوْنُهَا
تَسُرُّ النَّاظِرِينَ ﴿٦٩﴾

70. ಪುನಃ ಅವರು, "ಅದು ಯಾವ ತರದ್ದೆಂದು ಸ್ಪಷ್ಟವಾಗಿ ವಿವರಿಸಲಿ. ಅದನ್ನು ಗುರುತಿಸುವ ಬಗ್ಗೆ ನಮಗೆ ಬಹಳ ಸಂದೇಹವುಂಟಾಗಿದೆ. ಅಲ್ಲಾಹನು ಇಚ್ಛಿಸಿದರೆ ನಾವು ಅದನ್ನು ಗುರುತಿಸುವೆವು" ಎಂದರು.

قَالُوا ادْعُ لَنَا رَبَّكَ يُبَيِّن لَّنَا مَا هِيَ إِنَّ الْبَقَرَ
تَشَابَهَ عَلَيْنَا ۖ وَإِنَّا إِن شَاءَ اللَّهُ لَمُهْتَدُونَ ﴿٧٠﴾

71. ಆಗ ಮೂಸಾ, "ಆ ಗೋವು ಉಳುವುದಕ್ಕಾಗಲಿ ಕೃಷಿಗೆ ನೀರೆತ್ತಲಿಕ್ಕಾಗಲಿ ಯಾವ ಸೇವೆಗೂ ಉಪಯೋಗಿಸಲ್ಪಡದ್ದೂ, ಸರ್ವಾಂಗ ಸಂಪೂರ್ಣವೂ, ದೋಷರಹಿತವೂ ಆಗಿರಬೇಕೆಂದು ಆತನು ಹೇಳುತ್ತಾನೆ" ಎಂದು ಉತ್ತರವಿತ್ತರು. ಆಗ ಅವರು, "ಈಗ ನೀವು ಅದರ ಸರಿಯಾದ ಪರಿಚಯ ಮಾಡಿಕೊಟ್ಟಿರಿ" ಎಂದು ಸಾರಿದರು. ಆ ಬಳಿಕ ಅವರು ಅದರ ಬಲಿದಾನ ಮಾಡಿದರು. ಅನ್ಯಥಾ ಅವರು ಹಾಗೆ ಮಾಡುವಂತೆ ತೋರುತ್ತಿರಲಿಲ್ಲ.[28]

قَالَ إِنَّهُ يَقُولُ إِنَّهَا بَقَرَةٌ لَّا ذَلُولٌ تُثِيرُ
الْأَرْضَ وَلَا تَسْقِي الْحَرْثَ مُسَلَّمَةٌ لَّا شِيَةَ
فِيهَا ۚ قَالُوا الْآنَ جِئْتَ بِالْحَقِّ ۚ فَذَبَحُوهَا
وَمَا كَادُوا يَفْعَلُونَ ﴿٧١﴾

72. ನೀವು ಒಬ್ಬನನ್ನು ಕೊಲೆಮಾಡಿ ಆ ಬಳಿಕ ಜಗಳಾಡಲಿಕ್ಕೂ ಒಬ್ಬರಿನ್ನೊಬ್ಬರ ಮೇಲೆ ಆರೋಪ ಹೊರಿಸಲಿಕ್ಕೂ ತೊಡಗಿದ ಆ ಸಂದರ್ಭ ನಿಮಗೆ ನೆನಪಿದೆಯೇ? ಆದರೆ ನೀವು ಬಚ್ಚಿಟ್ಟದ್ದನ್ನು ಬಯಲಿಗೆಳೆಯಬೇಕೆಂದು ಅಲ್ಲಾಹ್ ನಿರ್ಧರಿಸಿದ್ದನು.

وَإِذْ قَتَلْتُمْ نَفْسًا فَادَّارَأْتُمْ فِيهَا ۖ وَاللَّهُ مُخْرِجٌ
مَّا كُنتُمْ تَكْتُمُونَ ﴿٧٢﴾

28. ಬನೀಇಸ್ರಾಈಲರಿಗೆ ಈಜಿಪ್ಟ್ ಮತ್ತು ನೆರೆಹೊರೆಯ ಸಮುದಾಯಗಳಿಂದಾಗಿ ಗೋವಿನ ಬಗ್ಗೆ ಪವಿತ್ರ ಭಾವನೆ ಮತ್ತು ಗೋಪೂಜೆಯ ಸೋಂಕು ತಗಲಿತ್ತು. ಆದ್ದರಿಂದ ಈಜಿಪ್ಟ್‌ನಿಂದ ಹೊರಡುತ್ತಲೇ ಅವರು ಕರುವನ್ನು ಆರಾಧ್ಯ ವಸ್ತುವಾಗಿ ಮಾಡಿಕೊಂಡಿದ್ದರು. ಆದ್ದರಿಂದ ಗೋವನ್ನು ಸಂಹರಿಸುವಂತೆ ಅವರಿಗೆ ಆದೇಶ ನೀಡಲಾಯಿತು. ಅವರು ನೆಪಗಳನ್ನೊಡ್ಡಲು ಪ್ರಯತ್ನಿಸಿದರು ಮತ್ತು ವಿವರ

73. ಆಗ ನಾವು, ಕೊಲ್ಲಲ್ಪಟ್ಟವನ ಶವಕ್ಕೆ ಅದರ ಮಾಂಸದ ಒಂದು ಭಾಗದಿಂದ ತಟ್ಟಿರಿ ಎಂದು ಆಜ್ಞಾಪಿಸಿದೆವು. ನೋಡಿರಿ, ಇದೇ ರೀತಿ ಅಲ್ಲಾಹನು ಮೃತರನ್ನು ಸಜೀವಗೊಳಿಸುತ್ತಾನಲ್ಲದೆ ನಿಮಗೆ ವಿವೇಚಿಸಲಿಕ್ಕಾಗಿ ತನ್ನ ದೃಷ್ಟಾಂತಗಳನ್ನೂ ತೋರಿಸಿಕೊಡುತ್ತಾನೆ.

فَقُلْنَا اضْرِبُوهُ بِبَعْضِهَا ۚ كَذَٰلِكَ يُحْيِي اللَّهُ
الْمَوْتَىٰ وَيُرِيكُمْ آيَاتِهِ لَعَلَّكُمْ تَعْقِلُونَ ﴿٧٣﴾

74. ಆದರೆ ಇಂತಹ ದೃಷ್ಟಾಂತಗಳನ್ನು ಕಂಡ ಮೇಲೂ ನಿಮ್ಮ ಹೃದಯಗಳು ಕಠೋರವಾದುವು- ಕಲ್ಲು ಬಂಡೆಗಳಂತೆ, ಮಾತ್ರವಲ್ಲ ಕಾಠಿಣ್ಯದಲ್ಲಿ ಅವುಗಳಿಗಿಂತಲೂ ಅಧಿಕ. ಏಕೆಂದರೆ, ಕೆಲವು ಕಲ್ಲುಗಳಿಂದ ಚಿಲುಮೆಗಳು ಚಿಮ್ಮಿ ಹರಿಯುತ್ತವೆ. ಕೆಲವು ಒಡೆಯುತ್ತವೆ ಮತ್ತು ಅವುಗಳಿಂದ ನೀರು ಹರಿದು ಬರುತ್ತದೆ. ಮತ್ತಿನ್ನು ಕೆಲವು ದೇವಭಯದಿಂದ ಕಂಪಿಸಿ ಉರುಳಿ ಬೀಳುತ್ತವೆ. ಅಲ್ಲಾಹ್ ನಿಮ್ಮ ಕರ್ಮಗಳ ಬಗ್ಗೆ ಅಲಕ್ಷ್ಯನಾಗಿಲ್ಲ.

ثُمَّ قَسَتْ قُلُوبُكُم مِّن بَعْدِ ذَٰلِكَ فَهِيَ
كَالْحِجَارَةِ أَوْ أَشَدُّ قَسْوَةً ۚ وَإِنَّ مِنَ الْحِجَارَةِ
لَمَا يَتَفَجَّرُ مِنْهُ الْأَنْهَارُ ۚ وَإِنَّ مِنْهَا لَمَا يَشَّقَّقُ
فَيَخْرُجُ مِنْهُ الْمَاءُ ۚ وَإِنَّ مِنْهَا لَمَا يَهْبِطُ مِنْ
خَشْيَةِ اللَّهِ ۗ وَمَا اللَّهُ بِغَافِلٍ عَمَّا تَعْمَلُونَ ﴿٧٤﴾

75. ಓ ಮುಸ್ಲಿಮರೇ, ಇವರು ನಿಮ್ಮ ಆಹ್ವಾನದ ಮೇಲೆ ವಿಶ್ವಾಸವಿರಿಸುವರೆಂದು ನಿರೀಕ್ಷಿಸುತ್ತೀರಾ?[29] ವಸ್ತುತಃ ಅವರ ಪೈಕಿ ಒಂದು ವರ್ಗವು ಅಲ್ಲಾಹನ ವಾಣಿಯನ್ನು ಕೇಳಿ ಅದನ್ನು ಚೆನ್ನಾಗಿ ಅರಿತುಕೊಂಡ ಬಳಿಕವೂ ಬೇಕು ಬೇಕೆಂದೇ ಅದರಲ್ಲಿ ಪರಿವರ್ತನೆ ಮಾಡುವ ರೂಢಿಯನ್ನಿಟ್ಟುಕೊಂಡಿತು.

أَفَتَطْمَعُونَ أَن يُؤْمِنُوا لَكُمْ وَقَدْ كَانَ فَرِيقٌ
مِّنْهُمْ يَسْمَعُونَ كَلَامَ اللَّهِ ثُمَّ يُحَرِّفُونَهُ مِن بَعْدِ
مَا عَقَلُوهُ وَهُمْ يَعْلَمُونَ ﴿٧٥﴾

76. ಅವರು (ಪ್ರವಾದಿ ಮುಹಮ್ಮದ್‌ರ ಮೇಲೆ) ವಿಶ್ವಾಸವಿಟ್ಟವರನ್ನು ಸಂಧಿಸಿದಾಗ, "ನಾವು ಅವರ ಮೇಲೆ ವಿಶ್ವಾಸವಿಟ್ಟಿದ್ದೇವೆ" ಎನ್ನುತ್ತಾರೆ. ಆದರೆ ಅವರೇ ಪರಸ್ಪರ ಏಕಾಂತದಲ್ಲಿ ಭೇಟಿಯಾದಾಗ, "ನೀವು ಮೂರ್ಖರಾಗಿದ್ದೀರಾ? ಅಲ್ಲಾಹ್ ನಿಮಗೆ ವ್ಯಕ್ತಗೊಳಿಸಿದ ಸಂಗತಿಯನ್ನು ಅವರಿಗೆ ಹೇಳಿಕೊಟ್ಟು, ಅವರು ಅದನ್ನೇ ನಿಮ್ಮ ಪ್ರಭುವಿನ ಬಳಿ ನಿಮ್ಮ ವಿರುದ್ಧ ಆಧಾರವಾಗಿ ತರುವಂತೆ ಮಾಡುತ್ತೀರಾ?" ಎನ್ನುತ್ತಾರೆ.

وَإِذَا لَقُوا الَّذِينَ آمَنُوا قَالُوا آمَنَّا وَإِذَا خَلَا بَعْضُهُمْ
إِلَىٰ بَعْضٍ قَالُوا أَتُحَدِّثُونَهُم بِمَا فَتَحَ اللَّهُ عَلَيْكُمْ
لِيُحَاجُّوكُم بِهِ عِندَ رَبِّكُمْ ۚ أَفَلَا تَعْقِلُونَ ﴿٧٦﴾

77. ಅವರು ಬಚ್ಚಿಡುವುದನ್ನೂ, ಬಹಿರಂಗಗೊಳಿಸುವುದನ್ನೂ ಅಲ್ಲಾಹ್ ಅರಿಯುತ್ತಾನೆಂದು ಅವರು ತಿಳಿದಿಲ್ಲವೇ?

أَوَلَا يَعْلَمُونَ أَنَّ اللَّهَ يَعْلَمُ مَا يُسِرُّونَ وَمَا يُعْلِنُونَ ﴿٧٧﴾

ಕೇಳತೊಡಗಿದರು. ಆದರೆ ವಿವರಗಳನ್ನು ಕೇಳುತ್ತಾ ಹೋದಂತೆ ಅವರು ಇಕ್ಕಟ್ಟಿಗೆ ಸಿಲುಕುತ್ತಾ ಹೋದರು. ಕೊನೆಗೆ ಬೊಟ್ಟು ಮಾಡಿ ತೋರಿಸುವಂತೆ, ಆ ಕಾಲದಲ್ಲಿ ಪೂಜೆಗಾಗಿಯೇ ಮೀಸಲಾಗಿಡುತ್ತಿದ್ದ ಹೊಂಬಣ್ಣದ ಆ ವಿಶಿಷ್ಟ ಗೋವನ್ನು ಸಂಹರಿಸುವಂತೆ ಹೇಳಲಾಯಿತು.

29. ಆಗ ತಾನೇ ಪ್ರವಾದಿ ಮುಹಮ್ಮದ್‌ರ(ಸ) ಮೇಲೆ ವಿಶ್ವಾಸವಿಟ್ಟಿದ್ದ ನವ-ಮುಸ್ಲಿಮರನ್ನುದ್ದೇಶಿಸಿ ಈ ಮಾತು ಹೇಳಲಾಗಿದೆ. ಅವರು ಮೊದಲಿನಿಂದಲೂ ಪ್ರವಾದಿತ್ವ, ದೇವಗ್ರಂಥ, ದೇವಚರರು, ಪರಲೋಕ ಮತ್ತು ಶರೀಅತ್(ಧರ್ಮಶಾಸ್ತ್ರ) ಮುಂತಾದ ವಿಚಾರಗಳನ್ನು ತಮ್ಮ ನೆರೆಹೊರೆಯ ಯಹೂದಿಯರ ಮೂಲಕವೇ ಕೇಳಿದ್ದರು. ಆದ್ದರಿಂದ, ಯಾರು ಮೊದಲಿನಿಂದಲೇ ಪ್ರವಾದಿ ಮತ್ತು ದೈವಿಕ ಗ್ರಂಥಗಳ ಹಿಂಬಾಲಕರಾಗಿರುವರೋ ಮತ್ತು ಯಾರ ಸೂಚನೆಯ ಮೂಲಕ ನಮಗೆ ಸತ್ಯವಿಶ್ವಾಸದ ಸೌಭಾಗ್ಯ ದೊರೆತಿದೆಯೋ, ಅವರು ಖಂಡಿತ ನಮಗೆ ನೆರವಾಗುವರು ಮಾತ್ರವಲ್ಲ ಈ ಹಾದಿಯಲ್ಲಿ ಅವರು ಮುಂಚೂಣಿಯಲ್ಲಿರುವರು ಎಂದು ಅವರು ನಿರೀಕ್ಷಿಸುತ್ತಿದ್ದರು.

78. ಅವರ ಪೈಕಿ ಇನ್ನೊಂದು ಪಂಗಡವು ನಿರಕ್ಷರಿಗಳದ್ದಿದೆ. ಅವರು ಗ್ರಂಥಜ್ಞಾನವನ್ನೇನೂ ಹೊಂದಿರುವುದಿಲ್ಲ. ಕೇವಲ ತಮ್ಮ ನಿರಾಧಾರ ಭರವಸೆ ಹಾಗೂ ಆಕಾಂಕ್ಷೆಗಳಲ್ಲಿದ್ದುಕೊಂಡು ಕೆಲವು ಊಹಾಪೋಹೆಗಳಲ್ಲೇ ನಿರತರಾಗಿದ್ದಾರೆ.

وَمِنْهُمْ اُمِّيُّوْنَ لَا يَعْلَمُوْنَ الْكِتٰبَ اِلَّآ اَمَانِيَّ وَاِنْ هُمْ اِلَّا يَظُنُّوْنَ ۝٧٨

79. ಆದುದರಿಂದ ಸ್ವಹಸ್ತಗಳಿಂದ ಧಾರ್ಮಿಕ ಗ್ರಂಥಗಳನ್ನು ಬರೆದು, ಅದರಿಂದ ತುಚ್ಛ ಪ್ರತಿಫಲ ಪಡೆಯುವ ಸಲುವಾಗಿ, "ಇದು ಅಲ್ಲಾಹನ ಕಡೆಯಿಂದ ಬಂದಿದೆ" ಎಂದು ಹೇಳುವವರಿಗೆ ವಿನಾಶ ಕಾದಿದೆ. ಅವರ ಕೈಗಳಿಂದ ಬರೆಯಲ್ಪಟ್ಟಿರುವ ಕೃತಿಯೂ ಅವರ ಪಾಲಿಗೆ ವಿನಾಶಕಾರಿಯಾಗಿದೆ ಮತ್ತು ಅವರ ಈ ಸಂಪಾದನೆಯೂ ಅವರಿಗೆ ವಿನಾಶಕಾರಿಯಾಗಿದೆ.

فَوَيْلٌ لِّلَّذِيْنَ يَكْتُبُوْنَ الْكِتٰبَ بِاَيْدِيْهِمْ ثُمَّ يَقُوْلُوْنَ هٰذَا مِنْ عِنْدِ اللّٰهِ لِيَشْتَرُوْا بِهٖ ثَمَنًا قَلِيْلًا ؕ فَوَيْلٌ لَّهُمْ مِّمَّا كَتَبَتْ اَيْدِيْهِمْ وَوَيْلٌ لَّهُمْ مِّمَّا يَكْسِبُوْنَ ۝٧٩

80. ಅವರು, "ನಮಗೆ ಸಿಕ್ಕಿದರೂ ಕೇವಲ ಕೆಲವೇ ದಿನಗಳ ಶಿಕ್ಷೆ ಸಿಗಬಹುದಷ್ಟೆ ಹೊರತು ನರಕಾಗ್ನಿಯು ನಮ್ಮನ್ನು ಎಂದೂ ಸೋಂಕದು" ಎನ್ನುತ್ತಾರೆ. ಅವರೊಡನೆ ಕೇಳಿರಿ- "ಅಲ್ಲಾಹನಿಗೆ ಉಲ್ಲಂಘಿಸಲಾಗದಂತಹ ಕರಾರನ್ನೇನಾದರೂ ನೀವು ಅವನಿಂದ ಪಡೆದುಕೊಂಡಿರುತ್ತೀರಾ? ಅಥವಾ ನಿಮಗೆ ತಿಳಿಯದ ವಿಷಯವನ್ನು ನೀವು ಅಲ್ಲಾಹನ ಮೇಲೆ ಹೊರಿಸಿ ಹೇಳುತ್ತಿರುವಿರಾ?

وَقَالُوْا لَنْ تَمَسَّنَا النَّارُ اِلَّآ اَيَّامًا مَّعْدُوْدَةً ؕ قُلْ اَتَّخَذْتُمْ عِنْدَ اللّٰهِ عَهْدًا فَلَنْ يُّخْلِفَ اللّٰهُ عَهْدَهٗٓ اَمْ تَقُوْلُوْنَ عَلَى اللّٰهِ مَا لَا تَعْلَمُوْنَ ۝٨٠

81. ನಿಮ್ಮನ್ನು ನರಕಾಗ್ನಿಯು ಸ್ಪರ್ಶಿಸಲಾರದೇಕೆ? ಪಾಪಗಳಿಸುವವರೂ ಪಾಪಕರ್ಮಗಳಿಂದ ಆವರಿಸಲ್ಪಟ್ಟವರೂ ಯಾರೇ ಇರಲಿ, ಅವರು ನರಕದವರು ಮತ್ತು ಸದಾ ನರಕದಲ್ಲೇ ಇರುವರು.

بَلٰى مَنْ كَسَبَ سَيِّئَةً وَّاَحَاطَتْ بِهٖ خَطِيْٓــَٔتُهٗ فَاُولٰٓئِكَ اَصْحٰبُ النَّارِ ۚ هُمْ فِيْهَا خٰلِدُوْنَ ۝٨١

82. ವಿಶ್ವಾಸವಿಟ್ಟು ಸತ್ಕರ್ಮಗಳನ್ನು ಮಾಡುವವರೇ ಸ್ವರ್ಗದವರು ಮತ್ತು ಅವರು ಸದಾ ಸ್ವರ್ಗದಲ್ಲಿರುವರು."

وَالَّذِيْنَ اٰمَنُوْا وَعَمِلُوا الصّٰلِحٰتِ اُولٰٓئِكَ اَصْحٰبُ الْجَنَّةِ ۚ هُمْ فِيْهَا خٰلِدُوْنَ ۝٨٢

83. ಅಲ್ಲಾಹನ ಹೊರತು ಬೇರೆ ಯಾರ ದಾಸ್ಯ-ಆರಾಧನೆಯನ್ನೂ ಮಾಡಬಾರದೆಂದೂ ಮಾತಾಪಿತರು, ಬಂಧು ಬಳಗದವರು, ಅನಾಥರು ಮತ್ತು ನಿರ್ಗತಿಕರೊಂದಿಗೆ ಸೌಜನ್ಯದಿಂದ ವರ್ತಿಸಬೇಕೆಂದೂ ಜನರೊಡನೆ ಒಳ್ಳೆಯ ಮಾತುಗಳನ್ನಾಡಬೇಕೆಂದೂ ನಮಾಝುನ್ನು ಸಂಸ್ಥಾಪಿಸಬೇಕೆಂದೂ 'ಝಕಾತ್' (ಕಡ್ಡಾಯದಾನ) ಕೊಡಬೇಕೆಂದೂ ನಾವು ಇಸ್ರಾಈಲ್ ಸಂತತಿಯವರಿಂದ ಬಲವಾದ ಕರಾರನ್ನು ಪಡೆದ ಆ ಸಂದರ್ಭವನ್ನು ಸ್ಮರಿಸಿರಿ. ಆದರೆ ಕೆಲವೇ ಮಂದಿಯ ಹೊರತು ನೀವೆಲ್ಲರೂ ಆ ಕರಾರಿನಿಂದ ವಿಮುಖರಾದಿರಿ; ಇಂದಿಗೂ ವಿಮುಖರಾಗಿಯೇ ಇದ್ದೀರಿ.

وَاِذْ اَخَذْنَا مِيْثَاقَ بَنِيْٓ اِسْرَآءِيْلَ لَا تَعْبُدُوْنَ اِلَّا اللّٰهَ ۟ وَبِالْوَالِدَيْنِ اِحْسَانًا وَّذِي الْقُرْبٰى وَالْيَتٰمٰى وَالْمَسٰكِيْنِ وَقُوْلُوْا لِلنَّاسِ حُسْنًا وَّاَقِيْمُوا الصَّلٰوةَ وَاٰتُوا الزَّكٰوةَ ؕ ثُمَّ تَوَلَّيْتُمْ اِلَّا قَلِيْلًا مِّنْكُمْ وَاَنْتُمْ مُّعْرِضُوْنَ ۝٨٣

84. ನೀವು ಪರಸ್ಪರ ರಕ್ತಪಾತ ಮಾಡಬಾರದೆಂದೂ ಪರಸ್ಪರರನ್ನು ಗೃಹಬಾಹಿರರನ್ನಾಗಿ ಮಾಡಬಾರದೆಂದೂ ನಾವು ನಿಮ್ಮೊಡನೆ ಬಲವಾದ ಕರಾರನ್ನು ಪಡೆದ ಆ ಸಂದರ್ಭವನ್ನೂ ಸ್ಮರಿಸಿರಿ. ನೀವು ಅದನ್ನು ಒಪ್ಪಿಕೊಂಡಿದ್ದಿರಿ. ಅದಕ್ಕೆ ನೀವೇ ಸಾಕ್ಷಿಗಳಾಗಿರುತ್ತೀರಿ.

وَإِذْ أَخَذْنَا مِيثَاقَكُمْ لَا تَسْفِكُونَ دِمَاءَكُمْ
وَلَا تُخْرِجُونَ أَنفُسَكُم مِّن دِيَارِكُمْ ثُمَّ أَقْرَرْتُمْ
وَأَنتُمْ تَشْهَدُونَ ﴿٨٤﴾

85. ಆದರೆ, ಈಗ ನೀವೇ ನಿಮ್ಮ ಬಂಧು ಬಳಗದವರ ಕೊಲೆಗೈಯುತ್ತೀರಲ್ಲದೆ ನಿಮ್ಮೊಳಗಿನವರನ್ನೇ ಗೃಹಬಾಹಿರರನ್ನಾಗಿ ಮಾಡುತ್ತೀರಿ. ಅವರ ವಿರುದ್ಧ ಅಕ್ರಮ ಗುಂಪುಗಾರಿಕೆ ಮಾಡಿಕೊಳ್ಳುತ್ತೀರಿ. ಅವರು ಯುದ್ಧ ಸೆರೆಯಾಳುಗಳಾಗಿ ಬಂದಾಗ ಅವರ ವಿಮೋಚನೆಗಾಗಿ 'ವಿಮೋಚನಾ ಮೌಲ್ಯ' ಪಡೆದೇ ಅವರನ್ನು ಬಿಡುತ್ತೀರಿ. ವಸ್ತುತಃ ಅವರನ್ನು ಗೃಹಬಾಹಿರರನ್ನಾಗಿ ಮಾಡುವುದನ್ನೇ ನಿಮಗೆ ನಿಷೇಧಿಸಲಾಗಿತ್ತು. ನೀವೇನು ಗ್ರಂಥದ ಒಂದಂಶದ ಮೇಲೆ ವಿಶ್ವಾಸವಿಟ್ಟು ಇನ್ನೊಂದಂಶವನ್ನು ನಿಷೇಧಿಸುತ್ತೀರಾ? ನಿಮ್ಮ ಪೈಕಿ ಹೀಗೆ ಮಾಡುವವರ ಶಿಕ್ಷೆಯು ಇಹದಲ್ಲಿ ಅವಮಾನಿತ ಜೀವನವೂ ಪರದಲ್ಲಿ ಘೋರ ಯಾತನೆಯ ಕಡೆಗೆ ತಳ್ಳಲ್ಪಡುವುದೂ ಆಗಿರಬೇಕಲ್ಲದೆ ಇನ್ನೇನು? ನೀವು ಮಾಡುವುದರ ಬಗ್ಗೆ ಅಲ್ಲಾಹನು ಅಶ್ರದ್ಧನಲ್ಲ.

ثُمَّ أَنتُمْ هَٰؤُلَاءِ تَقْتُلُونَ أَنفُسَكُمْ وَتُخْرِجُونَ
فَرِيقًا مِّنكُم مِّن دِيَارِهِمْ تَظَاهَرُونَ عَلَيْهِم
بِالْإِثْمِ وَالْعُدْوَانِ ۖ وَإِن يَأْتُوكُمْ أُسَارَىٰ
تُفَادُوهُمْ وَهُوَ مُحَرَّمٌ عَلَيْكُمْ إِخْرَاجُهُمْ ۚ
أَفَتُؤْمِنُونَ بِبَعْضِ الْكِتَابِ وَتَكْفُرُونَ بِبَعْضٍ ۚ
فَمَا جَزَاءُ مَن يَفْعَلُ ذَٰلِكَ مِنكُمْ إِلَّا خِزْيٌ
فِي الْحَيَاةِ الدُّنْيَا ۖ وَيَوْمَ الْقِيَامَةِ يُرَدُّونَ إِلَىٰ
أَشَدِّ الْعَذَابِ ۗ وَمَا اللَّهُ بِغَافِلٍ عَمَّا تَعْمَلُونَ ﴿٨٥﴾

86. ಇವರು ತಮ್ಮ ಪರಲೋಕವನ್ನು ಮಾರಿ ಇಹಲೋಕವನ್ನು ಖರೀದಿಸಿದವರು. ಆದುದರಿಂದ ಇವರ ಶಿಕ್ಷೆಯಲ್ಲಿ ಸ್ವಲ್ಪವೂ ಕಡಿಮೆಯಾಗದು ಮತ್ತು ಅವರಿಗೆ ಯಾವ ಸಹಾಯವೂ ಒದಗದು.

أُولَٰئِكَ الَّذِينَ اشْتَرَوُا الْحَيَاةَ الدُّنْيَا بِالْآخِرَةِ ۖ
فَلَا يُخَفَّفُ عَنْهُمُ الْعَذَابُ وَلَا هُمْ يُنصَرُونَ ﴿٨٦﴾ ع

87. ನಾವು 'ಮೂಸಾ'ರಿಗೆ ಗ್ರಂಥವನ್ನು ಕೊಟ್ಟೆವು. ತರುವಾಯ ನಿರಂತರ ಸಂದೇಶವಾಹಕರನ್ನು ಕಳುಹಿಸಿದೆವು. ಕೊನೆಗೆ ವ್ಯಕ್ತವಾದ ದೃಷ್ಟಾಂತಗಳನ್ನು ಕೊಟ್ಟು, 'ಮರ್ಯಮ'ರ ಪುತ್ರ 'ಈಸಾ'ರನ್ನು ಕಳುಹಿಸಿ, ಪವಿತ್ರಾತ್ಮನ[30] ಮೂಲಕ ಅವರಿಗೆ ಸಹಾಯ ನೀಡಿದೆವು. ದೇವ ಸಂದೇಶವಾಹಕರು ನಿಮ್ಮ ಚಿತ್ತಾಕಾಂಕ್ಷೆಗಳಿಗೆ ವಿರೋಧವಾದುದನ್ನು ನಿಮಗೆ ತಂದಾಗಲೆಲ್ಲ ನೀವು ಅವರಿಗೆದುರು

وَلَقَدْ آتَيْنَا مُوسَى الْكِتَابَ وَقَفَّيْنَا مِن بَعْدِهِ
بِالرُّسُلِ ۖ وَآتَيْنَا عِيسَى ابْنَ مَرْيَمَ الْبَيِّنَاتِ وَ
أَيَّدْنَاهُ بِرُوحِ الْقُدُسِ ۗ أَفَكُلَّمَا جَاءَكُمْ رَسُولٌ
بِمَا لَا تَهْوَىٰ أَنفُسُكُمُ اسْتَكْبَرْتُمْ فَفَرِيقًا

30. 'ಪವಿತ್ರಾತ್ಮ' ಎಂದರೆ ದಿವ್ಯಜ್ಞಾನವೂ ಆಗಿದೆ. ದಿವ್ಯವಾಣಿಯನ್ನು ಮುಟ್ಟಿಸುತ್ತಿದ್ದ ಜಿಬ್‌ರೀಲ್‌ರಿಗೂ(ಅ) ಅಂತೆಯೇ ಅಲ್ಲಾಹನು ಪವಿತ್ರ ಗುಣಗಳನ್ನಿಟ್ಟಿದ್ದ ಹ. ಈಸಾರ(ಅ) ಪವಿತ್ರಾತ್ಮಕ್ಕೂ ಇದು ಅನ್ವಯವಾಗುತ್ತದೆ.

ಉದ್ಧಟತನವನ್ನೇ ತೋರಿದಿರಲ್ಲವೇ? ಕೆಲವರನ್ನು ಸುಳ್ಳಾಗಿಸಿದಿರಿ, ಇನ್ನು ಕೆಲವರನ್ನು ವಧಿಸಿಬಿಟ್ಟಿರಿ.

كَذَّبْتُمْ وَفَرِيقًا تَقْتُلُونَ ٨٧

88. ಅವರು, "ನಮ್ಮ ಹೃದಯಗಳು ಭದ್ರವಾಗಿವೆ" ಎನ್ನುತ್ತಾರೆ ಹಾಗಲ್ಲ, ವಾಸ್ತವದಲ್ಲಿ ಅವರ ಸತ್ಯನಿಷೇಧದ ಕಾರಣದಿಂದಾಗಿ ಅವರ ಮೇಲೆ ಅಲ್ಲಾಹನ ಅಭಿಶಾಪ ಬಿದ್ದಿದೆ. ಆದುದರಿಂದ ಅವರು ಸ್ವಲ್ಪವೇ ವಿಶ್ವಾಸವಿರಿಸುತ್ತಾರೆ.

وَقَالُوا قُلُوبُنَا غُلْفٌ ۚ بَل لَّعَنَهُمُ اللَّهُ بِكُفْرِهِمْ
فَقَلِيلًا مَّا يُؤْمِنُونَ ٨٨

89. ಇದೀಗ ಅಲ್ಲಾಹನ ವತಿಯಿಂದ ಅವರ ಬಳಿಗೆ ಬಂದ ಗ್ರಂಥದ ಬಗ್ಗೆ ಅವರ ವರ್ತನೆ ಹೇಗಿದೆ? ಅವರ ಬಳಿ ಮೊದಲೇ ಇದ್ದ ಗ್ರಂಥವನ್ನು ಅದು ದೃಢೀಕರಿಸಿದ್ದರೂ ಅದು ಬರುವುದಕ್ಕೆ ಮುಂಚೆ ಸತ್ಯನಿಷೇಧಿಗಳೆದುರು ವಿಜಯಕ್ಕಾಗಿ ಅವರೇ ಪ್ರಾರ್ಥಿಸುತ್ತಿದ್ದರೂ[31] -ಅದು ಅವರ ಬಳಿ ಬಂದಾಗ ಅದನ್ನು ಅವರು ಗುರುತಿಸಿಕೊಂಡರೂ ನಿಷೇಧಿಸಿಯೇ ಬಿಟ್ಟರು. ಸತ್ಯನಿಷೇಧಿಗಳ ಮೇಲೆ ಅಲ್ಲಾಹನ ಅಭಿಶಾಪವಿದೆ.

وَلَمَّا جَاءَهُمْ كِتَابٌ مِّنْ عِندِ اللَّهِ مُصَدِّقٌ
لِّمَا مَعَهُمْ وَكَانُوا مِن قَبْلُ يَسْتَفْتِحُونَ عَلَى
الَّذِينَ كَفَرُوا فَلَمَّا جَاءَهُم مَّا عَرَفُوا كَفَرُوا
بِهِ ۚ فَلَعْنَةُ اللَّهِ عَلَى الْكَافِرِينَ ٨٩

90. ಅವರು ಅದೆಂತಹ ನಿಕೃಷ್ಟ ವಿಧಾನದಿಂದ ತಮ್ಮ ಮನಸ್ಸುಗಳನ್ನು ಸಮಾಧಾನ ಪಡಿಸುತ್ತಾರೆ[32] ಅಲ್ಲಾಹನು ತನ್ನ ಅನುಗ್ರಹ (ದಿವ್ಯವಾಣಿ ಮತ್ತು ಪ್ರವಾದಿತ್ವ)ವನ್ನು ತನ್ನ ದಾಸರ ಪೈಕಿ ತನಗಿಷ್ಟ ಬಂದವನಿಗೆ ಅನುಗ್ರಹಿಸಿದನೆಂಬ ದ್ವೇಷದಿಂದ ಮಾತ್ರ ಅವನು ಅವತೀರ್ಣಗೊಳಿಸಿದ ಮಾರ್ಗದರ್ಶನವನ್ನು ಅವರು ನಿರಾಕರಿಸಿದರು.[33] ಆದುದರಿಂದ ಈಗ ಅವರು ಕ್ರೋಧದ ಮೇಲೆ ಕ್ರೋಧಕ್ಕೆ ಪಾತ್ರರಾದರು ಮತ್ತು ಇಂತಹ ಸತ್ಯನಿಷೇಧಿಗಳಿಗೆ ಅತ್ಯಂತ ಅಪಮಾನಕರ ಶಿಕ್ಷೆ ಕಾದಿದೆ.

بِئْسَمَا اشْتَرَوْا بِهِ أَنفُسَهُمْ أَن يَكْفُرُوا بِمَا أَنزَلَ
اللَّهُ بَغْيًا أَن يُنَزِّلَ اللَّهُ مِن فَضْلِهِ عَلَىٰ مَن
يَشَاءُ مِنْ عِبَادِهِ ۖ فَبَاءُوا بِغَضَبٍ عَلَىٰ غَضَبٍ ۚ
وَلِلْكَافِرِينَ عَذَابٌ مُّهِينٌ ٩٠

91. "ಅಲ್ಲಾಹನು ಅವತೀರ್ಣಗೊಳಿಸಿದುದರ ಮೇಲೆ ವಿಶ್ವಾಸವಿಡಿರಿ" ಎಂದು ಅವರೊಡನೆ ಹೇಳಿದಾಗ, "ನಮಗೆ (ಇಸ್ರಾಈಲ್ ಕುಲಕ್ಕೆ) ಅವತೀರ್ಣವಾದುದರಲ್ಲಿ ಮಾತ್ರ ನಾವು

وَإِذَا قِيلَ لَهُمْ آمِنُوا بِمَا أَنزَلَ اللَّهُ قَالُوا
نُؤْمِنُ بِمَا أُنزِلَ عَلَيْنَا وَيَكْفُرُونَ بِمَا وَرَاءَهُ

31. ಪ್ರವಾದಿವರ್ಯರ(ಸ) ಆಗಮನಕ್ಕೆ ಮೊದಲು ಯಹೂದ್ಯರು, ತಮ್ಮ ಪ್ರವಾದಿಗಳು ಭವಿಷ್ಯ ನುಡಿದಿದ್ದ ಆ ಪ್ರವಾದಿಯ ಆಗಮನವನ್ನು ಕಾತರದಿಂದ ಕಾಯುತ್ತಿದ್ದರು. ಆ ಪ್ರವಾದಿ ಬೇಗನೇ ಆಗಮಿಸಿ ಸತ್ಯನಿಷೇಧಿಗಳ ಮೇಲ್ಮೆ ಕೊನೆಗೊಳ್ಳಲಿ ಮತ್ತು ನಮ್ಮ ಉಚ್ಛ್ರಾಯದ ಯುಗ ಆರಂಭಗೊಳ್ಳಲಿ ಎಂದು ಅವರು ಪ್ರಾರ್ಥಿಸುತ್ತಲೂ ಇದ್ದರು.

32. ಇದರ ಇನ್ನೊಂದು ಅನುವಾದ ಹೀಗಾಗಬಹುದು, "ಅವರು ತಮ್ಮ ಪ್ರಾಣಗಳನ್ನು ಅದೆಷ್ಟು ನಿಕೃಷ್ಟ ವಸ್ತುವಿಗಾಗಿ ವಿಕ್ರಯಿಸುತ್ತಿದ್ದಾರೆ." ಅಂದರೆ ವಿಜಯ, ಸೌಭಾಗ್ಯ ಮತ್ತು ಮೋಕ್ಷವನ್ನೇ ಅವರು ಪರಿತ್ಯಜಿಸಿದರು.

33. ಬರಲಿರುವ ಪ್ರವಾದಿ ತಮ್ಮ ಸಮುದಾಯದಲ್ಲೇ ಹುಟ್ಟಬೇಕೆಂದು ಅವರು ಭಾವಿಸುತ್ತಿದ್ದರು. ಆದರೆ ಅವರು ತಮಗಿಂತ ಕೀಳೆಂದು ಭಾವಿಸುತ್ತಿದ್ದ ಸಮುದಾಯದಲ್ಲಿ ಆ ಪ್ರವಾದಿ ಹುಟ್ಟಿದಾಗ ಯಹೂದಿಯರು ಅವರನ್ನು ನಿರಾಕರಿಸಿದರು. ಅಲ್ಲಾಹನು ಅವರೊಡನೆ ಕೇಳಿಯೇ ಪ್ರವಾದಿಯನ್ನು ಕಳುಹಿಸಬೇಕಿತ್ತು ಎಂಬಂತಿದೆ ಅವರ ವಾದ.

ವಿಶ್ವಾಸವಿಡುತ್ತೇವೆ" ಎಂದು ಅವರು ಹೇಳುತ್ತಾರೆ. ಅದಕ್ಕೆ ಹೊರತಾಗಿರುವುದನ್ನು ಅವರು ನಿಷೇಧಿಸುತ್ತಾರೆ. ವಸ್ತುತಃ ಅದು ಸತ್ಯವಾಗಿದ್ದು ಅವರ ಬಳಿ ಮೊದಲೇ ಇರುವ ಬೋಧನೆಯನ್ನು ದೃಢೀಕರಿಸುತ್ತದೆ. "ಸರಿ, ನೀವು ನಿಮ್ಮ ಬಳಿಗೆ ಬಂದಿರುವ ಬೋಧನೆಯ ಮೇಲೆ ಮಾತ್ರ ವಿಶ್ವಾಸವಿರಿಸುವವರಾಗಿದ್ದರೆ, ಇದಕ್ಕಿಂತ ಮುಂಚೆ (ಇಸ್ರಾಈಲ್ ಸಂತತಿಯಲ್ಲೇ ಜನಿಸಿದ್ದ) ಅಲ್ಲಾಹನ ಸಂದೇಶವಾಹಕರನ್ನು ನೀವೇಕೆ ವಧಿಸುತ್ತಿದ್ದಿರಿ?" ಎಂದು ಅವರೊಡನೆ ಕೇಳಿರಿ.

وَهُوَ الْحَقُّ مُصَدِّقًا لِّمَا مَعَهُمْ ۗ قُلْ فَلِمَ تَقْتُلُونَ
أَنبِيَاءَ اللَّهِ مِن قَبْلُ إِن كُنتُم مُّؤْمِنِينَ ﴿٩١﴾

92. ಮೂಸಾ ಎಂತೆಂತಹ ಸ್ಪಷ್ಟ ಆಧಾರಗಳ ಸಹಿತ ನಿಮ್ಮಲ್ಲಿ ಬಂದರು! ಆದರೂ ಅವರು ಬೆನ್ನು ತಿರುಗಿಸಿದ ಕೂಡಲೆ ನೀವು ಕರುವನ್ನು ಆರಾಧಿಸುವಂತಹ ಅಕ್ರಮಿಗಳಾದಿರಿ.

وَلَقَدْ جَاءَكُم مُّوسَىٰ بِالْبَيِّنَاتِ ثُمَّ اتَّخَذْتُمُ
الْعِجْلَ مِن بَعْدِهِ وَأَنتُمْ ظَالِمُونَ ﴿٩٢﴾

93. ನಾವು ತೂರ(ಪರ್ವತ)ನ್ನು ನಿಮ್ಮ ಮೇಲೆ ಎತ್ತಿ ಹಿಡಿದು ನಿಮ್ಮಿಂದ ಬಲವಾದ ಕರಾರನ್ನು ಪಡೆದ ಸಂದರ್ಭವನ್ನು ಸ್ಮರಿಸಿರಿ. "ನಾವು ನಿಮಗೆ ಕೊಡುತ್ತಿರುವ ಮಾರ್ಗದರ್ಶನವನ್ನು ಕಟ್ಟುನಿಟ್ಟಾಗಿ ಪಾಲಿಸಿರಿ ಮತ್ತು ಕಿವಿಗೊಟ್ಟು ಆಲಿಸಿರಿ" ಎಂದು ನಿಮಗೆ ತಾಕೀತು ಮಾಡಿದ್ದೆವು. ನಿಮ್ಮ ಪೂರ್ವಿಕರು, "ನಾವು ಕೇಳಿದೆವು ಆದರೆ ಅಂಗೀಕರಿಸಲಾರೆವು" ಎಂದರು. ಅವರ ಮನಸ್ಸಿನಲ್ಲಿ ಕರುವೇ ನೆಲೆಸಿ ಹೋಗಿರುವಷ್ಟು ಅವರು ಮಿಥ್ಯಾರಾಧಕರಾಗಿದ್ದರು. ಹೇಳಿರಿ, ನೀವು ಸತ್ಯವಿಶ್ವಾಸಿಗಳಾಗಿರುವಿರಾದರೆ ಇಂತಹ ನೀಚ ಕಾರ್ಯಗಳ ಆದೇಶವನ್ನು ಕೊಡುತ್ತಿರುವ ನಿಮ್ಮ ವಿಶ್ವಾಸ ನಿಜಕ್ಕೂ ಬಹಳ ವಿಚಿತ್ರ ತರದ್ದಾಗಿದೆ.

وَإِذْ أَخَذْنَا مِيثَاقَكُمْ وَرَفَعْنَا فَوْقَكُمُ الطُّورَ
خُذُوا مَا آتَيْنَاكُم بِقُوَّةٍ وَاسْمَعُوا ۖ قَالُوا سَمِعْنَا
وَعَصَيْنَا وَأُشْرِبُوا فِي قُلُوبِهِمُ الْعِجْلَ
بِكُفْرِهِمْ ۚ قُلْ بِئْسَمَا يَأْمُرُكُم بِهِ إِيمَانُكُمْ
إِن كُنتُم مُّؤْمِنِينَ ﴿٩٣﴾

94. "ಪರಲೋಕ ಗೃಹವು ಸಮಸ್ತ ಮಾನವರನ್ನು ಬಿಟ್ಟು ಕೇವಲ ನಿಮಗಾಗಿಯೇ ಅಲ್ಲಾಹನ ಬಳಿ ಕಾಯ್ದಿರಿಸಲ್ಪಟ್ಟಿದೆಯೆಂಬ ನಿಮ್ಮ ಭಾವನೆ ಸತ್ಯವೆಂದಾದರೆ ನೀವು ಮರಣವನ್ನು ಅಪೇಕ್ಷಿಸಿರಿ" ಎಂದು ಅವರೊಡನೆ ಹೇಳಿರಿ.

قُلْ إِن كَانَتْ لَكُمُ الدَّارُ الْآخِرَةُ عِندَ اللَّهِ
خَالِصَةً مِّن دُونِ النَّاسِ فَتَمَنَّوُا الْمَوْتَ
إِن كُنتُمْ صَادِقِينَ ﴿٩٤﴾

95. ಅವರು ಮರಣವನ್ನೆಂದೂ ಬಯಸರೆಂಬುದು ಖಚಿತ. ಏಕೆಂದರೆ ಅವರು ತಮ್ಮ ಕೈಗಳಿಂದ ಏನನ್ನು ದುಡಿದು ಅಲ್ಲಿಗೆ ಕಳುಹಿಸಿರುವರೋ ಅದರ ಬೇಡಿಕೆ ಇದೇ ಆಗಿದೆ. (ಅರ್ಥಾತ್ ಅಲ್ಲಿಗೆ ಹೋಗಲು ಬಯಸದಿರುವುದು). ಅಲ್ಲಾಹನು ಆ ಅಕ್ರಮಿಗಳನ್ನು ಚೆನ್ನಾಗಿ ಬಲ್ಲನು.

وَلَن يَتَمَنَّوْهُ أَبَدًا بِمَا قَدَّمَتْ أَيْدِيهِمْ ۗ
وَاللَّهُ عَلِيمٌ بِالظَّالِمِينَ ﴿٩٥﴾

96. ನೀವು ಅವರನ್ನು ಬದುಕಿನ ಮೇಲೆ ಅತ್ಯಧಿಕ ಆಶೆಯುಳ್ಳವರಾಗಿ ಕಾಣುವಿರಿ. ಈ ವಿಷಯದಲ್ಲಿ ಇವರು ಬಹುದೇವಾರಾಧಕರಿಗಿಂತಲೂ ಮಿಗಿಲಾಗಿದ್ದಾರೆ. ಅವರ ಪೈಕಿ ಪ್ರತಿಯೊಬ್ಬನೂ ತಾನು ಸಾವಿರ ವರ್ಷ ಬದುಕಬೇಕೆಂದು ಬಯಸುತ್ತಾನೆ. ಆದರೆ ದೀರ್ಘಾಯುಷ್ಯವು ಅವನನ್ನು ಶಿಕ್ಷೆಯಿಂದ ದೂರವಿರಿಸಲಾರದು. ಅವರು ಯಾವ ರೀತಿಯ ಕರ್ಮಗಳನ್ನೆಸಗುತ್ತಿದ್ದಾರೆ ಎಂಬುದನ್ನು ಅಲ್ಲಾಹನು ಸೂಕ್ಷ್ಮವಾಗಿ ವೀಕ್ಷಿಸುತ್ತಿದ್ದಾನೆ.

وَلَتَجِدَنَّهُمْ اَحْرَصَ النَّاسِ عَلٰى حَيٰوةٍ ۚ وَ
مِنَ الَّذِيْنَ اَشْرَكُوْا ۚۛ يَوَدُّ اَحَدُهُمْ لَوْ يُعَمَّرُ
اَلْفَ سَنَةٍ ۚ وَمَا هُوَ بِمُزَحْزِحِهٖ مِنَ الْعَذَابِ
اَنْ يُّعَمَّرَ ؕ وَاللّٰهُ بَصِيْرٌۢ بِمَا يَعْمَلُوْنَ ﴿٩٦﴾ ع

معانقة ٢

97. ಅವರೊಡನೆ ಹೇಳಿರಿ, 'ಜಿಬ್‌ರೀಲ್'ರೊಂದಿಗೆ ಹಗೆತನವನ್ನಿರಿಸಿದವನು,[34] 'ಜಿಬ್‌ರೀಲ್', ಅಲ್ಲಾಹನ ಅಪ್ಪಣೆಯಿಂದಲೇ ಈ ಕುರ್‌ಆನನ್ನು ನಿಮ್ಮ ಹೃದಯದಲ್ಲಿ ಇಳಿಸುತ್ತಾನೆಂಬುದು ತಿಳಿದಿರಲಿ. ಅದು ಹಿಂದೆ ಬಂದಿದ್ದ ಗ್ರಂಥಗಳನ್ನು ದೃಢೀಕರಿಸುತ್ತದೆ ಮತ್ತು ಅನುಮೋದಿಸುತ್ತದೆ ಮತ್ತು ಅದು ಸತ್ಯವಿಶ್ವಾಸಿಗಳಿಗೆ ಸನ್ಮಾರ್ಗದರ್ಶನ ಹಾಗೂ ವಿಜಯದ ಸುವಾರ್ತೆಯಾಗಿ ಬಂದಿದೆ.

قُلْ مَنْ كَانَ عَدُوًّا لِّجِبْرِيْلَ فَاِنَّهٗ نَزَّلَهٗ
عَلٰى قَلْبِكَ بِاِذْنِ اللّٰهِ مُصَدِّقًا لِّمَا بَيْنَ يَدَيْهِ
وَهُدًى وَّبُشْرٰى لِلْمُؤْمِنِيْنَ ﴿٩٧﴾

98. (ಜಿಬ್‌ರೀಲ್‌ರ ಮೇಲೆ ಅವರ ಹಗೆತನಕ್ಕೆ ಕಾರಣವು ಇದೇ ಎಂದಾದರೆ ಅವರೊಡನೆ ಹೇಳಿರಿ) ಯಾರಾದರೂ ಅಲ್ಲಾಹನ, ಅವನ ದೇವಚರರ, ಅವನ ಸಂದೇಶವಾಹಕರ, ಜಿಬ್‌ರೀಲ್ ಮತ್ತು ಮೀಕಾಈಲರ ಶತ್ರುವಾಗಿದ್ದರೆ, ನಿಶ್ಚಯವಾಗಿಯೂ ಅಲ್ಲಾಹನು ಅಂತಹ ಸತ್ಯನಿಷೇಧಿಗಳ ಶತ್ರುವಾಗಿದ್ದಾನೆ.

مَنْ كَانَ عَدُوًّا لِّلّٰهِ وَمَلٰٓئِكَتِهٖ وَرُسُلِهٖ وَ
جِبْرِيْلَ وَمِيْكٰلَ فَاِنَّ اللّٰهَ عَدُوٌّ لِّلْكٰفِرِيْنَ ﴿٩٨﴾

99. ನಾವು ನಿಮಗೆ ಅವತೀರ್ಣಗೊಳಿಸಿರುವ ಸೂಕ್ತಗಳು ಸುಸ್ಪಷ್ಟ ಸತ್ಯವನ್ನು ಪ್ರಕಟಿಸುವವುಗಳಾಗಿರುತ್ತವೆ. ಕರ್ಮಭ್ರಷ್ಟರು ಮಾತ್ರ ಅವುಗಳ ಅನುಸರಣೆಯನ್ನು ನಿರಾಕರಿಸುತ್ತಾರೆ.

وَلَقَدْ اَنْزَلْنَآ اِلَيْكَ اٰيٰتٍۭ بَيِّنٰتٍ ۚ وَمَا يَكْفُرُ
بِهَآ اِلَّا الْفٰسِقُوْنَ ﴿٩٩﴾

100. ಅವರು ಯಾವುದಾದರೊಂದು ಕರಾರು ಮಾಡಿಕೊಂಡಾಗಲೆಲ್ಲಾ ಅವರ ಪೈಕಿ ಒಂದಲ್ಲೊಂದು ಪಂಗಡವು ಅದನ್ನು ಮುರಿದು ಬಿಡಲಿಲ್ಲವೇ? ನಿಜವಾಗಿ ಅವರಲ್ಲಿ ಹೆಚ್ಚಿನವರು ವಿಶ್ವಾಸ ವಿರಿಸುವುದಿಲ್ಲ.

اَوَكُلَّمَا عٰهَدُوْا عَهْدًا نَّبَذَهٗ فَرِيْقٌ مِّنْهُمْ ؕ
بَلْ اَكْثَرُهُمْ لَا يُؤْمِنُوْنَ ﴿١٠٠﴾

101. ಅಲ್ಲಾಹನ ವತಿಯಿಂದ ಸಂದೇಶವಾಹಕನೊಬ್ಬನು ಅವರ ಬಳಿ ಇದ್ದ ಗ್ರಂಥವನ್ನು ದೃಢಪಡಿಸುತ್ತಲೂ ಅನುಮೋದಿಸುತ್ತಲೂ

وَلَمَّا جَآءَهُمْ رَسُوْلٌ مِّنْ عِنْدِ اللّٰهِ مُصَدِّقٌ

34. ಯಹೂದಿಯರು ಪ್ರವಾದಿವರ್ಯರನ್ನು(ಸ) ಮತ್ತು ಅವರ ಮೇಲೆ ವಿಶ್ವಾಸವಿಟ್ಟವರನ್ನು ಹಳಿಯುತ್ತಿದ್ದುದು ಮಾತ್ರವಲ್ಲದೆ ಅಲ್ಲಾಹನ ಶ್ರೇಷ್ಠ ದೇವಚರರಾದ ಜಿಬ್‌ರೀಲ್‌ರನ್ನೂ(ಅ) ಬಯ್ಯುತ್ತಿದ್ದರು. ಅವರನ್ನು ತಮ್ಮ ಶತ್ರುವೆನ್ನುತ್ತಿದ್ದರು. ಅವರು, 'ಅನುಗ್ರಹದ ದೇವಚರರಲ್ಲ, ಯಾತನೆಯ ದೇವಚರ' ಎನ್ನುತ್ತಿದ್ದರು.

لِّمَا مَعَهُمْ نَبَذَ فَرِيقٌ مِّنَ الَّذِينَ أُوتُوا الْكِتَابَ
كِتَابَ اللَّهِ وَرَاءَ ظُهُورِهِمْ كَأَنَّهُمْ لَا يَعْلَمُونَ ﴿١٠١﴾
وَاتَّبَعُوا مَا تَتْلُو الشَّيَاطِينُ عَلَىٰ مُلْكِ سُلَيْمَانَ
وَمَا كَفَرَ سُلَيْمَانُ وَلَٰكِنَّ الشَّيَاطِينَ كَفَرُوا
يُعَلِّمُونَ النَّاسَ السِّحْرَ وَمَا أُنزِلَ عَلَى
الْمَلَكَيْنِ بِبَابِلَ هَارُوتَ وَمَارُوتَ ۚ وَمَا
يُعَلِّمَانِ مِنْ أَحَدٍ حَتَّىٰ يَقُولَا إِنَّمَا نَحْنُ
فِتْنَةٌ فَلَا تَكْفُرْ ۖ فَيَتَعَلَّمُونَ مِنْهُمَا مَا يُفَرِّقُونَ
بِهِ بَيْنَ الْمَرْءِ وَزَوْجِهِ ۚ وَمَا هُم بِضَارِّينَ
بِهِ مِنْ أَحَدٍ إِلَّا بِإِذْنِ اللَّهِ ۚ وَيَتَعَلَّمُونَ مَا
يَضُرُّهُمْ وَلَا يَنفَعُهُمْ ۚ وَلَقَدْ عَلِمُوا لَمَنِ
اشْتَرَاهُ مَا لَهُ فِي الْآخِرَةِ مِنْ خَلَاقٍ ۚ وَ
لَبِئْسَ مَا شَرَوْا بِهِ أَنفُسَهُمْ ۚ لَوْ كَانُوا يَعْلَمُونَ ﴿١٠٢﴾

ಅವರಲ್ಲಿಗೆ ಬಂದಾಗ, ಗ್ರಂಥದವರ ಪೈಕಿ ಒಂದು ಪಂಗಡವು ಏನೂ ತಿಳಿಯದವರಂತೆ ಅಲ್ಲಾಹನ ಗ್ರಂಥವನ್ನು ಅಲಕ್ಷಿಸಿತು.

102. ಮತ್ತು ಶೈತಾನರು ಸುಲೈಮಾನರ ಸಾಮ್ರಾಜ್ಯದ ಹೆಸರು ಹೇಳಿ ಮುಂದಿರಿಸುತ್ತಿದ್ದುದನ್ನು ಅವರು ಅನುಸರಿಸತೊಡಗಿದರು. ವಸ್ತುತಃ ಸುಲೈಮಾನರು ಎಂದೂ ಸತ್ಯನಿಷೇಧ ಕೈಗೊಂಡಿರಲಿಲ್ಲ. ಜನರಿಗೆ ಇಂದ್ರಜಾಲ ವಿದ್ಯೆಯನ್ನು ಕಲಿಸುತ್ತಿದ್ದ ಆ ಶೈತಾನರೇ ಸತ್ಯನಿಷೇಧ ಕೈಗೊಂಡಿದ್ದರು. ಅವರು ಬೆಬಿಲೋನಿನಲ್ಲಿ 'ಹಾರೂತ್' ಮತ್ತು 'ಮಾರೂತ್' ಎಂಬೀರ್ವ ದೇವಚರರ ಮೇಲೆ ಇಳಿಸಲಾಗಿದ್ದ ವಸ್ತುವಿನ ಹಿಂದೆ ಬಿದ್ದರು. ವಸ್ತುತಃ (ಆ ದೇವಚರರು) ಯಾರಿಗಾದರೂ ಅದರ ಶಿಕ್ಷಣವನ್ನು ಕೊಡುತ್ತಿದ್ದಾಗಲೆಲ್ಲಾ, "ನೋಡು ನಾವು ಕೇವಲ ಒಂದು ಪರೀಕ್ಷೆ ಆಗಿದ್ದೇವೆ, ನೀನು ಸತ್ಯನಿಷೇಧಕ್ಕೆ ಒಳಗಾಗಬೇಡ" ಎಂದು ಮೊದಲು ಸುಸ್ಪಷ್ಟ ಎಚ್ಚರಿಕೆ ಕೊಡುತ್ತಿದ್ದರು.[35] ಆದರೂ ಇವರು ಅವರಿಂದ ಪತಿ-ಪತ್ನಿಯರಲ್ಲಿ ವಿರಸ ವುಂಟುಮಾಡುವಂತಹದ್ದನ್ನು ಕಲಿಯುತ್ತಿದ್ದರು. ಅಲ್ಲಾಹನ ಅನುಜ್ಞೆಯ ಹೊರತು ಅವರು ಅದರ ಮೂಲಕ ಯಾರಿಗೂ ಕೇಡುಂಟು ಮಾಡುವಂತಿರಲಿಲ್ಲವೆಂಬುದು ಸ್ಪಷ್ಟವಾಗಿತ್ತು. ಆದರೂ ಅವರಿಗೆ ಸ್ವತಃ ಹಾನಿಕಾರಕವಾದ ಹಾಗೂ ಲಾಭದಾಯಕ ವಾಗಿರದಿದ್ದುದನ್ನು ಅವರು ಕಲಿಯುತ್ತಿದ್ದರು. ಅದನ್ನು ಖರೀದಿಸಿದವನಿಗೆ ಪರಲೋಕದಲ್ಲಿ ಏನೂ ಪಾಲಿಲ್ಲವೆಂಬುದನ್ನು ಅವರು ಚೆನ್ನಾಗಿ ಅರಿತಿದ್ದರು. ಅವರು ತಮ್ಮ ಜೀವಗಳ ಬದಲಿಗೆ ಖರೀದಿಸಿದ ಸೊತ್ತು ಅದೆಷ್ಟು ನಿಕೃಷ್ಟ! ಅಕಟ! ಅವರಿಗೆ ಇದು ತಿಳಿದಿರುತ್ತಿದ್ದರೆ!

وَلَوْ أَنَّهُمْ آمَنُوا وَاتَّقَوْا لَمَثُوبَةٌ مِّنْ عِندِ
اللَّهِ خَيْرٌ ۖ لَّوْ كَانُوا يَعْلَمُونَ ﴿١٠٣﴾ ع

103. ಅವರು ಸತ್ಯವಿಶ್ವಾಸ ಮತ್ತು ಧರ್ಮನಿಷ್ಠೆಗಳನ್ನು ಸ್ವೀಕರಿಸುತ್ತಿದ್ದರೆ ಅಲ್ಲಾಹನ ಬಳಿ ಅವರಿಗೆ ಲಭಿಸುತ್ತಿದ್ದ ಪ್ರತಿಫಲವು ಅದಕ್ಕಿಂತ ಎಷ್ಟೋ ಉತ್ತಮವಾಗಿರುತ್ತಿತ್ತು. ಅಕಟ! ಅವರಿಗಿದು ತಿಳಿದಿರುತ್ತಿದ್ದರೆ!

35. ಈ ಸೂಕ್ತದ ವ್ಯಾಖ್ಯಾನದ ಕುರಿತು ಅನೇಕ ಅಭಿಪ್ರಾಯಗಳಿವೆ. ಆದರೆ ನಾನು ಅರ್ಥ ಮಾಡಿಕೊಂಡಂತೆ ಸಮಸ್ತ ಬನೀಇಸ್ರಾಈಲ್ ಸಮುದಾಯ, ಬೆಬಿಲೋನಿಯಾದಲ್ಲಿ ಸೆರೆಯಾಳುಗಳು ಮತ್ತು ದಾಸರಾಗಿ ಮಾರ್ಪಟ್ಟಿದ್ದ ಕಾಲದಲ್ಲಿ ಅಲ್ಲಾಹನು ಇಬ್ಬರು ದೇವಚರರನ್ನು ಅವರ ಬಳಿ ಮನುಷ್ಯರ ರೂಪದಲ್ಲಿ ಕಳುಹಿಸಿರಬಹುದು. ಲೂತ್ ಸಮುದಾಯದ ಬಳಿಗೆ ದೇವಚರರು ಸುಂದರ ಬಾಲಕರ ರೂಪದಲ್ಲಿ ಹೋಗಿದ್ದಂತೆ ಇಸ್ರಾಈಲರ ಬಳಿಗೆ ಅವರು ಸಾಧುಸಂತರ ವೇಷದಲ್ಲಿ ಹೋಗಿರಬಹುದು. ಅಲ್ಲಿ ಒಂದೆಡೆ ಅವರು ಮಾಟದ ಅಂಗಡಿ ಇಟ್ಟಿರಬಹುದು. ಇನ್ನೊಂದೆಡೆ ಅವರು ತಮ್ಮ ಹೊಣೆ ಮುಕ್ತತೆಗಾಗಿ ಪ್ರತಿಯೊಬ್ಬರೊಡನೆ, "ನೋಡಿ. ನಾವು ನಿಮ್ಮ ಕಡೆಗೆ ಪರೀಕ್ಷಾರ್ಥವಾಗಿ ಕಳುಹಿಸಲ್ಪಟ್ಟವರು. ಆದ್ದರಿಂದ ನಿಮ್ಮ ಭವಿಷ್ಯವನ್ನು ಹಾಳುಮಾಡಿಕೊಳ್ಳದಿರಿ." ಎಂದು ಎಚ್ಚರಿಸುತ್ತಲೂ ಇದ್ದಿರಬಹುದು. ಆದರೂ ಜನರು ಅವರ ಮಾಟ ಮೋಡಿ ಮತ್ತು ತಾಯಿತಗಳಿಗೆ ಮುಗಿಬಿದ್ದಿರಬಹುದು.

104. ಓ ಸತ್ಯವಿಶ್ವಾಸಿಗಳೇ, 'ರಾಇನಾ' ಎಂದೆನ್ನಬೇಡಿರಿ, ಬದಲಾಗಿ 'ಉಂರ್ಝುರ್ನಾ' ಎನ್ನಿರಿ ಮತ್ತು ಮಾತನ್ನು ಗಮನವಿಟ್ಟು ಆಲಿಸಿರಿ.[36] ಈ ಸತ್ಯನಿಷೇಧಿಗಳು ವೇದನಾಯುಕ್ತ ಯಾತನೆಗೆ ಅರ್ಹರಾಗಿದ್ದಾರೆ.

يَٰٓأَيُّهَا ٱلَّذِينَ ءَامَنُوا۟ لَا تَقُولُوا۟ رَٰعِنَا وَقُولُوا۟ ٱنظُرْنَا وَٱسْمَعُوا۟ ۗ وَلِلْكَٰفِرِينَ عَذَابٌ أَلِيمٌ ﴿١٠٤﴾

105. ನಿಮ್ಮ ಪ್ರಭುವಿನ ಕಡೆಯಿಂದ ನಿಮ್ಮ ಮೇಲೆ ಏನಾದರೂ ಒಳಿತು ಅವತೀರ್ಣವಾಗುವುದನ್ನು ಗ್ರಂಥದವರೂ, ಬಹು ದೇವಾರಾಧಕರೂ ಆದ ಸತ್ಯನಿಷೇಧಿಗಳು ಎಷ್ಟಕ್ಕೂ ಇಷ್ಟಪಡುವುದಿಲ್ಲ. ಆದರೆ, ಅಲ್ಲಾಹನು ತನಗಿಷ್ಟಬಂದವರನ್ನು ತನ್ನ ಕರುಣೆಗಾಗಿ ಆಯ್ದುಕೊಳ್ಳುತ್ತಾನೆ. ಅಲ್ಲಾಹನು ಮಹಾ ಅನುಗ್ರಹಶಾಲಿ.

مَّا يَوَدُّ ٱلَّذِينَ كَفَرُوا۟ مِنْ أَهْلِ ٱلْكِتَٰبِ وَلَا ٱلْمُشْرِكِينَ أَن يُنَزَّلَ عَلَيْكُم مِّنْ خَيْرٍ مِّن رَّبِّكُمْ ۗ وَٱللَّهُ يَخْتَصُّ بِرَحْمَتِهِۦ مَن يَشَآءُ ۚ وَٱللَّهُ ذُو ٱلْفَضْلِ ٱلْعَظِيمِ ﴿١٠٥﴾

106. ನಾವು ಅನೂರ್ಜಿತಗೊಳಿಸಿದ ಅಥವಾ ವಿಸ್ಮೃತಿಗೊಳಿಸಿದ ವಚನಗಳ ಸ್ಥಾನದಲ್ಲಿ ಅವುಗಳಿಗಿಂತಲೂ ಉತ್ತಮವಾದುದನ್ನು ಅಥವಾ ಅದರಂತೆಯೇ ಇರುವುದನ್ನಾದರೂ ತರುತ್ತೇವೆ.[37] ನಿಶ್ಚಯವಾಗಿಯೂ ಅಲ್ಲಾಹನಿಗೆ ಸರ್ವ ಸಾಮರ್ಥ್ಯವಿದೆ ಎಂಬುದು ನಿಮಗೆ ಅರಿಯದೇ?

مَا نَنسَخْ مِنْ ءَايَةٍ أَوْ نُنسِهَا نَأْتِ بِخَيْرٍ مِّنْهَآ أَوْ مِثْلِهَآ ۗ أَلَمْ تَعْلَمْ أَنَّ ٱللَّهَ عَلَىٰ كُلِّ شَىْءٍ قَدِيرٌ ﴿١٠٦﴾

107. ಭೂಮಿ-ಆಕಾಶಗಳ ಆಧಿಪತ್ಯ ಅಲ್ಲಾಹನಿಗೆ ಮಾತ್ರ ಇರುವುದೆಂದೂ ಅಲ್ಲಾಹನ ಹೊರತು ನಿಮ್ಮ ಸಂರಕ್ಷಕನೂ ಸಹಾಯಕನೂ ಯಾರೂ ಇಲ್ಲವೆಂದೂ ನಿಮಗೆ ತಿಳಿಯದೇ?

أَلَمْ تَعْلَمْ أَنَّ ٱللَّهَ لَهُۥ مُلْكُ ٱلسَّمَٰوَٰتِ وَٱلْأَرْضِ ۗ وَمَا لَكُم مِّن دُونِ ٱللَّهِ مِن وَلِىٍّ وَلَا نَصِيرٍ ﴿١٠٧﴾

108. ಹಿಂದೆ ಮೂಸಾರವರೊಂದಿಗೆ ಪ್ರಶ್ನಿಸಿ ತಗಾದೆ ಮಾಡಿದಂತೆ ನೀವೂ ನಿಮ್ಮ ಪ್ರವಾದಿಯವರೊಡನೆ ಮಾಡಲು ಬಯಸು

أَمْ تُرِيدُونَ أَن تَسْـَٔلُوا۟ رَسُولَكُمْ كَمَا سُئِلَ مُوسَىٰ مِن قَبْلُ ۗ وَمَن يَتَبَدَّلِ ٱلْكُفْرَ

36. ಯಹೂದಿಯರು ಪ್ರವಾದಿವರ್ಯರ(ಸ) ಸಭೆಗೆ ಬರುವಾಗ ಸಲಾಮ್ ಹೇಳುವ ಮತ್ತು ಮಾತನಾಡುವ ಸಂದರ್ಭದಲ್ಲಿ ತಮಗೆ ಸಾಧ್ಯವಿರುವ ಎಲ್ಲಾ ವಿಧಾನದಿಂದ ನಂಜು ಕಾರಲು ಪ್ರಯತ್ನಿಸುತ್ತಿದ್ದರು. ಪ್ರವಾದಿವರ್ಯರೊಂದಿಗೆ(ಸ) ಮಾತನಾಡುವಾಗ ಯಹೂದಿಯರಿಗೆ ಹಲವೊಮ್ಮೆ, "ತಡೆಯಿರಿ. ನಮಗೆ ವಿಷಯವನ್ನು ತಿಳಿದುಕೊಳ್ಳಲು ಅವಕಾಶ ಕೊಡಿ" ಎಂದು ಹೇಳಬೇಕಾದ ಸಂದರ್ಭ ಬರುತ್ತಿತ್ತು. ಆಗ ಅವರು 'ರಾಈನಾ' ಎನ್ನುತ್ತಿದ್ದರು. ಇದರ ಬಾಹ್ಯ ಅರ್ಥ ನಮಗೆ ಸ್ವಲ್ಪ ವಿನಾಯಿತಿ ನೀಡಿರಿ' ಅಥವಾ "ನಮ್ಮ ಮಾತನ್ನು ಕೇಳಿರಿ" ಎಂದೇ ಆಗಿತ್ತು. ಆದರೆ ಅದು ಅನೇಕ ಅಪಾರ್ಥಗಳಿಗೂ ಅವಕಾಶ ಕಲ್ಪಿಸುತ್ತಿತ್ತು. ಆದ್ದರಿಂದ ಈ ಪದ ಬಳಕೆ ಮಾಡದಿರುವಂತೆ ಮತ್ತು ಅದರ ಬದಲು 'ಉನ್‌ಝುರ್‌ನಾ' ಎನ್ನುವಂತೆ ಆದೇಶಿಸಲಾಯಿತು. ಅದರ ಅರ್ಥ "ನಮ್ಮ ಕಡೆಗೆ ಗಮನ ಹರಿಸಿರಿ" ಅಥವಾ "ನಮಗೆ ತಿಳಿದುಕೊಳ್ಳಲು ಅವಕಾಶ ಕೊಡಿರಿ" ಎಂದಾಗಿದೆ.

37. ಇದು ಯಹೂದಿಯರು ಮುಸ್ಲಿಮರ ಮನಸ್ಸಿನಲ್ಲಿ ಬಿತ್ತಲು ಪ್ರಯತ್ನಿಸುತ್ತಿದ್ದ ವಿಶಿಷ್ಟ ರೀತಿಯ ಸಂದೇಹದ ಉತ್ತರ. ಪೂರ್ವಗ್ರಂಥಗಳು ಮತ್ತು ಈ ಕುರ್‌ಆನ್‌ಗಳೆಲ್ಲವೂ ದೇವನ ವತಿಯಿಂದಲೇ ಬಂದವುಗಳಾಗಿದ್ದರೆ, ಪೂರ್ವಗ್ರಂಥಗಳ ಆದೇಶಗಳ ಸ್ಥಾನದಲ್ಲಿ ಇದರಲ್ಲೇಕೆ ಭಿನ್ನ ಆದೇಶಗಳನ್ನು ನೀಡಲಾಗಿದೆ ಎಂದು ಅವರು ಆಕ್ಷೇಪ ವ್ಯಕ್ತಪಡಿಸುತ್ತಿದ್ದರು.

ತ್ತೀರಾ?[38] ವಸ್ತುತಃ ಯಾವನಾದರೂ ಸತ್ಯವಿಶ್ವಾಸದ ರೀತಿ ನೀತಿಯನ್ನು ಸತ್ಯನಿಷೇಧದ ರೀತಿ ನೀತಿಯನ್ನಾಗಿ ಬದಲಿಸಿಕೊಂಡರೆ ಆತನು ನಿಶ್ಚಯವಾಗಿಯೂ ನೇರ ಮಾರ್ಗದಿಂದ ವ್ಯತಿಚಲಿಸಿದನು.

بِالْاِيْمَانِ فَقَدْ ضَلَّ سَوَآءَ السَّبِيْلِ ﴿١٠٨﴾

109. ಗ್ರಂಥದವರ ಪೈಕಿ ಅನೇಕರು ನಿಮ್ಮನ್ನು ಹೇಗಾದರೂ ಮಾಡಿ ಸತ್ಯವಿಶ್ವಾಸದಿಂದ ಮಿಥ್ಯ ವಿಶ್ವಾಸಕ್ಕೆ ತಿರುಗಿಸಬೇಕೆಂದು ಆಶಿಸುತ್ತಾರೆ. ಅವರಿಗೆ ಸತ್ಯವು ಅಭಿವ್ಯಕ್ತವಾಗಿರುವುದಾದರೂ ತಮ್ಮ ಚಿತ್ತ ಮಾತ್ಸರ್ಯದ ಕಾರಣವಾಗಿ ಅವರು ನಿಮ್ಮ ಬಗ್ಗೆ ಈ ರೀತಿ ಅಪೇಕ್ಷಿಸುತ್ತಾರೆ. ಇದಕ್ಕುತ್ತರವಾಗಿ ಅಲ್ಲಾಹನು ಸ್ವತಃ ತನ್ನ ತೀರ್ಪನ್ನು ಜಾರಿಗೊಳಿಸುವ ತನಕ ನೀವು ಕ್ಷಮಿಸಿರಿ ಮತ್ತು ಅಲಕ್ಷಿಸಿರಿ. ಅಲ್ಲಾಹನು ಸಕಲ ಕಾರ್ಯಗಳಿಗೂ ಶಕ್ತನೆಂಬುದರ ಬಗ್ಗೆ ನಿಸ್ಸಂದೇಹಿಗಳಾಗಿರಿ.

وَدَّ كَثِيْرٌ مِّنْ اَهْلِ الْكِتٰبِ لَوْ يَرُدُّوْنَكُمْ مِّنْۢ بَعْدِ اِيْمَانِكُمْ كُفَّارًا ۚۖ حَسَدًا مِّنْ عِنْدِ اَنْفُسِهِمْ مِّنْۢ بَعْدِ مَا تَبَيَّنَ لَهُمُ الْحَقُّ ۚ فَاعْفُوْا وَاصْفَحُوْا حَتّٰى يَاْتِيَ اللّٰهُ بِاَمْرِهٖ ؕ اِنَّ اللّٰهَ عَلٰى كُلِّ شَيْءٍ قَدِيْرٌ ﴿١٠٩﴾

110. ನಮಾಝನ್ನು ಸಂಸ್ಥಾಪಿಸಿರಿ, 'ಝಕಾತ್' ಕೊಡಿರಿ. ನೀವು ಭವಿಷ್ಯಕ್ಕಾಗಿ ಸಂಪಾದಿಸಿ ಕಳುಹಿಸುವ ಪುಣ್ಯಗಳೆಲ್ಲವನ್ನೂ ಅಲ್ಲಾಹನಲ್ಲಿ ಪಡೆಯುವಿರಿ. ನೀವು ಮಾಡುವುದೆಲ್ಲವೂ ಅಲ್ಲಾಹನ ವೀಕ್ಷಣೆಯಲ್ಲಿದೆ.

وَاَقِيْمُوا الصَّلٰوةَ وَاٰتُوا الزَّكٰوةَ ؕ وَمَا تُقَدِّمُوْا لِاَنْفُسِكُمْ مِّنْ خَيْرٍ تَجِدُوْهُ عِنْدَ اللّٰهِ ؕ اِنَّ اللّٰهَ بِمَا تَعْمَلُوْنَ بَصِيْرٌ ﴿١١٠﴾

111. ಯಹೂದಿಯರಾಗದೆ ಅಥವಾ (ಕ್ರೈಸ್ತರ ಅಭಿಪ್ರಾಯ ಪ್ರಕಾರ) ಕ್ರೈಸ್ತರಾಗದೆ ಯಾರೂ ಸ್ವರ್ಗದೊಳಗೆ ಪ್ರವೇಶಿಸಲಾರರೆಂದು ಅವರೆನ್ನುತ್ತಾರೆ. ಇವು ಅವರ ಅಭಿಲಾಷೆಗಳಾಗಿವೆ. "ನೀವು ನಿಮ್ಮ ವಾದದಲ್ಲಿ ಸತ್ಯವಂತರಾಗಿದ್ದರೆ ನಿಮ್ಮ ಆಧಾರ ಪ್ರಮಾಣಗಳನ್ನು ಮುಂದೆ ತನ್ನಿರಿ" ಎಂದು ಅವರೊಡನೆ ಹೇಳಿರಿ.

وَقَالُوْا لَنْ يَّدْخُلَ الْجَنَّةَ اِلَّا مَنْ كَانَ هُوْدًا اَوْ نَصٰرٰى ؕ تِلْكَ اَمَانِيُّهُمْ ؕ قُلْ هَاتُوْا بُرْهَانَكُمْ اِنْ كُنْتُمْ صٰدِقِيْنَ ﴿١١١﴾

112. ಹಾಗೇನೂ ಇಲ್ಲ. (ಅಂತಹ ವೈಶಿಷ್ಟ್ಯವೇನೂ ಯಾರಿಗೂ ಇಲ್ಲ) ಅಲ್ಲಾಹನಿಗೆ ಆತ್ಮಾರ್ಪಣೆ ಗೈಯುವ ಮತ್ತು ಸತ್ಸಂಪ್ರದಾಯದಲ್ಲಿ ನಡೆಯುವಾತನು ಯಾರೇ ಇರಲಿ, ಅವನಿಗೆ ಅವನ ಪ್ರಭುವಿನ ಬಳಿ ಅವನ ಪ್ರತಿಫಲವಿದೆ. ಅಂತಹವರಿಗೆ ಯಾವುದೇ ಭಯ ಮತ್ತು ವ್ಯಥೆಯ ಸಂಭವವೇ ಇರಲಾರದು.

بَلٰى ۚ مَنْ اَسْلَمَ وَجْهَهٗ لِلّٰهِ وَهُوَ مُحْسِنٌ فَلَهٗۤ اَجْرُهٗ عِنْدَ رَبِّهٖ ۪ وَلَا خَوْفٌ عَلَيْهِمْ وَلَا هُمْ يَحْزَنُوْنَ ﴿١١٢﴾

113. ಯಹೂದಿಯರು ಕ್ರೈಸ್ತರ ಬಳಿ ಏನೂ ಇಲ್ಲವೆನ್ನುತ್ತಾರೆ.

وَقَالَتِ الْيَهُوْدُ لَيْسَتِ النَّصٰرٰى عَلٰى شَيْءٍ ۪

38. ಯಹೂದಿಯರು ನಿರಂತರ ದೋಷಾನ್ವೇಷಣೆ ನಡೆಸಿ ಮುಸ್ಲಿಮರ ಮುಂದೆ ಅನೇಕ ರೀತಿಯ ಪ್ರಶ್ನೆಗಳನ್ನೊಡ್ಡುತ್ತಿದ್ದರು. ನಿಮ್ಮ ಪ್ರವಾದಿಯೊಂದಿಗೆ ಅದು ಕೇಳಿ ಇದು ಕೇಳಿ ಎಂದು ನಿರಂತರ ಅವರನ್ನು ಪ್ರೇರೇಪಿಸುತ್ತಿದ್ದರು. ಈ ವಿಷಯದಲ್ಲಿ ಯಹೂದಿಯರ ಧೋರಣೆ ಅನುಸರಿಸದಂತೆ ಈ ಮೂಲಕ ಮುಸ್ಲಿಮರಿಗೆ ಎಚ್ಚರಿಕೆ ನೀಡಲಾಗುತ್ತಿದೆ.

ಕ್ರೈಸ್ತರು ಯಹೂದಿಯರ ಬಳಿ ಏನೂ ಇಲ್ಲವೆನ್ನುತ್ತಾರೆ. ವಸ್ತುತಃ ಇತ್ತಂಡದವರೂ ಗ್ರಂಥ ಪಾರಾಯಣ ಮಾಡುತ್ತಾರೆ. ಗ್ರಂಥಜ್ಞಾನವಿಲ್ಲದವರೂ ಹೀಗೆಯೇ ಹೇಳುತ್ತಾರೆ. ಇವರು ಹೊಂದಿರುವ ಈ ಭಿನ್ನಾಭಿಪ್ರಾಯಗಳ ತೀರ್ಮಾನವನ್ನು ಅಲ್ಲಾಹನು ಪುನರುತ್ಥಾನ ದಿನದಂದು ಮಾಡುವನು.

وَّقَالَتِ النَّصٰرٰى لَيْسَتِ الْيَهُوْدُ عَلٰى شَيْءٍ ۙ
وَّهُمْ يَتْلُوْنَ الْكِتٰبَ ؕ كَذٰلِكَ قَالَ الَّذِيْنَ لَا
يَعْلَمُوْنَ مِثْلَ قَوْلِهِمْ ۚ فَاللّٰهُ يَحْكُمُ بَيْنَهُمْ
يَوْمَ الْقِيٰمَةِ فِيْمَا كَانُوْا فِيْهِ يَخْتَلِفُوْنَ ﴿۱۱۳﴾

114. ಅಲ್ಲಾಹನ ಆರಾಧನಾಲಯಗಳಲ್ಲಿ ಅವನ ನಾಮಸ್ಮರಣೆಯನ್ನು ತಡೆಯುವ ಮತ್ತು ಅವುಗಳನ್ನು ಹಾಳುಗೆಡಹಲುದ್ಯುಕ್ತರಾಗುವವರಿಗಿಂತ ದೊಡ್ಡ ಅಕ್ರಮಿ ಇನ್ನಾರಿರಬಹುದು? ಅಂತಹವರು ಈ ಆರಾಧನಾಲಯಗಳಲ್ಲಿ ಕಾಲಿರಿಸಲು ಅರ್ಹರಲ್ಲ. ಅಲ್ಲಿ ಹೋಗುವುದಿದ್ದರೂ ಭಯಭರಿತರಾಗಿ ಹೋಗಬೇಕು. ಅವರಿಗೆ ಇಹದಲ್ಲಿ ಅಪಮಾನವೂ ಪರದಲ್ಲಿ ಘೋರ ಶಿಕ್ಷೆಯೂ ಕಾದಿದೆ.

وَمَنْ اَظْلَمُ مِمَّنْ مَّنَعَ مَسٰجِدَ اللّٰهِ اَنْ يُّذْكَرَ
فِيْهَا اسْمُهٗ وَسَعٰى فِيْ خَرَابِهَا ؕ اُولٰٓئِكَ مَا كَانَ
لَهُمْ اَنْ يَّدْخُلُوْهَآ اِلَّا خَآئِفِيْنَ ؕ لَهُمْ فِي
الدُّنْيَا خِزْيٌ وَّلَهُمْ فِي الْاٰخِرَةِ عَذَابٌ عَظِيْمٌ ﴿۱۱۴﴾

115. ಪೂರ್ವ ಪಶ್ಚಿಮಗಳೆಲ್ಲವೂ ಅಲ್ಲಾಹನವು. ನೀವೆತ್ತ ಮುಖ ಮಾಡಿದರೂ ಅಲ್ಲಿ ಅಲ್ಲಾಹನ ಮುಖವಿದೆ. ನಿಶ್ಚಯವಾಗಿಯೂ ಅಲ್ಲಾಹನು ಬಹುವಿಶಾಲನೂ ಅಭಿಜ್ಞನೂ ಆಗಿರುತ್ತಾನೆ.

وَلِلّٰهِ الْمَشْرِقُ وَالْمَغْرِبُ ۚ فَاَيْنَمَا تُوَلُّوْا فَثَمَّ
وَجْهُ اللّٰهِ ؕ اِنَّ اللّٰهَ وَاسِعٌ عَلِيْمٌ ﴿۱۱۵﴾

116. ಅಲ್ಲಾಹನು ಪುತ್ರನನ್ನು ಹೊಂದಿದ್ದಾನೆಂದು ಅವರನ್ನುತ್ತಾರೆ. ಇಂತಹ ಮಾತುಗಳಿಂದ ಅಲ್ಲಾಹನು ಪರಿಶುದ್ಧನು. ವಾಸ್ತವದಲ್ಲಿ ಭೂಮಿ-ಆಕಾಶಗಳಲ್ಲಿರುವುದೆಲ್ಲ ಅವನ ಸೊತ್ತು. ಸರ್ವವೂ ಅವನ ವಿಧೇಯ ಆಜ್ಞಾನುವರ್ತಿಗಳು.

وَقَالُوا اتَّخَذَ اللّٰهُ وَلَدًا ۙ سُبْحٰنَهٗ ؕ بَلْ لَّهٗ مَا
فِي السَّمٰوٰتِ وَالْاَرْضِ ؕ كُلٌّ لَّهٗ قٰنِتُوْنَ ﴿۱۱۶﴾

117. ಆತನು ಭೂಮಿ-ಆಕಾಶಗಳ ನಿರ್ಮಾತೃ. ಅವನು ಯಾವುದಾದರೊಂದು ಕಾರ್ಯದ ನಿರ್ಧಾರ ಮಾಡಿಕೊಂಡೊಡನೆ 'ಸಂಭವಿಸು' ಎಂದು ಆಜ್ಞಾಪಿಸುತ್ತಾನೆ. ಆಗಲೇ ಅದು ಸಂಭವಿಸುತ್ತದೆ.

بَدِيْعُ السَّمٰوٰتِ وَالْاَرْضِ ؕ وَاِذَا قَضٰٓى اَمْرًا
فَاِنَّمَا يَقُوْلُ لَهٗ كُنْ فَيَكُوْنُ ﴿۱۱۷﴾

118. ಅಲ್ಲಾಹನು ಸ್ವತಃ ನಮ್ಮೊಡನೆ ಮಾತಾಡುವುದಿಲ್ಲವೇಕೆ? ಅಥವಾ ಯಾವುದಾದರೂ ನಿದರ್ಶನವೇಕೆ ನಮಗೆ ತೋರುವುದಿಲ್ಲ? ಎಂದು ತಿಳಿಗೇಡಿಗಳು ಕೇಳುತ್ತಾರೆ. ಇವರಿಗಿಂತ ಹಿಂದಿನವರೂ ಹೀಗೆಯೇ ಹೇಳುತ್ತಿದ್ದರು. ಇವರೆಲ್ಲರ (ಮುಂದಿನ ಮತ್ತು ಹಿಂದಿನ ಪಥಭ್ರಷ್ಟರ) ಮನೋವೃತ್ತಿಗಳು ಒಂದೇ ತೆರನಾಗಿವೆ. ದೃಢ ವಿಶ್ವಾಸಿಗಳಿಗೆ ನಾವು ಸುಸ್ಪಷ್ಟ ದೃಷ್ಟಾಂತಗಳನ್ನು ವ್ಯಕ್ತ ಪಡಿಸಿದ್ದೇವೆ.

وَقَالَ الَّذِيْنَ لَا يَعْلَمُوْنَ لَوْلَا يُكَلِّمُنَا اللّٰهُ اَوْ
تَاْتِيْنَآ اٰيَةٌ ؕ كَذٰلِكَ قَالَ الَّذِيْنَ مِنْ قَبْلِهِمْ
مِّثْلَ قَوْلِهِمْ ؕ تَشَابَهَتْ قُلُوْبُهُمْ ؕ قَدْ بَيَّنَّا
الْاٰيٰتِ لِقَوْمٍ يُّوْقِنُوْنَ ﴿۱۱۸﴾

119. ನಿಶ್ಚಯವಾಗಿಯೂ ನಾವು ನಿಮ್ಮನ್ನು ಸತ್ಯಜ್ಞಾನದೊಂದಿಗೆ ಸುವಾರ್ತೆ ಕೊಡುವವನಾಗಿಯೂ ಎಚ್ಚರಿಕೆ ಕೊಡುವವನಾಗಿಯೂ ಮಾಡಿ ಕಳುಹಿಸಿದ್ದೇವೆ. (ಇದಕ್ಕಿಂತಲೂ ದೊಡ್ಡ ದೃಷ್ಟಾಂತ ಇನ್ನಾವುದಿದೆ?)[39] ನರಕದೊಂದಿಗೆ ಬಾಂಧವ್ಯ ಬೆಳೆಸಿಕೊಂಡವರ ಕಡೆಯಿಂದ ನೀವು ಹೊಣೆಗಾರರಾಗುವುದಿಲ್ಲ.

إِنَّا أَرْسَلْنَاكَ بِالْحَقِّ بَشِيرًا وَنَذِيرًا ۙ وَلَا
تُسْأَلُ عَنْ أَصْحَابِ الْجَحِيمِ ﴿١١٩﴾

120. ಯಹೂದಿಯರೂ ಕ್ರೈಸ್ತರೂ-ನೀವು ಅವರ ಮಾರ್ಗವನ್ನು ಅನುಸರಿಸುವ ವರೆಗೂ ನಿಮ್ಮ ಬಗ್ಗೆ ಎಂದೂ ಪ್ರಸನ್ನರಾಗರು. ಅಲ್ಲಾಹನು ತೋರಿಸಿದ ಮಾರ್ಗದರ್ಶನವೇ ವಾಸ್ತವಿಕ ಮಾರ್ಗದರ್ಶನವೆಂದು ಸ್ಪಷ್ಟವಾಗಿ ಹೇಳಿಬಿಡಿರಿ. ನಿಮ್ಮ ಬಳಿಗೆ ಬಂದಿರುವ ದಿವ್ಯಜ್ಞಾನದ ಬಳಿಕವೂ ನೀವು ಅವರ ಚಿತ್ತಾಕಾಂಕ್ಷೆಗಳನ್ನನುಸರಿಸಿದರೆ ಅಲ್ಲಾಹನ ಹಿಡಿತದಿಂದ ರಕ್ಷಿಸಲು ಯಾವನೊಬ್ಬ ರಕ್ಷಕ ಮಿತ್ರನಾಗಲಿ ಸಹಾಯಕನಾಗಲಿ ನಿಮಗೆ ಇರಲಾರನು.

وَلَنْ تَرْضٰى عَنْكَ الْيَهُودُ وَلَا النَّصٰرٰى حَتّٰى تَتَّبِعَ
مِلَّتَهُمْ ۗ قُلْ إِنَّ هُدَى اللّٰهِ هُوَ الْهُدٰى ۗ وَلَئِنِ
اتَّبَعْتَ أَهْوَاءَهُمْ بَعْدَ الَّذِي جَاءَكَ مِنَ
الْعِلْمِ ۙ مَا لَكَ مِنَ اللّٰهِ مِنْ وَّلِيٍّ وَّلَا نَصِيرٍ ﴿١٢٠﴾

121. ನಾವು ಗ್ರಂಥವನ್ನು ದಯಪಾಲಿಸಿದ ಬಳಿಕ ಓದಬೇಕಾದ ರೀತಿಯಲ್ಲಿ ಅದನ್ನು (ಕುರ್‌ಆನನ್ನು) ಓದುವವರು ಅದರ ಮೇಲೆ ಹೃತ್ಪೂರ್ವಕ ವಿಶ್ವಾಸವಿಡುತ್ತಾರೆ.[40] ಅದನ್ನು ನಿಷೇಧಿಸುವವರೇ ನಷ್ಟಹೊಂದುವವರು.

اَلَّذِينَ اٰتَيْنٰهُمُ الْكِتٰبَ يَتْلُونَهُ حَقَّ تِلَاوَتِهٖ ۗ
أُولٰٓئِكَ يُؤْمِنُونَ بِهٖ ۗ وَمَنْ يَّكْفُرْ بِهٖ فَأُولٰٓئِكَ
هُمُ الْخٰسِرُونَ ﴿١٢١﴾

122. ಓ ಇಸ್ರಾಈಲ್ ಸಂತತಿಗಳೇ, ನಾನು ನಿಮಗೆ ಒದಗಿಸಿದ ಕೊಡುಗೆಗಳನ್ನು ಮತ್ತು ಜಗತ್ತಿನ ಎಲ್ಲಾ ಜನಾಂಗಗಳ ಪೈಕಿ ನಿಮಗೆ ಶ್ರೇಷ್ಠತೆ ದಯಪಾಲಿಸಿದ್ದುದನ್ನು ಸ್ಮರಿಸಿರಿ.

يٰبَنِيْٓ إِسْرَآءِيلَ اذْكُرُوا نِعْمَتِيَ الَّتِيْٓ أَنْعَمْتُ
عَلَيْكُمْ وَأَنِّيْ فَضَّلْتُكُمْ عَلَى الْعٰلَمِينَ ﴿١٢٢﴾

123. ಯಾರೂ ಯಾರಿಗೂ ಕಿಂಚಿತ್ತೂ ಉಪಕರಿಸದ, ಯಾರಿಂದಲೂ ಪರಿಹಾರಧನ ಸ್ವೀಕರಿಸಲಾಗದ, ಯಾವ ಶಿಫಾರಸೂ ಫಲಕಾರಿಯಾಗದ ಮತ್ತು ಅಪರಾಧಿಗಳಿಗೆ ಎಲ್ಲಿಂದಲೂ ಯಾವ ಸಹಾಯವೂ ಒದಗದ ಆ ದಿನವನ್ನು ಭಯಪಡಿರಿ.

وَاتَّقُوْا يَوْمًا لَّا تَجْزِيْ نَفْسٌ عَنْ نَّفْسٍ شَيْئًا
وَّلَا يُقْبَلُ مِنْهَا عَدْلٌ وَّلَا تَنْفَعُهَا شَفَاعَةٌ
وَّلَا هُمْ يُنْصَرُوْنَ ﴿١٢٣﴾

39. ಅರ್ಥಾತ್- ಇತರ ದೃಷ್ಟಾಂತಗಳಂತಿರಲಿ, ಸ್ವಯಂ ಮುಹಮ್ಮದ್‌ರ(ಸ) ವ್ಯಕ್ತಿತ್ವವೇ ಅತ್ಯಂತ ಸ್ಪಷ್ಟವಾದ ದೃಷ್ಟಾಂತವಾಗಿದೆ. ಪ್ರವಾದಿತ್ವಕ್ಕೆ ಮೊದಲಿನ ಅವರ ಜೀವನ, ಅವರು ಹುಟ್ಟಿ ಬೆಳೆದ ಸಮುದಾಯ ಮತ್ತು ರಾಷ್ಟ್ರದ ಸ್ಥಿತಿಗತಿಗಳು, ಅವರು ನಲ್ವತ್ತು ವರ್ಷಗಳ ಕಾಲ ಜೀವನ ಸಾಗಿಸಿದ ಪರಿಸರ, ಪ್ರವಾದಿಯಾದ ನಂತರ ಅವರು ಮಾಡಿದ ಅದ್ಭುತ ಸಾಧನೆಗಳು ಇವೆಲ್ಲವೂ ಸುಸ್ಪಷ್ಟವಾದ ದೃಷ್ಟಾಂತಗಳಾಗಿವೆ. ಇದರ ಹೊರತು ಬೇರೆ ದೃಷ್ಟಾಂತಗಳನ್ನು ನೀಡುವ ಅವಶ್ಯಕತೆಯೇ ಉದ್ಭವಿಸುವುದಿಲ್ಲ.

40. ಇದು ಗ್ರಂಥದವರ ಪೈಕಿ ಉತ್ತಮ ವ್ಯಕ್ತಿಗಳ ಕಡೆಗೆ ಸೂಚನೆ. ಅವರು ಪ್ರಾಮಾಣಿಕತೆ ಮತ್ತು ಸತ್ಯಸಂಧತೆಯೊಂದಿಗೆ ತಮ್ಮ ಬಳಿ ಮೊದಲಿನಿಂದಲೇ ಇರುವ ದೇವ ಗ್ರಂಥವನ್ನು ಪಠಿಸುವುದರಿಂದ, ಪವಿತ್ರ ಕುರ್‌ಆನನ್ನು ಕೇಳಿ ಅಥವಾ ಓದಿ ಅದರ ಮೇಲೆ ವಿಶ್ವಾಸವಿಡುತ್ತಾರೆ.

124. ಇಬ್‌ರಾಹೀಮರನ್ನು ಅವರ ಪ್ರಭು ಕೆಲವು ವಿಷಯಗಳಲ್ಲಿ ಪರೀಕ್ಷಿಸಿದ ಸಂದರ್ಭವನ್ನು ಸ್ಮರಿಸಿರಿ. ಅವರು ಅವುಗಳಲ್ಲೆಲ್ಲಾ ಸಫಲರಾದರು. ಆಗ ಅಲ್ಲಾಹನು, "ನಾನು ನಿಮ್ಮನ್ನು ಸರ್ವ ಜನರ ನಾಯಕನನ್ನಾಗಿ ಮಾಡುವವನಿದ್ದೇನೆ" ಎಂದನು. ಇಬ್‌ರಾಹೀಮರು, "ನನ್ನ ಸಂತಾನಗಳಿಗೂ ಇದೇ ವಾಗ್ದಾನವೇ?" ಎಂದು ಬಿನ್ನವಿಸಿದರು. ಆಗ ಅಲ್ಲಾಹನು, "ನನ್ನ ವಾಗ್ದಾನವು ಅಕ್ರಮಿಗಳಿಗೆ ಅನ್ವಯಿಸುವುದಿಲ್ಲ" ಎಂದು ಉತ್ತರಿಸಿದನು.[41]

وَاِذِ ابۡتَلٰٓى اِبۡرٰهٖمَ رَبُّهٗ بِكَلِمٰتٍ فَاَتَمَّهُنَّ‌ؕ
قَالَ اِنِّىۡ جَاعِلُكَ لِلنَّاسِ اِمَامًا‌ؕ قَالَ وَمِنۡ
ذُرِّيَّتِىۡ‌ؕ قَالَ لَا يَنَالُ عَهۡدِى الظّٰلِمِيۡنَ ﴿۱۲۴﴾

125. ನಾವು ಆ ಭವನ(ಕಅಬಾ)ವನ್ನು ಜನರಿಗೆ ಕೇಂದ್ರ ಹಾಗೂ ಶಾಂತಿ ಸ್ಥಾನವನ್ನಾಗಿ ನಿಶ್ಚಯಿಸಿದ ಸಂದರ್ಭ(ವನ್ನು ಸ್ಮರಿಸಿರಿ). "ಇಬ್‌ರಾಹೀಮರು ಆರಾಧನೆಗಾಗಿ ನಿಲ್ಲುವ ಸ್ಥಾನವನ್ನು ನೀವು ಸ್ಥಿರವಾದ ನಮಾಝ್‌ನ ತಾಣವನ್ನಾಗಿಸಿ ಕೊಳ್ಳಿರಿ" ಎಂದು ನಾವು ಜನರಿಗೆ ಆಜ್ಞಾಪಿಸಿದ್ದೇವು. "ನನ್ನ ಈ ಭವನದ ಪ್ರದಕ್ಷಿಣೆ ಮತ್ತು ತಪಶ್ಚರ್ಯೆ ಬಾಗುವವರಿಗಾಗಿ ಹಾಗೂ ಸಾಷ್ಟಾಂಗ ವೆರಗುವವರಿಗಾಗಿ ನಿರ್ಮಲವಾಗಿರಿಸಿರಿ" ಎಂದು ಇಬ್‌ರಾಹೀಮ್ ಮತ್ತು ಇಸ್ಮಾಈಲರಿಗೆ ತಾಕೀತು ಮಾಡಿದ್ದೇವು.

وَاِذۡ جَعَلۡنَا الۡبَيۡتَ مَثَابَةً لِّلنَّاسِ وَاَمۡنًا ؕ
وَاتَّخِذُوۡا مِنۡ مَّقَامِ اِبۡرٰهٖمَ مُصَلًّى‌ؕ وَ
عَهِدۡنَآ اِلٰٓى اِبۡرٰهٖمَ وَاِسۡمٰعِيۡلَ اَنۡ طَهِّرَا
بَيۡتِىَ لِلطَّآئِفِيۡنَ وَالۡعٰكِفِيۡنَ وَالرُّكَّعِ السُّجُوۡدِ ﴿۱۲۵﴾

126. ಇಬ್‌ರಾಹೀಮರು, "ಓ ನನ್ನ ಪ್ರಭೂ! ಈ ನಗರವನ್ನು ಶಾಂತಿಯ ನಗರವನ್ನಾಗಿ ಮಾಡು ಮತ್ತು ಇಲ್ಲಿಯ ನಿವಾಸಿಗಳ ಪೈಕಿ ಅಲ್ಲಾಹ್ ಮತ್ತು ಅಂತಿಮ ದಿನದಲ್ಲಿ ವಿಶ್ವಾಸವಿಡುವವರಿಗೆ ನಾನಾ ಫಲಗಳ ಆಹಾರವನ್ನು ನೀಡು" ಎಂದ ಸಂದರ್ಭ(ವನ್ನು ಸ್ಮರಿಸಿರಿ). ಅವರ ಪ್ರಭುವು, "ನಾನು ಭೂಲೋಕದ ಅಲ್ಪಕಾಲದ ಜೀವನಾಧಾರವನ್ನು ಅವಿಶ್ವಾಸಿಗೂ ಕೊಡುವೆನು. ಆದರೆ ಆ ಮೇಲೆ ಅವನನ್ನು ನರಕಕ್ಕೆ ತಳ್ಳುವೆನು. ಅದು ಅತ್ಯಂತ ನಿಕೃಷ್ಟ ನೆಲೆಯಾಗಿರುತ್ತದೆ" ಎಂದು ಉತ್ತರಿಸಿದನು.

وَاِذۡ قَالَ اِبۡرٰهٖمُ رَبِّ اجۡعَلۡ هٰذَا بَلَدًا
اٰمِنًا وَّارۡزُقۡ اَهۡلَهٗ مِنَ الثَّمَرٰتِ مَنۡ اٰمَنَ
مِنۡهُمۡ بِاللّٰهِ وَالۡيَوۡمِ الۡاٰخِرِ‌ؕ قَالَ وَمَنۡ كَفَرَ
فَاُمَتِّعُهٗ قَلِيۡلًا ثُمَّ اَضۡطَرُّهٗۤ اِلٰى عَذَابِ
النَّارِ‌ؕ وَبِئۡسَ الۡمَصِيۡرُ ﴿۱۲۶﴾

127. ಇಬ್‌ರಾಹೀಮರೂ ಇಸ್ಮಾಈಲರೂ ಆ ಭವನದ ಭಿತ್ತಿಗಳನ್ನೇರಿಸುತ್ತಿರುವಾಗ (ಹೀಗೆ) ಪ್ರಾರ್ಥಿಸುತ್ತಲೇ ಇದ್ದರು-"ಓ ನಮ್ಮ ಪ್ರಭೂ! ನಮ್ಮಿಂದ ಈ ಸೇವೆಯನ್ನು ಸ್ವೀಕರಿಸು; ನಿಶ್ಚಯವಾಗಿಯೂ ನೀನು ಎಲ್ಲವನ್ನೂ ಆಲಿಸುವವನೂ ಎಲ್ಲವನ್ನೂ ತಿಳಿದವನೂ ಆಗಿರುತ್ತೀ.

وَاِذۡ يَرۡفَعُ اِبۡرٰهٖمُ الۡقَوَاعِدَ مِنَ الۡبَيۡتِ
وَاِسۡمٰعِيۡلُ ؕ رَبَّنَا تَقَبَّلۡ مِنَّا ؕ اِنَّكَ اَنۡتَ
السَّمِيۡعُ الۡعَلِيۡمُ ﴿۱۲۷﴾

41. ಅರ್ಥಾತ್- ಈ ವಾಗ್ದಾನವು ನಿಮ್ಮ ಸಂತತಿಯ ಸಜ್ಜನ ವರ್ಗಕ್ಕೆ ಮಾತ್ರ ಅನ್ವಯಿಸುತ್ತದೆ. ಅವರ ಪೈಕಿ ಅಕ್ರಮಿಗಳಿಗೆ ಈ ವಾಗ್ದಾನ ಅನ್ವಯಿಸುವುದಿಲ್ಲ. ಇಲ್ಲಿ ಅಕ್ರಮಿ ಎಂದರೆ ಮನುಷ್ಯರ ಮೇಲೆ ಆಕ್ರಮವೆಸಗುವವರು ಮಾತ್ರವಲ್ಲ, ಸತ್ಯ ಮತ್ತು ಸತ್ಯಸಂಧತೆಯ ಮೇಲೆ ಅಕ್ರಮವೆಸಗುವವರೂ ಅದರಲ್ಲಿ ಸೇರಿದ್ದಾರೆ.

128. ಓ ಪ್ರಭೂ, ನಮ್ಮಿಬ್ಬರನ್ನು ನಿನ್ನ ಆಜ್ಞಾನುಸಾರಿಗಳಾಗಿ ಮಾಡು. ನಮ್ಮ ಸಂತತಿಯಲ್ಲಿ ನಿನ್ನ ಆಜ್ಞಾನುಸಾರಿಯಾದ ಒಂದು ಸಮುದಾಯವನ್ನು ಎಬ್ಬಿಸು. ನಮಗೆ ನಿನ್ನ ದಾಸ್ಯ-ಆರಾಧನೆಯ ಕ್ರಮಗಳನ್ನು ತೋರಿಸಿ ಕೊಡು ಮತ್ತು ನಮ್ಮ ಅಪರಾಧಗಳನ್ನು ಕ್ಷಮಿಸು. ನೀನು ಮಹಾ ಕ್ಷಮಾದಾನಿಯೂ ಕರುಣಾನಿಧಿಯೂ ಆಗಿರುತ್ತೀಯೆ.

رَبَّنَا وَاجْعَلْنَا مُسْلِمَيْنِ لَكَ وَمِنْ ذُرِّيَّتِنَآ أُمَّةً مُّسْلِمَةً لَّكَ وَأَرِنَا مَنَاسِكَنَا وَتُبْ عَلَيْنَا ۚ إِنَّكَ أَنْتَ التَّوَّابُ الرَّحِيمُ ﴿١٢٨﴾

129. ಓ ಪ್ರಭೂ, ಅವರಿಗೆ ನಿನ್ನ ವಚನಗಳನ್ನು ಪಠಿಸಿ ಹೇಳುವ ಮತ್ತು ಗ್ರಂಥವನ್ನೂ ಯುಕ್ತಿಯನ್ನೂ ಬೋಧಿಸುವ ಹಾಗೂ ಅವರ ಜೀವನವನ್ನು ಸಂಸ್ಕರಿಸುವ ಓರ್ವ ಸಂದೇಶವಾಹಕನನ್ನು ಅವರೊಳಗಿಂದಲೇ ನಿಯೋಜಿಸು. ನೀನು ಮಹಾಪ್ರತಾಪಿಯೂ ಯುಕ್ತಿಪೂರ್ಣನೂ ಆಗಿರುತ್ತೀಯೆ.

رَبَّنَا وَابْعَثْ فِيهِمْ رَسُولًا مِّنْهُمْ يَتْلُوا عَلَيْهِمْ اٰيٰتِكَ وَيُعَلِّمُهُمُ الْكِتٰبَ وَالْحِكْمَةَ وَيُزَكِّيهِمْ ۚ إِنَّكَ أَنْتَ الْعَزِيزُ الْحَكِيمُ ﴿١٢٩﴾ ١٥ ع٨ ١٥

130. ಇಬ್‌ರಾಹೀಮರ ಸಂಪ್ರದಾಯವನ್ನು ತಿರಸ್ಕರಿಸುವವನಾರು? ತನ್ನನ್ನು ತಾನೇ ಮೂರ್ಖತನದಲ್ಲಿ ಸಿಲುಕಿಸಿಕೊಂಡಾತನ ಹೊರತು ಬೇರಾರು ಹೀಗೆ ಮಾಡಬಲ್ಲರು? ಇಬ್‌ರಾಹೀಮರನ್ನು ಇಹಲೋಕದಲ್ಲಿ ನಮ್ಮ ಕಾರ್ಯಕ್ಕಾಗಿ ನಾವು ಆಯ್ಕೆ ಮಾಡಿಕೊಂಡಿದ್ದೆವು. ಪರದಲ್ಲಿ ಅವರು ಸಜ್ಜನರೊಂದಿಗೆ ಇರುವರು.

وَمَنْ يَّرْغَبُ عَنْ مِّلَّةِ إِبْرٰهٖمَ إِلَّا مَنْ سَفِهَ نَفْسَهٗ ۚ وَلَقَدِ اصْطَفَيْنٰهُ فِي الدُّنْيَا ۖ وَإِنَّهٗ فِي الْاٰخِرَةِ لَمِنَ الصّٰلِحِينَ ﴿١٣٠﴾

131. ಅವರ ಪ್ರಭು ಅವರೊಡನೆ, 'ಮುಸ್ಲಿಮನಾಗು'[42] ಎಂದಾಗ ಅವರು ತಕ್ಷಣ "ನಾನು ವಿಶ್ವದೊಡೆಯನ ಮುಸ್ಲಿಮನಾದೆನು" ಎಂದರು.

إِذْ قَالَ لَهٗ رَبُّهٗٓ أَسْلِمْ ۙ قَالَ أَسْلَمْتُ لِرَبِّ الْعٰلَمِينَ ﴿١٣١﴾

132. ತಮ್ಮ ಸಂತತಿಗಳಿಗೂ ಅವರು ಅದೇ ಸಂಪ್ರದಾಯದಂತೆ ನಡೆಯುವ ಉಪದೇಶ ಮಾಡಿದ್ದರು. ಅದರ ಉಪದೇಶವನ್ನೇ ಯಅ್‌ಕೂಬರು ತನ್ನ ಸಂತತಿಗೂ ಮಾಡಿದರು. ಅವರು, "ನನ್ನ ಮಕ್ಕಳೇ, ನಿಶ್ಚಯವಾಗಿಯೂ ಅಲ್ಲಾಹನು ನಿಮಗಾಗಿ ಈ ಧರ್ಮವನ್ನೇ ಆಯ್ದಿರುವನು. ಆದುದರಿಂದ ಕೊನೆಯುಸಿರಿನ ತನಕವೂ ಮುಸ್ಲಿಮರಾಗಿಯೇ ಜೀವಿಸಿರಿ" ಎಂದಿದ್ದರು.

وَوَصّٰى بِهَآ إِبْرٰهٖمُ بَنِيهِ وَيَعْقُوبُ ۗ يٰبَنِيَّ إِنَّ اللّٰهَ اصْطَفٰى لَكُمُ الدِّينَ فَلَا تَمُوتُنَّ إِلَّا وَأَنْتُمْ مُّسْلِمُونَ ﴿١٣٢﴾

42. 'ಮುಸ್ಲಿಮ್' ಎಂದರೆ ಅಲ್ಲಾಹನ ಮುಂದೆ ಅನುಸರಣೆಯಲ್ಲಿ ಶಿರಬಾಗಿಸುವವನು, ಅಲ್ಲಾಹನನ್ನು ಮಾತ್ರ ತನ್ನ ಮಾಲಕ, ಒಡೆಯ, ಆಜ್ಞಾಧೀಶ ಮತ್ತು ಆರಾಧ್ಯನೆಂದು ಒಪ್ಪಿಕೊಳ್ಳುವವನು. ತನ್ನನ್ನು ಅಲ್ಲಾಹನಿಗೊಪ್ಪಿಸಿ ಬಿಡುವವನು, ದೇವ ವತಿಯಿಂದ ಬಂದ ಮಾರ್ಗದರ್ಶನದಂತೆ ಲೋಕದಲ್ಲಿ ಜೀವನ ನಡೆಸುವವನು, ಈ ವಿಶ್ವಾಸ ಮತ್ತು ಧೋರಣೆಯ ಹೆಸರೇ ಇಸ್ಲಾಮ್. ಸೃಷ್ಟಿಯ ಆರಂಭವಾದಂದಿನಿಂದ ಲೋಕದ ವಿವಿಧ ರಾಷ್ಟ್ರ ಮತ್ತು ಸಮುದಾಯಗಳಲ್ಲಿ ಬಂದ ಪ್ರವಾದಿಗಳೆಲ್ಲರ ಧರ್ಮ ಇದುವೇ ಆಗಿತ್ತು.

133. ಯಅ್‌ಕೂಬರು ಈ ಲೋಕವನ್ನು ಬಿಟ್ಟಗಲುತ್ತಿದ್ದ ಸಂದರ್ಭದಲ್ಲಿ ನೀವು ಉಪಸ್ಥಿತರಿದ್ದಿರಾ? ಅವರು ಮರಣಹೊಂದುತ್ತಿದ್ದಾಗ ತನ್ನ ಪುತ್ರರೊಡನೆ, "ನನ್ನ ಕಾಲಾನಂತರ ನೀವು ಯಾರ ದಾಸ್ಯ-ಆರಾಧನೆ ಮಾಡುವಿರಿ?" ಎಂದು ಕೇಳಿದರು. ಅವರೆಲ್ಲರೂ "ನೀವು ಮತ್ತು ನಿಮ್ಮ ಹಿರಿಯರಾದ ಇಬ್‌ರಾಹೀಮ್, ಇಸ್ಮಾಈಲ್ ಮತ್ತು ಇಸ್‌ಹಾಕರು ವಿಶ್ವಾಸವಿರಿಸಿದ್ದ ಅದೇ ಏಕಮಾತ್ರ ದೇವನ ದಾಸ್ಯ-ಆರಾಧನೆಯನ್ನೇ ನಾವು ಮಾಡುವೆವು ಮತ್ತು ನಾವು ಕೇವಲ ಆತನ ಮುಸ್ಲಿಮ(ಶರಣುಹೋದವ) ರಾಗಿದ್ದೇವೆ" ಎಂದು ಉತ್ತರಿಸಿದರು.

أَمْ كُنتُمْ شُهَدَآءَ إِذْ حَضَرَ يَعْقُوبَ ٱلْمَوْتُ
إِذْ قَالَ لِبَنِيهِ مَا تَعْبُدُونَ مِنۢ بَعْدِى ۖ قَالُوا۟
نَعْبُدُ إِلَٰهَكَ وَإِلَٰهَ ءَابَآئِكَ إِبْرَٰهِـۧمَ وَإِسْمَٰعِيلَ
وَإِسْحَٰقَ إِلَٰهًا وَٰحِدًا وَنَحْنُ لَهُۥ مُسْلِمُونَ ١٣٣

134. ಗತಿಸಿಹೋದ ಒಂದು ಸಮುದಾಯವದು. ಅವರು ಗಳಿಸಿದುದು ಅವರಿಗೆ ಮತ್ತು ನೀವು ಗಳಿಸಿದುದು ನಿಮಗೆ. ಅವರ ಕರ್ಮಗಳ ಕುರಿತು ನಿಮ್ಮೊಡನೆ ವಿಚಾರಣೆ ನಡೆಯಲಾರದು.

تِلْكَ أُمَّةٌ قَدْ خَلَتْ ۖ لَهَا مَا كَسَبَتْ وَلَكُم مَّا
كَسَبْتُمْ ۖ وَلَا تُسْـَٔلُونَ عَمَّا كَانُوا۟ يَعْمَلُونَ ١٣٤

135. ಯಹೂದಿಯರಾದರೆ ಸನ್ಮಾರ್ಗ ಪಡೆಯುವಿರೆಂದು ಯಹೂದಿಯರೂ, ಕ್ರೈಸ್ತರಾದರೆ ಸನ್ಮಾರ್ಗ ಪಡೆಯುವಿರೆಂದು ಕ್ರೈಸ್ತರೂ ಹೇಳುತ್ತಾರೆ. ನೀವು ಅವರೊಡನೆ, "ಹಾಗಲ್ಲ, ನಿಜವಾಗಿ ಎಲ್ಲರನ್ನೂ ಬಿಟ್ಟು ಇಬ್‌ರಾಹೀಮರ ಹಾದಿ" ಎಂದು ಹೇಳಿರಿ ಮತ್ತು ಇಬ್‌ರಾಹೀಮರು ಬಹುದೇವಾರಾಧಕರಲ್ಲಾಗಿರಲಿಲ್ಲ.

وَقَالُوا۟ كُونُوا۟ هُودًا أَوْ نَصَٰرَىٰ تَهْتَدُوا۟ ۗ قُلْ بَلْ
مِلَّةَ إِبْرَٰهِـۧمَ حَنِيفًا ۖ وَمَا كَانَ مِنَ ٱلْمُشْرِكِينَ ١٣٥

136. ಮುಸ್ಲಿಮರೇ ಹೇಳಿರಿ, "ನಾವು ಅಲ್ಲಾಹನ ಮೇಲೆ ಹಾಗೂ ನಮ್ಮ ಕಡೆ ಅವತೀರ್ಣವಾಗಿರುವುದರ ಮೇಲೆ ಮತ್ತು ಇಬ್‌ರಾಹೀಮ್, ಇಸ್ಮಾಈಲ್, ಇಸ್‌ಹಾಕ್, ಯಅ್‌ಕೂಬ್ ಮತ್ತು ಯಅ್‌ಕೂಬರ ಸಂತತಿಗಳಿಗೆ ಅವತೀರ್ಣವಾಗಿರುವುದರ ಮೇಲೆ ಹಾಗೂ ಮೂಸಾ, ಈಸಾ ಮತ್ತು ಇತರ ಎಲ್ಲ ಪ್ರವಾದಿಗಳಿಗೆ ಅವರ ಪ್ರಭುವಿನಿಂದ ದೊರೆತಿರುವುದರ ಮೇಲೆ ವಿಶ್ವಾಸವಿಟ್ಟಿದ್ದೇವೆ. ನಾವು ಅವರೊಳಗೆ ತಾರತಮ್ಯವಿರಿಸುವುದಿಲ್ಲ. ನಾವು ಕೇವಲ ಅಲ್ಲಾಹನ ಮುಸ್ಲಿಮರಾಗಿದ್ದೇವೆ."

قُولُوٓا۟ ءَامَنَّا بِٱللَّهِ وَمَآ أُنزِلَ إِلَيْنَا وَمَآ أُنزِلَ
إِلَىٰٓ إِبْرَٰهِـۧمَ وَإِسْمَٰعِيلَ وَإِسْحَٰقَ وَيَعْقُوبَ
وَٱلْأَسْبَاطِ وَمَآ أُوتِىَ مُوسَىٰ وَعِيسَىٰ وَمَآ
أُوتِىَ ٱلنَّبِيُّونَ مِن رَّبِّهِمْ لَا نُفَرِّقُ بَيْنَ
أَحَدٍ مِّنْهُمْ وَنَحْنُ لَهُۥ مُسْلِمُونَ ١٣٦

137. ಇನ್ನು, ನೀವು ವಿಶ್ವಾಸವಿರಿಸಿದಂತೆಯೇ ಅವರೂ ವಿಶ್ವಾಸವಿರಿಸಿದರೆ, ನಿಶ್ಚಯವಾಗಿಯೂ ಅವರು ಸನ್ಮಾರ್ಗದಲ್ಲಿದ್ದಾರೆ. ಅವರು ವಿಮುಖರಾದರೆ, ಅವರೇ ಹಟಮಾರಿತನಕ್ಕೊಳಗಾಗಿರುವರೆಂಬುದು ಸ್ಪಷ್ಟವಾಗುತ್ತದೆ. ಆದುದರಿಂದ ಅವರಿಗೆದುರು ನಿಮ್ಮ ಸಂರಕ್ಷಣೆಗೆ ಅಲ್ಲಾಹನೇ ಸಾಕು. ಅವನು ಸರ್ವವನ್ನೂ ಆಲಿಸುವವನೂ ಸರ್ವಜ್ಞನೂ ಆಗಿರುತ್ತಾನೆ.

فَإِنْ ءَامَنُوا۟ بِمِثْلِ مَآ ءَامَنتُم بِهِۦ فَقَدِ ٱهْتَدَوا۟ ۖ
وَّإِن تَوَلَّوْا۟ فَإِنَّمَا هُمْ فِى شِقَاقٍ ۖ فَسَيَكْفِيكَهُمُ
ٱللَّهُ ۚ وَهُوَ ٱلسَّمِيعُ ٱلْعَلِيمُ ١٣٧

138. ಅಲ್ಲಾಹನ ವರ್ಣವನ್ನು ಹೊಂದಿರಿ. ಅವನ ವರ್ಣಕ್ಕಿಂತ ಉತ್ತಮ ವರ್ಣ ಇನ್ನಾರದಿರಬಹುದು? ಮತ್ತು ನಾವು ಕೇವಲ ಆತನ ದಾಸ್ಯ-ಆರಾಧನೆ ಮಾಡುವವರು ಎಂದು ಹೇಳಿರಿ.

صِبْغَةَ اللّٰهِ ۚ وَمَنْ اَحْسَنُ مِنَ اللّٰهِ صِبْغَةً ۫
وَّنَحْنُ لَهٗ عٰبِدُوْنَ ﴿١٣٨﴾

139. ಅವರೊಡನೆ ಹೇಳಿರಿ, "ಅಲ್ಲಾಹ್ ನಮ್ಮ ಪ್ರಭುವೂ ನಿಮ್ಮ ಪ್ರಭುವೂ ಆಗಿರುವಾಗ, ನೀವು ಅಲ್ಲಾಹನ ಬಗ್ಗೆ ನಮ್ಮೊಡನೆ ಜಗಳವಾಡುತ್ತೀರಾ? ನಮ್ಮ ಕರ್ಮಗಳು ನಮಗೆ, ನಿಮ್ಮ ಕರ್ಮಗಳು ನಿಮಗೆ, ನಾವು ನಮ್ಮ ದಾಸ್ಯ-ಆರಾಧನೆಯನ್ನು ಅಲ್ಲಾಹನಿಗಾಗಿ ನಿಷ್ಕಳಂಕಗೊಳಿಸಿದ್ದೇವೆ.

قُلْ اَتُحَآجُّوْنَنَا فِى اللّٰهِ وَهُوَ رَبُّنَا وَرَبُّكُمْ ۚ وَلَنَآ
اَعْمَالُنَا وَلَكُمْ اَعْمَالُكُمْ ۚ وَنَحْنُ لَهٗ مُخْلِصُوْنَ ﴿١٣٩﴾

140. ಅಥವಾ ಇಬ್‌ರಾಹೀಮ್, ಇಸ್ಮಾಈಲ್, ಇಸ್‌ಹಾಕ್, ಯಅ್‌ಕೂಬ್ ಮತ್ತು ಯಅ್‌ಕೂಬರ ಸಂತತಿಯವರೆಲ್ಲರೂ ಯಹೂದಿಯರೋ ಅಥವಾ ಕ್ರೈಸ್ತರೋ ಆಗಿದ್ದರೆಂದು ನೀವೆನ್ನುತ್ತೀರಾ?" ಹೇಳಿರಿ: "ಹೆಚ್ಚು ತಿಳಿದವರು ನೀವೋ ಅಲ್ಲಾಹನೋ? ಅಲ್ಲಾಹನ ಕಡೆಯಿಂದ ದೊರೆತ ಒಂದು ಸಾಕ್ಷ್ಯವು ತನ್ನಲ್ಲಿದ್ದೂ ಅದನ್ನು ಅಡಗಿಸಿದವನಿಗಿಂತ ಹಿರಿಯ ಅಕ್ರಮಿ ಇನ್ನಾರಿರಬಹುದು? ನಿಮ್ಮ ಚಟುವಟಿಕೆಗಳ ಬಗ್ಗೆ ಅಲ್ಲಾಹನು ಅಶ್ರದ್ಧನಲ್ಲ.

اَمْ تَقُوْلُوْنَ اِنَّ اِبْرٰهٖمَ وَاِسْمٰعِيْلَ وَاِسْحٰقَ
وَيَعْقُوْبَ وَالْاَسْبَاطَ كَانُوْا هُوْدًا اَوْ نَصٰرٰى ؕ
قُلْ ءَاَنْتُمْ اَعْلَمُ اَمِ اللّٰهُ ؕ وَمَنْ اَظْلَمُ مِمَّنْ
كَتَمَ شَهَادَةً عِنْدَهٗ مِنَ اللّٰهِ ؕ وَمَا اللّٰهُ
بِغَافِلٍ عَمَّا تَعْمَلُوْنَ ﴿١٤٠﴾

141 ಗತಿಸಿ ಹೋದ ಒಂದು ಸಮುದಾಯವದು. ಅವರು ಗಳಿಸಿದುದು ಅವರಿಗೆ ಮತ್ತು ನೀವು ಗಳಿಸಿದುದು ನಿಮಗೆ. ಅವರ ಕರ್ಮಗಳ ಕುರಿತು ನಿಮ್ಮೊಡನೆ ವಿಚಾರಣೆ ನಡೆಯದು."

تِلْكَ اُمَّةٌ قَدْ خَلَتْ ۚ لَهَا مَا كَسَبَتْ وَلَكُمْ مَّا
كَسَبْتُمْ ۚ وَلَا تُسْـَٔلُوْنَ عَمَّا كَانُوْا يَعْمَلُوْنَ ﴿١٤١﴾

الجزء ٢

142. *"ಇವರು ಈ ಮುಂಚೆ ಮುಖಮಾಡಿ ನಮಾಝ್ ಮಾಡುತ್ತಿದ್ದ ಕಿಬ್ಲಾದಿಂದ ಒಮ್ಮೆಲೇ ತಿರುಗಿಬಿಡಬೇಕಾದರೆ ಇವರಿಗೇನಾಯಿತು?" ಎಂದು ತಿಳಿಗೇಡಿಗಳು ನಿಶ್ಚಯವಾಗಿಯೂ ಕೇಳುವರು.[43] ಓ ಪೈಗಂಬರರೇ, ಅವರೊಡನೆ ಹೇಳಿರಿ: "ಪೂರ್ವ-ಪಶ್ಚಿಮ ಎಲ್ಲವೂ ಅಲ್ಲಾಹನವೇ. ಅಲ್ಲಾಹನು ತಾನಿಷ್ಟಪಡುವವನಿಗೆ ಸನ್ಮಾರ್ಗ ತೋರಿಸುತ್ತಾನೆ."

سَيَقُوْلُ السُّفَهَآءُ مِنَ النَّاسِ مَا وَلّٰىهُمْ عَنْ
قِبْلَتِهِمُ الَّتِىْ كَانُوْا عَلَيْهَا ؕ قُلْ لِّلّٰهِ الْمَشْرِقُ وَ
الْمَغْرِبُ ؕ يَهْدِىْ مَنْ يَّشَآءُ اِلٰى صِرَاطٍ مُّسْتَقِيْمٍ ﴿١٤٢﴾

***ಇಲ್ಲಿಂದ 2ನೇ ಕಾಂಡ ಆರಂಭ.**

43. ಪ್ರವಾದಿವರ್ಯರು(ಸ) ವಲಸೆಯ (ಹಿಜ್ರತ್) ನಂತರ ಮದೀನಾದಲ್ಲಿ ಹದಿನಾರು-ಹದಿನೇಳು ತಿಂಗಳುಗಳ ಕಾಲ 'ಬೈತುಲ್ ಮುಕದ್ದಿಸ್'ನ ಕಡೆಗೆ ಮುಖಮಾಡಿ ನಮಾಝ್ ನಿರ್ವಹಿಸುತ್ತಿದ್ದರು. ಅನಂತರ ಕಅಬಾವನ್ನು ಅಭಿಮುಖ ಕೇಂದ್ರವಾಗಿ ಮಾಡಿ ನಮಾಝ್ ನಿರ್ವಹಿಸುವ ಆಜ್ಞೆ ಬಂತು.

143. ಮತ್ತು ಇದೇ ರೀತಿ ನೀವು ಜಗತ್ತಿನ ಮಾನವರ ಬಗ್ಗೆ ಸಾಕ್ಷಿಯಾಗಿರಲಿಕ್ಕೂ[44] ಸಂದೇಶವಾಹಕರು ನಿಮ್ಮ ಬಗ್ಗೆ ಸಾಕ್ಷಿಯಾಗಿರಲಿಕ್ಕೂ ನಾವು ನಿಮ್ಮನ್ನು ಒಂದು ಸುಮಧ್ಯ ಸಮುದಾಯ[45]ವನ್ನಾಗಿ ಮಾಡಿದ್ದೇವೆ. ನಿಮ್ಮಲ್ಲಿ ಸಂದೇಶವಾಹಕರ ಅನುಸರಣೆ ಮಾಡುವವರಾರು ಮತ್ತು ವಿಮುಖರಾಗುವವರಾರೆಂದು ತಿಳಿಯಲಿಕ್ಕಾಗಿ ಮಾತ್ರ ನೀವು ಈ ಮುಂಚೆ ಮುಖ ಮಾಡುತ್ತಿದ್ದ ಕಿಬ್ಲಾವನ್ನು ನಾವು ನಿಶ್ಚಯಿಸಿದ್ದೆವು. ಈ ಸಂಗತಿಯಂತು ಅತ್ಯಂತ ಕಠಿಣವಾಗಿತ್ತು. ಆದರೆ ಅಲ್ಲಾಹನಿಂದ ಸನ್ಮಾರ್ಗ ಹೊಂದಿದವರಿಗೆ ಕಿಂಚಿತ್ತೂ ಕಠಿಣವಾಗಲಿಲ್ಲ. ಅಲ್ಲಾಹನು ನಿಮ್ಮ ಸತ್ಯವಿಶ್ವಾಸವನ್ನು ಎಂದಿಗೂ ನಿಷ್ಫಲಗೊಳಿಸಲಾರನು. ಅಲ್ಲಾಹನು ಜನರ ಬಗ್ಗೆ ಅತ್ಯಂತ ಕೃಪಾಳುವೂ ಕರುಣಾನಿಧಿಯೂ ಆಗಿರುತ್ತಾನೆಂಬುದು ಖಾತ್ರಿಯಾಗಿ ತಿಳಿಯಿರಿ.

وَكَذٰلِكَ جَعَلْنٰكُمْ اُمَّةً وَّسَطًا لِّتَكُوْنُوْا شُهَدَآءَ
عَلَى النَّاسِ وَيَكُوْنَ الرَّسُوْلُ عَلَيْكُمْ شَهِيْدًا ؕ
وَمَا جَعَلْنَا الْقِبْلَةَ الَّتِىْ كُنْتَ عَلَيْهَآ اِلَّا لِنَعْلَمَ
مَنْ يَّتَّبِعُ الرَّسُوْلَ مِمَّنْ يَّنْقَلِبُ عَلٰى عَقِبَيْهِ ؕ
وَاِنْ كَانَتْ لَكَبِيْرَةً اِلَّا عَلَى الَّذِيْنَ
هَدَى اللّٰهُ ؕ وَمَا كَانَ اللّٰهُ لِيُضِيْعَ اِيْمَانَكُمْ ؕ
اِنَّ اللّٰهَ بِالنَّاسِ لَرَءُوْفٌ رَّحِيْمٌ ﴿۱۴۳﴾

144. ಓ ಪೈಗಂಬರರೇ, ನಿಮ್ಮ ಮುಖ ಆಗಾಗ ಆಕಾಶದತ್ತ ತಿರುಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇದೋ ನಾವು ನಿಮ್ಮನ್ನು ನೀವಿಷ್ಟಪಡುವ ಕಿಬ್ಲಾದ ಕಡೆಗೇ ತಿರುಗಿಸಿಬಿಡುತ್ತೇವೆ. 'ಮಸ್ಜಿದುಲ್ ಹರಾಮ್'ನ ದಿಕ್ಕಿಗೆ ಮುಖ ಮಾಡಿರಿ. ನೀವೆಲ್ಲಿದ್ದರೂ ಅದರ ಕಡೆಗೇ ಮುಖ ಮಾಡಿ ನಮಾಝ್ ಮಾಡುತ್ತಲಿರಿ.[46] (ಕಿಬ್ಲಾದ ಸ್ಥಾನಾಂತರದ) ಈ ಆಜ್ಞೆ ಇವರ ಪ್ರಭುವಿನ ವತಿಯಿಂದ ಬಂದುದು ಸತ್ಯವೆಂದು ಗ್ರಂಥ ಕೊಡಲ್ಪಟ್ಟವರು ಚೆನ್ನಾಗಿ ಬಲ್ಲರು. ಹೀಗಿದ್ದೂ ಇವರು ಮಾಡುತ್ತಿರುವುದರ ಕುರಿತು ಅಲ್ಲಾಹನು ಅಶ್ರದ್ಧನಲ್ಲ.

قَدْ نَرٰى تَقَلُّبَ وَجْهِكَ فِى السَّمَآءِ ۚ فَلَنُوَلِّيَنَّكَ
قِبْلَةً تَرْضٰهَا ۖ فَوَلِّ وَجْهَكَ شَطْرَ الْمَسْجِدِ
الْحَرَامِ ؕ وَحَيْثُ مَا كُنْتُمْ فَوَلُّوْا وُجُوْهَكُمْ
شَطْرَهٗ ؕ وَاِنَّ الَّذِيْنَ اُوْتُوا الْكِتٰبَ لَيَعْلَمُوْنَ
اَنَّهُ الْحَقُّ مِنْ رَّبِّهِمْ ؕ وَمَا اللّٰهُ بِغَافِلٍ
عَمَّا يَعْمَلُوْنَ ﴿۱۴۴﴾

44. 'ಸುಮಧ್ಯ ಸಮುದಾಯ'ವೆಂದರೆ ನ್ಯಾಯ-ನೀತಿ ಮತ್ತು ಸಂತುಲನೆಯಲ್ಲಿ ನೆಲೆ ನಿಂತ ಲೋಕದ ಸಮುದಾಯಗಳ ಪೈಕಿ ನಾಯಕತ್ವದ ಸ್ಥಾನದಲ್ಲಿರುವ ಸಮುದಾಯವಾಗಿದೆ. ಅದು ಎಲ್ಲರೊಂದಿಗೂ ಸತ್ಯ ಮತ್ತು ನ್ಯಾಯದಿಂದ ಕೂಡಿದ ಸಮಾನ ಸಂಬಂಧ ಹೊಂದಿರುವುದು. ಅಸತ್ಯ ಮತ್ತು ಅನ್ಯಾಯದ ಸಂಬಂಧವನ್ನು ಯಾರೊಂದಿಗೂ ಹೊಂದಿರುವುದಿಲ್ಲ.

45. ಅರ್ಥಾತ್- ನಿರ್ಣಾಯಕ ದಿನದಂದು ಸಮಸ್ತ ಮಾನವಕುಲದ ವಿಚಾರಣೆ ನಡೆಯುವಾಗ, ಪ್ರವಾದಿವರ್ಯರು(ಸ) ಅಲ್ಲಾಹನ ಅಧಿಕೃತ ಪ್ರತಿನಿಧಿಯೆಂಬ ನೆಲೆಯಲ್ಲಿ ತಾನು ದೇವದತ್ತವಾದ ಸುಜ್ಞಾನ, ಸತ್ಕರ್ಮ ಮತ್ತು ಸಂತುಲಿತ ವ್ಯವಸ್ಥೆಯ ಬೋಧನೆಯನ್ನು ಸಾರಸಂಪೂರ್ಣವಾಗಿ ಚಾಚೂ ತಪ್ಪದೆ ತಲಪಿಸಿದ್ದೇನೆ ಮತ್ತು ಅದರಂತೆ ವ್ಯಾವಹಾರಿಕ ಜೀವನವನ್ನು ರೂಪಿಸಿದ್ದೇನೆ ಎಂದು ಸಾಕ್ಷ್ಯ ನುಡಿಯುವರು. ಅನಂತರ ಪ್ರವಾದಿವರ್ಯರ(ಸ) ಉತ್ತರಾಧಿಕಾರಿಗಳೆಂಬ ನೆಲೆಯಲ್ಲಿ ಜನಸಾಮಾನ್ಯರ ಮುಂದೆ ನೀವು ಸಾಕ್ಷ್ಯ ಹೇಳಬೇಕಾಗುವುದು. ಪ್ರವಾದಿವರ್ಯರು(ಸ) ನಿಮಗೆ ತಲಪಿಸಿದ್ದನ್ನು ಇತರರಿಗೆ ತಲುಪಿಸುವಲ್ಲಿ ಮತ್ತು ಅವರು ವ್ಯಾವಹಾರಿಕ ಜೀವನದಲ್ಲಿ ಆಚರಿಸಿದ್ದನ್ನು ಆಚರಿಸುವಲ್ಲಿ ನೀವು ಯಾವುದೇ ರೀತಿಯ ಚ್ಯುತಿ ಮಾಡಲಿಲ್ಲವೆಂದು ಸಾಕ್ಷ್ಯ ಹೇಳಬೇಕಾಗುವುದು.

46. ಇದು ಕಿಬ್ಲಾದ ಬದಲಾವಣೆಯ ಕುರಿತು ನೀಡಲಾದ ಮೂಲ ಆಜ್ಞೆಯಾಗಿದೆ. ಈ ಆಜ್ಞೆ ಹಿ.ಶ. 2ರ ರಜಬ್ ಅಥವಾ ಶಅಬಾನ್ ತಿಂಗಳಲ್ಲಿ ಅವತೀರ್ಣಗೊಂಡಿತು. ಪ್ರವಾದಿವರ್ಯರು(ಸ) ತಮ್ಮ ಅನುಚರರೊಬ್ಬರ ಭೋಜನ ಕೂಟಕ್ಕೆ ಹೋಗಿದ್ದರು. ಅಲ್ಲಿ ಝುಹರ್‌ನ ಸಮಯವಾದಾಗ ಅವರು ಜನರಿಗೆ ನಮಾಝ್ ಮಾಡಿಸಲು ಎದ್ದು ನಿಂತರು. ಎರಡು ರಕಅತ್ ನಿರ್ವಹಿಸಿದ ನಂತರ ಮೂರನೆಯ ರಕಅತ್‌ನಲ್ಲಿ ಒಮ್ಮೆಲೇ ದಿವ್ಯವಾಣಿಯ ಮೂಲಕ ಈ ಸೂಕ್ತ ಅವತೀರ್ಣಗೊಂಡಿತು. ತಕ್ಷಣವೇ ಅವರು ಮತ್ತು ಅವರ

وَلَئِنْ اَتَيْتَ الَّذِيْنَ اُوْتُوا الْكِتٰبَ بِكُلِّ اٰيَةٍ مَّا تَبِعُوْا قِبْلَتَكَ ۚ وَمَاۤ اَنْتَ بِتَابِعٍ قِبْلَتَهُمْ ۚ وَمَا بَعْضُهُمْ بِتَابِعٍ قِبْلَةَ بَعْضٍ ؕ وَلَئِنِ اتَّبَعْتَ اَهْوَآءَهُمْ مِّنْۢ بَعْدِ مَا جَآءَكَ مِنَ الْعِلْمِ ۙ اِنَّكَ اِذًا لَّمِنَ الظّٰلِمِيْنَ ﴿١٤٥﴾

145. ನೀವು ಈ ಗ್ರಂಥದವರ ಬಳಿ ಎಂತಹ ಆಧಾರ ಪ್ರಮಾಣಗಳನ್ನು ತಂದರೂ ಇವರು ನಿಮ್ಮ ಕಿಬ್ಲಾವನ್ನು ಅನುಸರಿಸಲಾರರು. ಇವರ ಕಿಬ್ಲಾವನ್ನು ಅನುಸರಿಸಲು ನಿಮಗೂ ಸಾಧ್ಯವಾಗದು. ಇವರಲ್ಲಿ ಯಾವ ಪಂಗಡವೂ ಇನ್ನೊಂದರ ಕಿಬ್ಲಾವನ್ನು ಅನುಸರಿಸಲು ಸಿದ್ಧವಿಲ್ಲ. ನೀವು ನಿಮಗೆ ದೊರೆತ ಜ್ಞಾನದ ಅನಂತರವೂ ಇವರ ಇಚ್ಛೆಗಳನ್ನು ಅನುಕರಿಸಿದರೆ, ನಿಶ್ಚಯವಾಗಿಯೂ ನೀವು ಅಕ್ರಮಿಗಳೆಂದು ಗಣಿಸಲ್ಪಡುವಿರಿ.

اَلَّذِيْنَ اٰتَيْنٰهُمُ الْكِتٰبَ يَعْرِفُوْنَهٗ كَمَا يَعْرِفُوْنَ اَبْنَآءَهُمْ ؕ وَاِنَّ فَرِيْقًا مِّنْهُمْ لَيَكْتُمُوْنَ الْحَقَّ وَهُمْ يَعْلَمُوْنَ ﴿١٤٦﴾

146. ನಾವು ಗ್ರಂಥ ಕೊಟ್ಟಿರುವವರು ಈ ಸ್ಥಾನವನ್ನು (ಈಗ ಕಿಬ್ಲಾ ಮಾಡಲ್ಪಟ್ಟ ಸ್ಥಾನವನ್ನು) ತಮ್ಮ ಮಕ್ಕಳನ್ನು ಗುರುತಿಸುವಂತೆಯೇ ಗುರುತಿಸುತ್ತಾರೆ.[47] ಆದರೆ ಅವರಲ್ಲೊಂದು ಪಂಗಡವು ತಿಳಿದೂ ತಿಳಿದೂ ಸತ್ಯವನ್ನು ಮರೆಮಾಚುತ್ತಿದೆ.

اَلْحَقُّ مِنْ رَّبِّكَ فَلَا تَكُوْنَنَّ مِنَ الْمُمْتَرِيْنَ ﴿١٤٧﴾

147. ನಿಮ್ಮ ಪ್ರಭುವಿನ ವತಿಯಿಂದ ಬಂದ ಪರಮ ಸತ್ಯವಿದು. ಆದುದರಿಂದ ನೀವು ಈ ಬಗ್ಗೆ ಎಂದೂ ಸಂಶಯ ಕ್ಕೊಳಗಾಗಬೇಡಿರಿ.

وَلِكُلٍّ وِّجْهَةٌ هُوَ مُوَلِّيْهَا فَاسْتَبِقُوا الْخَيْرٰتِ ؕ اَيْنَ مَا تَكُوْنُوْا يَاْتِ بِكُمُ اللّٰهُ جَمِيْعًا ؕ اِنَّ اللّٰهَ عَلٰى كُلِّ شَىْءٍ قَدِيْرٌ ﴿١٤٨﴾

148. ಪ್ರತಿಯೊಬ್ಬನಿಗೂ ಅವನು ಮುಖಮಾಡುವ ದಿಕ್ಕೊಂದಿದೆ. ನೀವಂತು ಸತ್ಕರ್ಮಗಳ ದಿಕ್ಕಿಗೆ ಮುನ್ನಡೆಯಿರಿ. ನೀವೆಲ್ಲಿದ್ದರೂ ಅಲ್ಲಾಹನು ನಿಮ್ಮೆಲ್ಲರನ್ನೂ ಮರಳಿ ತರುವನು. ಅವನ ಅಧಿಕಾರ ವ್ಯಾಪ್ತಿಯಿಂದ ಯಾವುದೂ ಹೊರಗಿಲ್ಲ.

وَمِنْ حَيْثُ خَرَجْتَ فَوَلِّ وَجْهَكَ شَطْرَ الْمَسْجِدِ الْحَرَامِ ؕ وَاِنَّهٗ لَلْحَقُّ مِنْ رَّبِّكَ ؕ وَمَا اللّٰهُ بِغَافِلٍ عَمَّا تَعْمَلُوْنَ ﴿١٤٩﴾

149. ನೀವು ಎತ್ತ ಯಾತ್ರೆ ಹೊರಟಿದ್ದರೂ ಅಲ್ಲಿ (ನಮಾಝಿನ ವೇಳೆ) ನಿಮ್ಮ ಮುಖವನ್ನು 'ಮಸ್ಜಿದುಲ್ ಹರಾಮ್'ನ ಕಡೆಗೆ ತಿರುಗಿಸಿಬಿಡಿರಿ. ಏಕೆಂದರೆ, ನಿಮ್ಮ ಪಾಲಕ ಪ್ರಭುವಿನ ಪರಮ ದಿಟವಾದ ತೀರ್ಮಾನವಿದು. ಅಲ್ಲಾಹನು ನಿಮ್ಮ ಕರ್ಮಗಳ ಕುರಿತು ಅಶ್ರದ್ಧನಲ್ಲ.

ಹಿಂಬಾಲಕರೆಲ್ಲರೂ ನಮಾಝ್‌ನಲ್ಲಿದ್ದಂತೆಯೇ ಬೈತುಲ್ ಮುಕದ್ದಿಸ್‌ನಿಂದ ಕಅಬಾದ ಕಡೆಗೆ ತಿರುಗಿದರು. ಅನಂತರ ಮದೀನಾ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಅದರ ಡಂಗುರ ಸಾರಲಾಯಿತು. ಸೂಕ್ತದಲ್ಲಿ "ನಿಮ್ಮ ಮುಖ ಆಗಾಗ ಆಕಾಶದತ್ತ ತಿರುಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ" ಮತ್ತು "ನಾವು ನಿಮ್ಮನ್ನು ನೀವಿಷ್ಟಪಡುವ ಕಿಬ್ಲಾದ ಕಡೆಗೇ ತಿರುಗಿಸಿಬಿಡುತ್ತೇವೆ" ಎಂದು ಹೇಳಲಾಗಿರುವುದರಿಂದ ಕಿಬ್ಲಾದ ಬದಲಾವಣೆಯ ಆಜ್ಞೆ ಬರುವುದಕ್ಕೆ ಮೊದಲೇ ಪ್ರವಾದಿವರ್ಯರು(ಸ) ಅದರ ನಿರೀಕ್ಷೆಯಲ್ಲಿದ್ದರೆಂದು ಸ್ಪಷ್ಟವಾಗುತ್ತದೆ.

47. ಇದು ಅರಬರ ಒಂದು ನುಡಿಗಟ್ಟಾಗಿದೆ. ವ್ಯಕ್ತಿ ಚೆನ್ನಾಗಿ ತಿಳಿದಿರುವ ವಿಷಯಗಳ ಕುರಿತು "ಅದನ್ನು ಅವನು ತನ್ನ ಮಕ್ಕಳನ್ನು ಗುರುತಿಸುವಂತೆ ಗುರುತಿಸಬಲ್ಲ" ಎಂದು ಹೇಳಲಾಗುತ್ತದೆ. ಕಅಬಾವನ್ನು ಹ. ಇಬ್‌ರಾಹೀಮ್(ಅ) ನಿರ್ಮಿಸಿದ್ದರು. ಅದಕ್ಕೆ ವ್ಯತಿರಿಕ್ತವಾಗಿ ಬೈತುಲ್ ಮುಕದ್ದಿಸ್ ಅದರ ಹದಿಮೂರು ಶತಮಾನಗಳ ನಂತರ ಹ. ಸುಲೈಮಾನ್‌ರ(ಅ) ಮೂಲಕ ನಿರ್ಮಾಣವಾಗಿತ್ತು ಎಂಬುದನ್ನು ಯಹೂದಿ ಮತ್ತು ಕ್ರೈಸ್ತ ವಿದ್ವಾಂಸರು ಚೆನ್ನಾಗಿ ಬಲ್ಲವರಾಗಿದ್ದರು. ಈ ವಿಷಯ ಯಾರಿಗೂ ತಿಳಿಯದಿರಲಿಲ್ಲ.

150. ಮತ್ತು ನೀವು ಎತ್ತ ಯಾತ್ರೆ ಹೊರಟರೂ ನಿಮ್ಮ ಮುಖವನ್ನು 'ಮಸ್ಜಿದುಲ್ ಹರಾಮ್'ನ ಕಡೆಗೇ ತಿರುಗಿಸಿಬಿಡಿರಿ ಮತ್ತು ಜನರಿಗೆ ನಿಮ್ಮ ವಿರುದ್ಧ ವಾದಕ್ಕೆ ಅವಕಾಶ ಸಿಗದಂತಾಗಲು ನೀವೆಲ್ಲಿದ್ದರೂ ಅದರ ಕಡೆಗೇ ಮುಖ ತಿರುಗಿಸಿರಿ.[48] ಆದರೆ ಅಕ್ರಮಿಗಳ ಬಾಯಿ ಎಂದೂ ಮುಚ್ಚದು. ಆದುದರಿಂದ ಅವರನ್ನು ನೀವು ಭಯಪಡಬೇಡಿರಿ. ನನ್ನನ್ನು ಮಾತ್ರ ಭಯಪಡಿರಿ. ಇದು ನಿಮ್ಮ ಮೇಲೆ ನನ್ನ ಅನುಗ್ರಹವನ್ನು ಸಂಪೂರ್ಣಗೊಳಿಸಲಿಕ್ಕಾಗಿಯೂ[49] ನನ್ನ ಆಜ್ಞಾಪಾಲನೆಯ ಮೂಲಕ ನೀವು ಸನ್ಮಾರ್ಗ ಪಡೆಯಬಹುದೆಂದು ನಿರೀಕ್ಷೆಯಿಂದಲೂ ಆಗಿರುತ್ತದೆ.

وَمِنْ حَيْثُ خَرَجْتَ فَوَلِّ وَجْهَكَ
شَطْرَ الْمَسْجِدِ الْحَرَامِ ۚ وَحَيْثُ مَا كُنْتُمْ
فَوَلُّوا وُجُوهَكُمْ شَطْرَهُ لِئَلَّا يَكُونَ لِلنَّاسِ
عَلَيْكُمْ حُجَّةٌ إِلَّا الَّذِينَ ظَلَمُوا مِنْهُمْ
فَلَا تَخْشَوْهُمْ وَاخْشَوْنِي وَلِأُتِمَّ نِعْمَتِي
عَلَيْكُمْ وَلَعَلَّكُمْ تَهْتَدُونَ ﴿١٥٠﴾

151. ನಾವು ನಿಮ್ಮೊಳಗಿಂದಲೇ ಓರ್ವ ಸಂದೇಶವಾಹಕನನ್ನು ಕಳುಹಿಸಿದೆವು. ಅವರು ನಿಮಗೆ ನಮ್ಮ ವಚನಗಳನ್ನು ಓದಿ ಹೇಳುತ್ತಾರೆ. ನಿಮ್ಮನ್ನು ಸಂಸ್ಕರಿಸುತ್ತಾರೆ. ನಿಮಗೆ ಗ್ರಂಥ ಮತ್ತು ಯುಕ್ತಿಯ ಶಿಕ್ಷಣ ನೀಡುತ್ತಾರೆ ಮತ್ತು ನೀವು ಇಷ್ಟರ ತನಕ ತಿಳಿಯದಿದ್ದ ಸಂಗತಿಗಳನ್ನು ಬೋಧಿಸುತ್ತಾರೆ.

كَمَا أَرْسَلْنَا فِيكُمْ رَسُولًا مِنْكُمْ يَتْلُو عَلَيْكُمْ
آيَاتِنَا وَيُزَكِّيكُمْ وَيُعَلِّمُكُمُ الْكِتَابَ وَالْحِكْمَةَ
وَيُعَلِّمُكُمْ مَا لَمْ تَكُونُوا تَعْلَمُونَ ﴿١٥١﴾

152. (ಇದರಿಂದಲೇ ನಿಮಗೆ ಸನ್ಮಾರ್ಗ ಪ್ರಾಪ್ತಿಯಾಯಿತು) ಆದುದರಿಂದ ನೀವು ನನ್ನನ್ನು ಸ್ಮರಿಸುತ್ತಲಿರಿ, ನಾನು ನಿಮ್ಮನ್ನು ಸ್ಮರಿಸುವೆನು ಮತ್ತು ನನಗೆ ಕೃತಜ್ಞರಾಗಿರಿ, ಕೃತಘ್ನರಾಗಬೇಡಿರಿ.

فَاذْكُرُونِي أَذْكُرْكُمْ وَاشْكُرُوا لِي وَلَا تَكْفُرُونِ ﴿١٥٢﴾

153. ಓ ಸತ್ಯವಿಶ್ವಾಸಿಗಳೇ, ಸಹನೆ ಮತ್ತು ನಮಾಝಿನಿಂದ ಸಹಾಯ ಪಡೆಯಿರಿ. ನಿಶ್ಚಯವಾಗಿಯೂ ಅಲ್ಲಾಹನು ಸಹನಶೀಲರೊಂದಿಗಿದ್ದಾನೆ.

يَا أَيُّهَا الَّذِينَ آمَنُوا اسْتَعِينُوا بِالصَّبْرِ وَ
الصَّلَاةِ ۚ إِنَّ اللَّهَ مَعَ الصَّابِرِينَ ﴿١٥٣﴾

154. ಅಲ್ಲಾಹನ ಪಥದಲ್ಲಿ ವಧಿಸಲ್ಪಡುವವರನ್ನು ಮೃತರೆನ್ನಬೇಡಿರಿ. ಅವರು ವಾಸ್ತವದಲ್ಲಿ ಜೀವಂತವಿದ್ದಾರೆ. ಆದರೆ ಅವರ ಜೀವನದ ಅರಿವು ನಿಮಗಾಗುವುದಿಲ್ಲ.

وَلَا تَقُولُوا لِمَنْ يُقْتَلُ فِي سَبِيلِ اللَّهِ
أَمْوَاتٌ ۚ بَلْ أَحْيَاءٌ وَلَٰكِنْ لَا تَشْعُرُونَ ﴿١٥٤﴾

155. ನಾವು ನಿಮ್ಮನ್ನು ಭಯಾಶಂಕೆ, ಹಸಿವು, ಧನಹಾನಿ, ಜೀವಹಾನಿ ಮತ್ತು ಉತ್ಪನ್ನಗಳ ನಾಶಗಳಿಗೊಳಪಡಿಸಿ ಅವಶ್ಯವಾಗಿಯೂ ಪರೀಕ್ಷಿಸುವೆವು. ಇಂತಹ ಸನ್ನಿವೇಶಗಳಲ್ಲಿ ತಾಳ್ಮೆ ವಹಿಸಿದವರಿಗೆ ಸುವಾರ್ತೆ ನೀಡಿರಿ.

وَلَنَبْلُوَنَّكُمْ بِشَيْءٍ مِنَ الْخَوْفِ وَالْجُوعِ
وَنَقْصٍ مِنَ الْأَمْوَالِ وَالْأَنْفُسِ وَالثَّمَرَاتِ ۗ
وَبَشِّرِ الصَّابِرِينَ ﴿١٥٥﴾

48. ಅಂದರೆ ಯಾರಿಗೂ "ತನ್ನ ಪ್ರಭುವಿನ ಸ್ಪಷ್ಟ ಆಜ್ಞೆಯನ್ನು ಉಲ್ಲಂಘಿಸುವ, ಇವರು ಎಂತಹ ಸತ್ಯವಿಶ್ವಾಸಿಗಳು" ಎಂದು ಹೇಳುವ ಅವಕಾಶ ದೊರೆಯಬಾರದು.

49. ಇದು, 'ಜನರಿಗೆ ನಿಮ್ಮ ವಿರುದ್ಧ ವಾದಕ್ಕೆ ಅವಕಾಶ ಸಿಗದಂತಾಗಲು ನೀವೆಲ್ಲಿದ್ದರೂ ಅದರ ಕಡೆಗೇ ಮುಖ ತಿರುಗಿಸಿರಿ' ಎಂಬ ಮಾತಿಗೆ ಸಂಬಂಧಿಸಿದುದಾಗಿದೆ.

156. ಅಂತಹವರ ಮೇಲೆ ವಿಪತ್ತೇನಾದರೂ ಎರಗಿದಾಗ ಅವರು "ನಿಶ್ಚಯವಾಗಿಯೂ ನಾವು ಅಲ್ಲಾಹನವರು ಮತ್ತು ಅಲ್ಲಾಹನೆಡೆಗೇ ನಮಗೆ ಮರಳಲಿಕ್ಕಿದೆ" ಎನ್ನುವರು.

الَّذِينَ إِذَا أَصَابَتْهُمْ مُصِيبَةٌ قَالُوا إِنَّا
لِلَّهِ وَإِنَّا إِلَيْهِ رَاجِعُونَ ﴿١٥٦﴾

157. ಅವರ ಮೇಲೆ ಅವರ ಪ್ರಭುವಿನ ಕಡೆಯಿಂದ ಮಹಾ ಅನುಗ್ರಹಗಳಿರುವುವು. ಅವನ ಕಾರುಣ್ಯವು ಅವರನ್ನು ಆಚ್ಛಾದಿಸುವುದು ಮತ್ತು ಇಂತಹವರೇ ಸನ್ಮಾರ್ಗ ಹೊಂದಿದವರಾಗಿರುತ್ತಾರೆ.

أُولَٰئِكَ عَلَيْهِمْ صَلَوَاتٌ مِنْ رَبِّهِمْ وَرَحْمَةٌ ۖ
وَأُولَٰئِكَ هُمُ الْمُهْتَدُونَ ﴿١٥٧﴾

158. ನಿಶ್ಚಯವಾಗಿಯೂ 'ಸಫಾ' ಮತ್ತು 'ಮರ್ವಾ'ಗಳು ಅಲ್ಲಾಹನ ಸಂಕೇತಗಳಲ್ಲಾಗಿರುತ್ತವೆ. ಆದುದರಿಂದ ಪವಿತ್ರ ಭವನದ 'ಹಜ್ಜ್' ಯಾ 'ಉಮ್ರಾ'[50] ಮಾಡುವಾತನು ಆ ಎರಡು ಬೆಟ್ಟಗಳ ನಡುವೆ 'ಸಅ್‌ಯ್' ಮಾಡುವುದರಲ್ಲೇನೂ ದೋಷವಿಲ್ಲ ಮತ್ತು ಸ್ವಯಂ ಪ್ರೇರಣೆಯಿಂದ ಸತ್ಕರ್ಮ ಮಾಡುವವನನ್ನು ಅಲ್ಲಾಹ್ ಬಲ್ಲವನೂ ಅವನನ್ನು ಗೌರವಿಸುವವನೂ ಆಗಿರುತ್ತಾನೆ.

إِنَّ الصَّفَا وَالْمَرْوَةَ مِنْ شَعَائِرِ اللَّهِ ۖ فَمَنْ
حَجَّ الْبَيْتَ أَوِ اعْتَمَرَ فَلَا جُنَاحَ عَلَيْهِ أَنْ
يَطَّوَّفَ بِهِمَا ۚ وَمَنْ تَطَوَّعَ خَيْرًا فَإِنَّ اللَّهَ
شَاكِرٌ عَلِيمٌ ﴿١٥٨﴾

159. ನಾವು ಅವತೀರ್ಣಗೊಳಿಸಿದ ಸುವ್ಯಕ್ತ ದೃಷ್ಟಾಂತಗಳನ್ನೂ ಮಾರ್ಗದರ್ಶನಗಳನ್ನೂ - ನಾವು ಅವುಗಳನ್ನು ಸಮಸ್ತ ಮಾನವರಿಗಾಗಿ ನಮ್ಮ ಗ್ರಂಥದಲ್ಲಿ ವಿವರಿಸಿದ ಬಳಿಕವೂ- ಯಾರು ಮರೆಮಾಚುತ್ತಾರೋ ಅವರನ್ನು ಅಲ್ಲಾಹನು ಅಭಿಶಪಿಸುತ್ತಾನೆ ಮತ್ತು ಶಪಿಸುವವರೆಲ್ಲರೂ ಅವರನ್ನು ಅಭಿಶಪಿಸುತ್ತಾರೆ.

إِنَّ الَّذِينَ يَكْتُمُونَ مَا أَنْزَلْنَا مِنَ الْبَيِّنَاتِ
وَالْهُدَىٰ مِنْ بَعْدِ مَا بَيَّنَّاهُ لِلنَّاسِ فِي
الْكِتَابِ ۙ أُولَٰئِكَ يَلْعَنُهُمُ اللَّهُ وَيَلْعَنُهُمُ اللَّاعِنُونَ ﴿١٥٩﴾

160. ಆದರೆ ಪಶ್ಚಾತ್ತಾಪ ಪಡುವವರನ್ನೂ ತಮ್ಮ ವರ್ತನೆಯನ್ನು ತಿದ್ದಿಕೊಳ್ಳುವವರನ್ನೂ, ಮರೆಮಾಚಿದುದನ್ನು ಬಹಿರಂಗಗೊಳಿಸುವವರನ್ನೂ ನಾನು ಕ್ಷಮಿಸುವೆನು ಮತ್ತು ನಾನು ಪಶ್ಚಾತ್ತಾಪವನ್ನು ಅತ್ಯಧಿಕವಾಗಿ ಸ್ವೀಕರಿಸುವವನೂ ಕರುಣಾನಿಧಿಯೂ ಆಗಿರುತ್ತೇನೆ.

إِلَّا الَّذِينَ تَابُوا وَأَصْلَحُوا وَبَيَّنُوا فَأُولَٰئِكَ
أَتُوبُ عَلَيْهِمْ ۚ وَأَنَا التَّوَّابُ الرَّحِيمُ ﴿١٦٠﴾

161. 'ಸತ್ಯನಿಷೇಧ'[51] ನಿಲುವೆಯನ್ನು ಕೈಗೊಂಡು ಸತ್ಯನಿಷೇಧಾವಸ್ಥೆಯಲ್ಲಿಯೇ ಪ್ರಾಣಬಿಟ್ಟವರಿಗೆ ಅಲ್ಲಾಹನ, ಅವನ ದೇವಚರರ ಮತ್ತು ಸಕಲ ಮಾನವರ ಅಭಿಶಾಪವಿದೆ.

إِنَّ الَّذِينَ كَفَرُوا وَمَاتُوا وَهُمْ كُفَّارٌ أُولَٰئِكَ
عَلَيْهِمْ لَعْنَةُ اللَّهِ وَالْمَلَائِكَةِ وَالنَّاسِ أَجْمَعِينَ ﴿١٦١﴾

50. ದುಲ್‌ಹಜ್ಜ್ ತಿಂಗಳ ನಿರ್ದಿಷ್ಟ ತಾರೀಕಿನಲ್ಲಿ ಮಾಡುವ ಕಅಬಾ ಸಂದರ್ಶನಕ್ಕೆ 'ಹಜ್ಜ್' ಎನ್ನುತ್ತಾರೆ. ಅದರ ಹೊರತು ಉಳಿದ ದಿನಗಳಲ್ಲಿ ಮಾಡುವ ಕಅಬಾ ಸಂದರ್ಶನವನ್ನು 'ಉಮ್ರಾ' ಎನ್ನುತ್ತಾರೆ.

51. ಕುಫ್ರ್(ಸತ್ಯನಿಷೇಧ) ಎಂಬ ಪದವನ್ನು 'ಈಮಾನ್'(ಸತ್ಯವಿಶ್ವಾಸ)ನ ವಿರೋಧಾರ್ಥದಲ್ಲಿ ಉಪಯೋಗಿಸಲಾಗುತ್ತದೆ. ಈಮಾನ್ ಎಂದರೆ ನಂಬುವುದು ಸ್ವೀಕರಿಸುವುದು, ಅಂಗೀಕರಿಸುವುದು ಎಂದರ್ಥ. ಅದಕ್ಕೆದುರಾಗಿ 'ಕುಫ್ರ್' ಎಂದರೆ ಅವಿಶ್ವಾಸ ತೋರುವುದು,

162. ಅವರು ಈ ಶಪಿತಾವಸ್ಥೆಯಲ್ಲಿಯೇ ಸದಾಕಾಲವಿರುವರು. ಅವರ ಶಿಕ್ಷೆಯಲ್ಲಿ ಕಡಿತವೂ ಆಗಲಾರದು. ಅವರಿಗೆ ಇನ್ನೊಂದು ಕಾಲಾವಕಾಶವನ್ನೂ ನೀಡಲಾಗದು.

خٰلِدِيْنَ فِيْهَا ۚ لَا يُخَفَّفُ عَنْهُمُ الْعَذَابُ
وَلَا هُمْ يُنْظَرُوْنَ ﴿١٦٢﴾

163. ನಿಮ್ಮ ದೇವ ಏಕೈಕ ದೇವ. ಆ ದಯಾಮಯನೂ ಕರುಣಾ ನಿಧಿಯೂ ಆಗಿರುವವನ ಹೊರತು ಇನ್ನೊಬ್ಬ ದೇವನಿಲ್ಲ.

وَاِلٰـهُكُمْ اِلٰهٌ وَّاحِدٌ ۚ لَآ اِلٰهَ اِلَّا هُوَ الرَّحْمٰنُ الرَّحِيْمُ ﴿١٦٣﴾

164. (ಈ ಸತ್ಯವನ್ನು ಅರಿತುಕೊಳ್ಳಲಿಕ್ಕಾಗಿ ಯಾವುದಾದರೂ ಕುರುಹು ಅಥವಾ ದೃಷ್ಟಾಂತ ಬೇಕಾದರೆ) ಆಕಾಶಗಳ ಮತ್ತು ಭೂಮಿಯ ನಿರ್ಮಾಣದಲ್ಲಿ, ಇರುಳು ಹಗಲುಗಳು ಒಂದರ ಹಿಂದೆ ಇನ್ನೊಂದರಂತೆ ನಿರಂತರವಾಗಿ ಬರುತ್ತಿರುವುದರಲ್ಲಿ, ಜನೋಪಯೋಗಿ ಸಾಮಗ್ರಿಗಳನ್ನು ಹೊತ್ತುಕೊಂಡು ಜಲಧಿಗಳಲ್ಲಿ ಸಂಚರಿಸುತ್ತಿರುವ ನೌಕೆಗಳಲ್ಲಿ, ಅಲ್ಲಾಹನು ಆಕಾಶದಿಂದ ಸುರಿಸಿ ಅದರ ಮೂಲಕ ಭೂಮಿಯನ್ನು ನಿರ್ಜೀವಾವಸ್ಥೆಯ ಬಳಿಕ ಸಜೀವಗೊಳಿಸಿ, ಈ ವ್ಯವಸ್ಥೆಯ ಮೂಲಕ ಭೂಮಿಯಲ್ಲಿ ತರತರದ ಜೀವರಾಶಿಗಳು ಹರಡಿರುವಂತೆ ಮಾಡಿದ ಮಳೆ ನೀರಿನಲ್ಲಿ, ಮಾರುತಗಳ ಚಲನೆಯಲ್ಲಿ ಹಾಗೂ ಆಕಾಶ ಮತ್ತು ಭೂಮಿಯ ನಡುವೆ ನಿಯಂತ್ರಿಸಲ್ಪಟ್ಟಿರುವ ಮೋಡಗಳಲ್ಲಿ ನಿಶ್ಚಯವಾಗಿಯೂ ವಿಚಾರವಂತರಿಗೆ ಅನೇಕಾನೇಕ ದೃಷ್ಟಾಂತಗಳಿವೆ.

اِنَّ فِیْ خَلْقِ السَّمٰوٰتِ وَالْاَرْضِ وَاخْتِلَافِ
الَّيْلِ وَالنَّهَارِ وَالْفُلْكِ الَّتِیْ تَجْرِیْ فِی
الْبَحْرِ بِمَا يَنْفَعُ النَّاسَ وَمَآ اَنْزَلَ اللّٰهُ
مِنَ السَّمَآءِ مِنْ مَّآءٍ فَاَحْيَا بِهِ الْاَرْضَ
بَعْدَ مَوْتِهَا وَبَثَّ فِيْهَا مِنْ كُلِّ دَآبَّةٍ
وَّتَصْرِيْفِ الرِّيٰحِ وَالسَّحَابِ الْمُسَخَّرِ بَيْنَ
السَّمَآءِ وَالْاَرْضِ لَاٰيٰتٍ لِّقَوْمٍ يَّعْقِلُوْنَ ﴿١٦٤﴾

165. ಆದರೆ (ಅಲ್ಲಾಹನ ಏಕತೆಯನ್ನು ಪ್ರಮಾಣ ಪಡಿಸುವ ಇಂತಹ ಸುಸ್ಪಷ್ಟ ಕುರುಹುಗಳಿದ್ದರೂ) ಕೆಲವರು ಅಲ್ಲಾಹನ ಹೊರತು ಇತರರನ್ನು ಅವನ ಸರಿಸಾಟಿ ಮತ್ತು ಎದುರಾಳಿಯನ್ನಾಗಿ

وَمِنَ النَّاسِ مَنْ يَّتَّخِذُ مِنْ دُوْنِ اللّٰهِ
اَنْدَادًا يُّحِبُّوْنَهُمْ كَحُبِّ اللّٰهِ ؕ وَالَّذِيْنَ

ನಿರಾಕರಿಸುವುದು- ಧಿಕ್ಕರಿಸುವುದು ಎಂದಾಗಿದೆ. ಕುರ್‌ಆನಿನ ಪ್ರಕಾರ ಕುಫ್ರ್‌ನ ಧೋರಣೆಯ ಅನೇಕ ವಿಧಗಳಿವೆ:

1) ಮಾನವ ಮೂಲತಃ ದೇವನನ್ನೇ ನಂಬದಿರುವುದು, ಅವನ ಸಾರ್ವಭೌಮತೆಯನ್ನು ಅಂಗೀಕರಿಸದಿರುವುದು, ಅವನು ತನ್ನ ಮತ್ತು ಸಮಸ್ತ ವಿಶ್ವದ ಒಡೆಯನೂ ಆರಾಧ್ಯನೂ ಆಗಿರುವನೆಂಬುದನ್ನು ನಿರಾಕರಿಸುವುದು ಅಥವಾ ಅವನು ಮಾತ್ರವೇ ಒಡೆಯ ಮತ್ತು ಆರಾಧ್ಯನಾಗಿದ್ದಾನೆ ಎಂದು ನಂಬದಿರುವುದು.

2) ಅಲ್ಲಾಹನ ಮೇಲೆ ವಿಶ್ವಾಸವಿಟ್ಟರೂ ಅವನ ಆದೇಶ ಮತ್ತು ಮಾರ್ಗದರ್ಶನ ಮಾತ್ರ, ಜ್ಞಾನ ಮತ್ತು ಕಾನೂನಿನ ಮೂಲವೆಂದು ಒಪ್ಪಲು ನಿರಾಕರಿಸುವುದು.

3) ಅಲ್ಲಾಹನ ಮಾರ್ಗದರ್ಶನದಂತೆಯೇ ನಡೆಯಬೇಕೆಂದು ತಾತ್ವಿಕವಾಗಿ ಒಪ್ಪಿಕೊಳ್ಳುವುದು. ಆದರೆ ಅಲ್ಲಾಹನು ತನ್ನ ಮಾರ್ಗದರ್ಶನ ಮತ್ತು ಆದೇಶಗಳನ್ನು ತಲಪಿಸಲು ಮಧ್ಯವರ್ತಿಗಳನ್ನಾಗಿ ಮಾಡಿರುವ ಪ್ರವಾದಿಗಳನ್ನು ಒಪ್ಪದಿರುವುದು.

4) ಪ್ರವಾದಿಗಳ ನಡುವೆ ಭೇದ ಕಲ್ಪಿಸುವುದು. ತನ್ನಿಚ್ಛೆ ಅಥವಾ ಪಕ್ಷಪಾತದಿಂದಾಗಿ ಕೆಲವರನ್ನು ನಂಬುವುದು ಮತ್ತು ಕೆಲವರನ್ನು ನಿರಾಕರಿಸುವುದು.

ಮಾಡುತ್ತಾರೆ ಮತ್ತು ಅಲ್ಲಾಹನಿಗೆ ಮಾರುಹೋಗಬೇಕಾದ ರೀತಿಯಲ್ಲಿ, ಅವರಿಗೆ ಮಾರುಹೋಗುತ್ತಾರೆ. ವಸ್ತುತಃ ಸತ್ಯವಿಶ್ವಾಸಿಗಳು ಅತ್ಯಧಿಕವಾಗಿ ಅಲ್ಲಾಹನನ್ನೇ ಪ್ರೀತಿಸುತ್ತಾರೆ. ಅಕಟ! ಸರ್ವ ಶಕ್ತಿಗಳೂ ಸರ್ವ ಅಧಿಕಾರಗಳೂ ಅಲ್ಲಾಹನ ವಶದಲ್ಲೇ ಇರುವುವು ಮತ್ತು ಅಲ್ಲಾಹನು ಶಿಕ್ಷಿಸುವುದರಲ್ಲಿಯೂ ಅತ್ಯಂತ ಕಠೋರನೆಂಬುದನ್ನು, ಯಾತನೆಯನ್ನು ಕಣ್ಣ ಮುಂದೆ ಕಂಡಾಗ ಮನಗಾಣಲಿರುವ ಈ ಅಕ್ರಮಿಗಳು ಇಂದೇ ಅದನ್ನು ಮನಗಂಡಿದ್ದರೆ!

ءَامَنُوٓا أَشَدُّ حُبًّا لِّلَّهِ ۗ وَلَوْ يَرَى الَّذِينَ
ظَلَمُوٓا إِذْ يَرَوْنَ الْعَذَابَ أَنَّ الْقُوَّةَ لِلَّهِ
جَمِيعًا وَأَنَّ اللَّهَ شَدِيدُ الْعَذَابِ ﴿١٦٥﴾

166. ಅವನು ಶಿಕ್ಷೆ ಕೊಡುವಾಗಿನ ಅವಸ್ಥೆ ಹೀಗಿರುವುದು- ಇಹಲೋಕದಲ್ಲಿ ಅನುಸರಿಸಲ್ಪಡುತ್ತಿದ್ದ ಆ ಮುಂದಾಳುಗಳೇ ತಮ್ಮ ಅನುಯಾಯಿಗಳನ್ನು ಅವಗಣಿಸುವರು. ಆದರೂ ಅವರು ಶಿಕ್ಷೆ ಪಡೆದೇ ತೀರುವರು. ಅವರಿಗಿದ್ದ ಎಲ್ಲ ತರದ ಆಧಾರ-ಬೆಂಬಲಗಳ ಶೃಂಖಲೆ ಕಡಿದುಹೋಗುವುದು.

إِذْ تَبَرَّأَ الَّذِينَ اتُّبِعُوا مِنَ الَّذِينَ اتَّبَعُوا
وَرَأَوُا الْعَذَابَ وَتَقَطَّعَتْ بِهِمُ الْأَسْبَابُ ﴿١٦٦﴾

167. ಇಹಲೋಕದಲ್ಲಿ ಅವರ ಹಿಂಬಾಲಕರು "ಅಕಟ! ನಮಗೆ ಇನ್ನೊಂದು ಅವಕಾಶವನ್ನು ನೀಡಲಾಗುತ್ತಿದ್ದರೆ, ಇವರೀಗ ನಮ್ಮೊಂದಿಗೆ ಅಸಂತುಷ್ಟಿಯನ್ನು ತೋರ್ಪಡಿಸುತ್ತಿರುವಂತೆಯೇ ನಾವೂ ಅವರೊಂದಿಗೆ ಅಸಂತುಷ್ಟಿಯನ್ನು ಪ್ರಕಟಪಡಿಸುತ್ತಿದ್ದೆವು" ಎನ್ನುವರು. ಹೀಗೆ ಹತಾಶರೂ ಲಜ್ಜಿತರೂ ಆಗಿ ಅತೀವ ಪಶ್ಚಾತ್ತಾಪ ಪಡುವಂತಾಗುವ ರೀತಿಯಲ್ಲಿ ಅವರು ಇಹಲೋಕದಲ್ಲಿ ಮಾಡುತ್ತಿರುವ ಆ ಕರ್ಮಗಳನ್ನೆಲ್ಲ ಅಲ್ಲಾಹನು ಅವರ ಮುಂದೆ ತರುವನು. ಆದರೆ ಅವರಿಗೆ ನರಕದಿಂದ ಹೊರಗೆ ಹೋಗಲು ಯಾವ ದಾರಿಯೂ ಸಿಗಲಾರದು.

وَقَالَ الَّذِينَ اتَّبَعُوا لَوْ أَنَّ لَنَا كَرَّةً فَنَتَبَرَّأَ
مِنْهُمْ كَمَا تَبَرَّءُوا مِنَّا ۗ كَذَٰلِكَ يُرِيهِمُ اللَّهُ
أَعْمَالَهُمْ حَسَرَاتٍ عَلَيْهِمْ ۖ وَمَا هُم بِخَارِجِينَ
مِنَ النَّارِ ﴿١٦٧﴾

168. ಹೇ ಜನರೇ, ಭೂಮಿಯಲ್ಲಿರುವ ಧರ್ಮಸಮ್ಮತ ಹಾಗೂ ಶುದ್ಧ ವಸ್ತುಗಳನ್ನು ನೀವು ಉಣ್ಣಿರಿ. ಶೈತಾನನು ತೋರಿಸಿದ ಹಾದಿಗಳಲ್ಲಿ ನಡೆಯಬೇಡಿರಿ. ಅವನು ನಿಮ್ಮ ಪ್ರತ್ಯಕ್ಷ ಶತ್ರು.

يَا أَيُّهَا النَّاسُ كُلُوا مِمَّا فِي الْأَرْضِ حَلَالًا
طَيِّبًا وَلَا تَتَّبِعُوا خُطُوَاتِ الشَّيْطَانِ ۚ
إِنَّهُ لَكُمْ عَدُوٌّ مُّبِينٌ ﴿١٦٨﴾

5) ಪ್ರವಾದಿಗಳು ದೇವನ ವತಿಯಿಂದ ನೀಡಿದ ವಿಶ್ವಾಸ, ನೀತಿ ಮತ್ತು ಜೀವನ ಸಂಹಿತೆಯ ಕುರಿತಾದ ಬೋಧನೆಗಳನ್ನು ಸಂಪೂರ್ಣ ಅಥವಾ ಆಂಶಿಕವಾಗಿ ನಿರಾಕರಿಸುವುದು.

6) ಸೈದ್ಧಾಂತಿಕವಾಗಿ ಇದೆಲ್ಲವನ್ನೂ ಒಪ್ಪಿಕೊಳ್ಳುವುದು, ಆದರೆ ಆಚಾರದಲ್ಲಿ ದೇವಾಜ್ಞೆಗಳನ್ನು ಪ್ರಜ್ಞಾಪೂರ್ವಕ ಉಲ್ಲಂಘಿಸುವುದು ಮತ್ತು ಅದರ ಬಗ್ಗೆ ಪಟ್ಟು ಹಿಡಿಯುವುದು ಲೌಕಿಕ ಜೀವನದ ತನ್ನ ಧೋರಣೆಗೆ ಆಜ್ಞಾನುಸರಣೆಯ ಬದಲು ಆಜ್ಞೋಲ್ಲಂಘನೆಯನ್ನೇ ಮೂಲಾಧಾರವಾಗಿರಿಸುವುದು.

169. ಅವನು ನಿಮಗೆ ಪಾಪಕಾರ್ಯ ಮತ್ತು ಅಶ್ಲೀಲತೆಗಳ ಅಪ್ಪಣೆ ಕೊಟ್ಟು, ಅದು ಅಲ್ಲಾಹನ ಆದೇಶವೆಂದು ನಿಮಗೆ ತಿಳಿದಿಲ್ಲವಾದರೂ ಅಲ್ಲಾಹನ ಹೆಸರಿಂದ ನೀವು ಅದನ್ನು ಹೇಳಿರೆಂದು ಬೋಧಿಸುತ್ತಾನೆ.

إِنَّمَا يَأْمُرُكُم بِالسُّوٓءِ وَالْفَحْشَآءِ وَأَن تَقُولُوا عَلَى اللَّهِ مَا لَا تَعْلَمُونَ ﴿١٦٩﴾

170. ಅಲ್ಲಾಹನು ಅವತೀರ್ಣಗೊಳಿಸಿದ ನಿರ್ದೇಶಗಳನ್ನು ಅನುಸರಿಸಿರೆಂದು ಅವರೊಡನೆ ಹೇಳಲಾದಾಗ, "ನಾವು ನಮ್ಮ ಪೂರ್ವಿಕರು ಯಾವ ಕ್ರಮವನ್ನು ಅನುಸರಿಸುತ್ತಿದ್ದುದನ್ನು ಕಂಡಿದ್ದೇವೋ ಅದನ್ನೇ ಅನುಸರಿಸುವೆವು" ಎನ್ನುತ್ತಾರೆ. ಸರಿ, ಅವರ ಪೂರ್ವಿಕರು ತಮ್ಮ ಬುದ್ಧಿಶಕ್ತಿಯನ್ನೇನೂ ಉಪಯೋಗಿಸದೆ ಸತ್ಯಮಾರ್ಗದಿಂದ ವಂಚಿತರಾಗಿದ್ದರೆ ಆಗಲೂ ಇವರು ಅವರನ್ನನುಸರಿಸುತ್ತಲೇ ಇರುವರೇ?

وَإِذَا قِيلَ لَهُمُ اتَّبِعُوا مَآ أَنزَلَ اللَّهُ قَالُوا بَلْ نَتَّبِعُ مَآ أَلْفَيْنَا عَلَيْهِ ءَابَآءَنَآ ۗ أَوَلَوْ كَانَ ءَابَآؤُهُمْ لَا يَعْقِلُونَ شَيْـًٔا وَلَا يَهْتَدُونَ ﴿١٧٠﴾

171. ಅಲ್ಲಾಹನು ತೋರಿಸಿದ ಮಾರ್ಗದರ್ಶನದ ಪ್ರಕಾರ ನಡೆಯಲು ನಿರಾಕರಿಸಿದವರ ಉಪಮೆಯು - ಕುರುಬನು ಪ್ರಾಣಿಗಳನ್ನು ಕೂಗುವಾಗ ಅವುಗಳು ಅವನ ಕೂಗಾಟದ ನಾದದ ವಿನಾ ಬೇರೇನನ್ನೂ ಕೇಳದಂತಿದೆ. ಇವರು ಕಿವುಡರು, ಮೂಕರು, ಅಂಧರು. ಆದುದರಿಂದ ಇವರಿಗೇನೂ ತಿಳಿಯುವುದಿಲ್ಲ.

وَمَثَلُ الَّذِينَ كَفَرُوا كَمَثَلِ الَّذِى يَنْعِقُ بِمَا لَا يَسْمَعُ إِلَّا دُعَآءً وَنِدَآءً ۚ صُمٌّۢ بُكْمٌ عُمْىٌ فَهُمْ لَا يَعْقِلُونَ ﴿١٧١﴾

172. ಓ ಸತ್ಯವಿಶ್ವಾಸಿಗಳೇ, ನೀವು ನಿಜವಾಗಿಯೂ ಅಲ್ಲಾಹನ ದಾಸ್ಯ-ಆರಾಧನೆಯನ್ನೇ ಮಾಡುವವರಾದರೆ, ನಾವು ನಿಮಗೆ ಒದಗಿಸಿರುವ ಶುದ್ಧವಾದ ವಸ್ತುಗಳನ್ನು ನಿರಾತಂಕವಾಗಿ ಉಣ್ಣಿರಿ ಮತ್ತು ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಿರಿ.

يَٰٓأَيُّهَا الَّذِينَ ءَامَنُوا كُلُوا مِن طَيِّبَٰتِ مَا رَزَقْنَٰكُمْ وَاشْكُرُوا لِلَّهِ إِن كُنتُمْ إِيَّاهُ تَعْبُدُونَ ﴿١٧٢﴾

173. ಅಲ್ಲಾಹನ ಕಡೆಯಿಂದ ನಿಮ್ಮ ಮೇಲೆ ನಿಷೇಧವೇನಾದರೂ ಇದ್ದರೆ ಅದಿಷ್ಟೆ-ಶವವನ್ನು ತಿನ್ನಬೇಡಿರಿ, ನೆತ್ತರು ಮತ್ತು ಹಂದಿಯ ಮಾಂಸವನ್ನು ವರ್ಜಿಸಿರಿ ಮತ್ತು ಅಲ್ಲಾಹನ ಹೊರತು ಇತರರ ಹೆಸರು ಉಚ್ಚರಿಸಲಾದ ವಸ್ತುಗಳನ್ನು ತಿನ್ನಬೇಡಿರಿ. ಆದರೆ ವಿವಶಾವಸ್ಥೆಯಲ್ಲಿದ್ದು, ನಿಯಮೋಲ್ಲಂಘನೆಯ ಉದ್ದೇಶವಿಲ್ಲದೆಯೂ ಮಿತಿ ಮೀರದೆಯೂ ಅವುಗಳಿಂದೇನನ್ನಾದರೂ ತಿಂದುಬಿಟ್ಟರೆ ದೋಷವಿಲ್ಲ. ನಿಶ್ಚಯವಾಗಿಯೂ ಅಲ್ಲಾಹನು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.[52]

إِنَّمَا حَرَّمَ عَلَيْكُمُ الْمَيْتَةَ وَالدَّمَ وَلَحْمَ الْخِنزِيرِ وَمَآ أُهِلَّ بِهِۦ لِغَيْرِ اللَّهِ ۖ فَمَنِ اضْطُرَّ غَيْرَ بَاغٍ وَلَا عَادٍ فَلَآ إِثْمَ عَلَيْهِ ۚ إِنَّ اللَّهَ غَفُورٌ رَّحِيمٌ ﴿١٧٣﴾

52. ಈ ಸೂಕ್ತದಲ್ಲಿ ಮೂರು ಶರತ್ತುಗಳೊಂದಿಗೆ ನಿಷೇಧಿತ ವಸ್ತುಗಳನ್ನು ಉಪಯೋಗಿಸುವ ಅನುಮತಿ ನೀಡಲಾಗಿದೆ:

1) ಅವನು ನಿಜವಾಗಿಯೂ ನಿರ್ಬಂಧಿತಾವಸ್ಥೆಯಲ್ಲಿರಬೇಕು. ಉದಾಹರಣೆಗೆ ಪ್ರಾಣಕ್ಕೆ ಕಂಟಕವೆನ್ನುವಷ್ಟು ಹಸಿವೆ ಬಾಯಾರಿಕೆಯಲ್ಲಿ

إِنَّ الَّذِينَ يَكْتُمُونَ مَا أَنزَلَ اللَّهُ مِنَ
الْكِتَابِ وَيَشْتَرُونَ بِهِ ثَمَنًا قَلِيلًا ۙ أُولَٰئِكَ
مَا يَأْكُلُونَ فِي بُطُونِهِمْ إِلَّا النَّارَ وَلَا يُكَلِّمُهُمُ
اللَّهُ يَوْمَ الْقِيَامَةِ وَلَا يُزَكِّيهِمْ وَلَهُمْ عَذَابٌ أَلِيمٌ ﴿١٧٤﴾

174. ಅಲ್ಲಾಹನು ತನ್ನ ಗ್ರಂಥದಲ್ಲಿ ಅವತೀರ್ಣಗೊಳಿಸಿದ ಆದೇಶಗಳನ್ನು ಬಚ್ಚಿಟ್ಟು, ಅವುಗಳನ್ನು ಲೌಕಿಕ ಲಾಭಕ್ಕಾಗಿ ಬಲಿಕೊಡುವವರು ವಾಸ್ತವದಲ್ಲಿ ತಮ್ಮ ಹೊಟ್ಟೆಯನ್ನು ಅಗ್ನಿಯಿಂದ ತುಂಬುತ್ತಿದ್ದಾರೆ. ನಿರ್ಣಾಯಕ ದಿನದಂದು ಅಲ್ಲಾಹನು ಅವರೊಡನೆ ಮಾತನ್ನಾಡನು; ಅವರನ್ನು ಪವಿತ್ರಗೊಳಿಸನು, ಅವರಿಗೆ ವೇದನಾಪೂರ್ಣ ಶಿಕ್ಷೆ ಕಾದಿದೆ.

أُولَٰئِكَ الَّذِينَ اشْتَرَوُا الضَّلَالَةَ بِالْهُدَىٰ
وَالْعَذَابَ بِالْمَغْفِرَةِ ۚ فَمَا أَصْبَرَهُمْ عَلَى النَّارِ ﴿١٧٥﴾

175. ಸನ್ಮಾರ್ಗಕ್ಕೆ ಪ್ರತಿಯಾಗಿ ದುರ್ಮಾರ್ಗವನ್ನೂ ಕ್ಷಮೆಗೆ ಪ್ರತಿಯಾಗಿ ಯಾತನೆಯನ್ನೂ ಖರೀದಿಸಿದವರು ಇವರೇ ಆಗಿರುತ್ತಾರೆ. ನರಕ ಯಾತನೆಯನ್ನು ಸಹಿಸಲು ಸಿದ್ಧರಾಗಿರುವ ಅವರ ಸಾಹಸವು ಎಷ್ಟು ವಿಚಿತ್ರ!

ذَٰلِكَ بِأَنَّ اللَّهَ نَزَّلَ الْكِتَابَ بِالْحَقِّ ۗ وَإِنَّ
الَّذِينَ اخْتَلَفُوا فِي الْكِتَابِ لَفِي شِقَاقٍ بَعِيدٍ ﴿١٧٦﴾

176. ಅಲ್ಲಾಹನಂತು ನಿಶ್ಚಯವಾಗಿಯೂ ಸತ್ಯ ಸಹಿತ ಗ್ರಂಥವನ್ನು ಅವತರಿಸಿದನು. ಆದರೆ ಗ್ರಂಥದಲ್ಲಿ ಭಿನ್ನಾಭಿಪ್ರಾಯಗಳನ್ನುಂಟು ಮಾಡಿದವರು ತಮ್ಮ ಕಚ್ಚಾಟಗಳಲ್ಲಿ ಸತ್ಯದಿಂದ ಬಹುದೂರ ಹೋಗಿ ಬಿಟ್ಟುದರಿಂದ ಹೀಗೆಲ್ಲ ಆಯಿತು.

لَيْسَ الْبِرَّ أَنْ تُوَلُّوا وُجُوهَكُمْ قِبَلَ الْمَشْرِقِ
وَالْمَغْرِبِ وَلَٰكِنَّ الْبِرَّ مَنْ آمَنَ بِاللَّهِ وَالْيَوْمِ
الْآخِرِ وَالْمَلَائِكَةِ وَالْكِتَابِ وَالنَّبِيِّينَ وَآتَى
الْمَالَ عَلَىٰ حُبِّهِ ذَوِي الْقُرْبَىٰ وَالْيَتَامَىٰ وَ
الْمَسَاكِينَ وَابْنَ السَّبِيلِ وَالسَّائِلِينَ وَفِي
الرِّقَابِ وَأَقَامَ الصَّلَاةَ وَآتَى الزَّكَاةَ وَ
الْمُوفُونَ بِعَهْدِهِمْ إِذَا عَاهَدُوا ۖ وَالصَّابِرِينَ
فِي الْبَأْسَاءِ وَالضَّرَّاءِ وَحِينَ الْبَأْسِ ۗ أُولَٰئِكَ
الَّذِينَ صَدَقُوا ۖ وَأُولَٰئِكَ هُمُ الْمُتَّقُونَ ﴿١٧٧﴾

177. ನೀವು ನಿಮ್ಮ ಮುಖಗಳನ್ನು ಪೂರ್ವದಿಕ್ಕಿಗೆ ಅಥವಾ ಪಶ್ಚಿಮ ದಿಕ್ಕಿಗೆ ಮಾಡಿಕೊಳ್ಳುವುದು ಧರ್ಮಶೀಲತೆಯಲ್ಲ. ನಿಜವಾಗಿ ಒಬ್ಬನು ಅಲ್ಲಾಹನನ್ನೂ ನಿರ್ಣಾಯಕ ದಿನವನ್ನೂ ದೇವಚರರನ್ನೂ ಅಲ್ಲಾಹನು ಅವತೀರ್ಣಗೊಳಿಸಿದ ಗ್ರಂಥವನ್ನೂ ಅವನ ಸಂದೇಶವಾಹಕರನ್ನೂ ಹೃತ್ಪೂರ್ವಕ ಒಪ್ಪಿಕೊಳ್ಳುವುದೂ ಅಲ್ಲಾಹನ ಸಂಪ್ರೀತಿಗಾಗಿ ತನ್ನ ಮನಮೆಚ್ಚುಗೆಯ ಸಂಪತ್ತನ್ನು ಬಂಧುಗಳಿಗೂ ಅನಾಥರಿಗೂ ನಿರ್ಗತಿಕರಿಗೂ ಪ್ರಯಾಣಿಕರಿಗೂ ಸಹಾಯಾರ್ಥಿಗಳಿಗೂ ದಾಸ್ಯವಿಮೋಚನೆಗಾಗಿಯೂ ವ್ಯಯಿಸುವುದೂ ನಮಾಝುನ್ನು ಸಂಸ್ಥಾಪಿಸುವುದೂ ಝಕಾತನ್ನು (ಕಡ್ಡಾಯ ದಾನವನ್ನು) ನೀಡುವುದೂ ವಾಗ್ದಾನ ಮಾಡಿದರೆ ಪೂರೈಸುವುದೂ ಕಷ್ಟ ಕಾರ್ಪಣ್ಯಗಳಲ್ಲಿಯೂ ಸತ್ಯಾಸತ್ಯಗಳ ಸಮರವಾಗುತ್ತಿರುವಾಗಲೂ ಸಹನೆಯಿಂದಿರುವುದೂ ಧರ್ಮಶೀಲತೆಯಾಗಿರುತ್ತದೆ. ಇವರೇ ಸತ್ಯಸಂಧರು ಮತ್ತು ಇವರೇ ಧರ್ಮನಿಷ್ಠರು.

ಸಿಲುಕಿರುವುದು ಅಥವಾ ಪ್ರಾಣಕ್ಕೆ ಕುತ್ತಾಗಬಹುದಾದ ಕಾಯಿಲೆಯಲ್ಲಿ ಸಿಲುಕಿರುವುದು ಮತ್ತು ಅಂತಹ ಸಂದರ್ಭದಲ್ಲಿ ನಿಷೇಧಿತ ವಸ್ತುಗಳಲ್ಲದೆ ಬೇರೇನೂ ದೊರೆಯದಿರುವುದು.

2) ಅಲ್ಲಾಹನ ಕಾನೂನುಗಳನ್ನು ಮುರಿಯುವ ಇಚ್ಛೆ ಮನಸ್ಸಿನಲ್ಲಿಲ್ಲದಿರುವುದು.

3) ಅವಶ್ಯಕತೆಯ ಮಿತಿಯನ್ನು ಮೀರದಿರುವುದು. ಉದಾಹರಣೆಗೆ ನಿಷೇಧಿತ ವಸ್ತುವಿನ ಕೆಲವು ತುತ್ತು, ಹನಿ ಅಥವಾ ಗುಟುಕು ಪ್ರಾಣ ಉಳಿಸಲು ಪರ್ಯಾಪ್ತವಿದ್ದರೆ ಅದಕ್ಕಿಂತ ಹೆಚ್ಚು ಉಪಯೋಗಿಸದಿರುವುದು.

178. ಓ ಸತ್ಯವಿಶ್ವಾಸಿಗಳೇ, ನಿಮಗೆ ಕೊಲೆಯ ಮೊಕದ್ದಮೆಗಳಲ್ಲಿ ಪ್ರತೀಕಾರವನ್ನು ಶಾಸನಗೊಳಿಸಲಾಗಿದೆ. ಸ್ವತಂತ್ರನು ವಧಿಸಿದ್ದರೆ ಆ ಸ್ವತಂತ್ರನೊಂದಿಗೇ ಸೇಡು ತೀರಿಸಬೇಕು. ಗುಲಾಮನು ಘಾತಕನಾದರೆ ಗುಲಾಮನೇ ವಧಿಸಲ್ಪಡಬೇಕು- ಮತ್ತು ಸ್ತ್ರೀಯು ಈ ಅಪರಾಧವೆಸಗಿದರೆ ಆ ಸ್ತ್ರೀಯೊಂದಿಗೇ ಪ್ರತೀಕಾರವೆಸಗಬೇಕು. ಒಂದು ವೇಳೆ ಘಾತಕನೊಬ್ಬನೊಂದಿಗೆ ಅವನ ಸಹೋದರನು ಸೌಜನ್ಯದಿಂದ ವರ್ತಿಸಲು ಸಿದ್ಧನಾದರೆ 'ಮಅ್‌ರೂಫ್' (ಸರ್ವವಿಧಿತ) ರೀತಿಯಲ್ಲಿ ರಕ್ತಕಾಣಿಕೆಯ ತೀರ್ಮಾನವಾಗಬೇಕು ಮತ್ತು ಘಾತಕನು ನ್ಯಾಯವಾಗಿ ಪರಿಹಾರ ಧನವನ್ನು ಪಾವತಿ ಮಾಡಲು ಬದ್ಧನಾಗಿರುತ್ತಾನೆ.[53] ಇದು ನಿಮ್ಮ ಪಾಲಕ ಪ್ರಭುವಿನ ಕಡೆಯಿಂದ ಸೌಲಭ್ಯವೂ ಕರುಣೆಯೂ ಆಗಿದೆ. ಹೀಗಿದ್ದೂ ಯಾವನಾದರೂ ಹದಮೀರಿದರೆ[54] ಅವನಿಗೆ ವೇದನಾಜನಕ ಶಿಕ್ಷೆ ಇದೆ.

يَا أَيُّهَا الَّذِينَ آمَنُوا كُتِبَ عَلَيْكُمُ الْقِصَاصُ
فِي الْقَتْلَى ۖ الْحُرُّ بِالْحُرِّ وَالْعَبْدُ بِالْعَبْدِ
وَالْأُنْثَىٰ بِالْأُنْثَىٰ ۚ فَمَنْ عُفِيَ لَهُ مِنْ أَخِيهِ
شَيْءٌ فَاتِّبَاعٌ بِالْمَعْرُوفِ وَأَدَاءٌ إِلَيْهِ بِإِحْسَانٍ ۗ
ذَٰلِكَ تَخْفِيفٌ مِنْ رَبِّكُمْ وَرَحْمَةٌ ۗ فَمَنِ
اعْتَدَىٰ بَعْدَ ذَٰلِكَ فَلَهُ عَذَابٌ أَلِيمٌ ﴿١٧٨﴾

179. ಓ ಬುದ್ಧಿಜೀವಿಗಳೇ! 'ಕಿಸಾಸ್'ನಲ್ಲಿ (ಪ್ರತೀಕಾರ) ನಿಮಗೆ ಜೀವನವಿದೆ. ನೀವು ಈ ಕಾನೂನಿನ ಉಲ್ಲಂಘನೆಯಿಂದ ದೂರವಿರುವಿರೆಂದು ಆಶಿಸಲಾಗುತ್ತದೆ.

وَلَكُمْ فِي الْقِصَاصِ حَيَاةٌ يَا أُولِي الْأَلْبَابِ
لَعَلَّكُمْ تَتَّقُونَ ﴿١٧٩﴾

180. ನಿಮ್ಮಲ್ಲಾರಿಗಾದರೂ ಮರಣದ ಸಮಯ ಸನ್ನಿಹಿತವಾದರೆ ಮತ್ತು ಅವನು ಸಂಪತ್ತು ಬಿಟ್ಟು ಹೋಗುತ್ತಿದ್ದರೆ ಮಾತಾಪಿತರಿಗೂ ನೆಂಟರಿಷ್ಟರಿಗೂ ಸರ್ವವಿಧಿತ ರೀತಿಯಲ್ಲಿ ವಸಿಯ್ಯತ್ (ಉಯಿಲು) ಮಾಡುವುದು ನಿಮ್ಮ ಮೇಲೆ ಕಡ್ಡಾಯ ಗೊಳಿಸಲಾಗಿದೆ.[55] ಇದು ಧರ್ಮನಿಷ್ಠರ ಮೇಲಿನ ಬಾಧ್ಯತೆಯಾಗಿದೆ.

كُتِبَ عَلَيْكُمْ إِذَا حَضَرَ أَحَدَكُمُ الْمَوْتُ
إِنْ تَرَكَ خَيْرًا الْوَصِيَّةُ لِلْوَالِدَيْنِ وَالْأَقْرَبِينَ
بِالْمَعْرُوفِ ۖ حَقًّا عَلَى الْمُتَّقِينَ ﴿١٨٠﴾

181. ಮುಂದೆ ಯಾರಾದರೂ ವಸಿಯ್ಯತ(ಮೃತವಾಣಿ)ನ್ನು ಕೇಳಿಯೂ ಅದನ್ನು ಬದಲಾಯಿಸಿದರೆ, ಅದರ ಪಾಪವು ಬದಲಾಯಿಸಿದವರ ಮೇಲಿರುವುದು. ಅಲ್ಲಾಹನು ಎಲ್ಲವನ್ನೂ ಆಲಿಸುವವನೂ ಸರ್ವಜ್ಞನೂ ಆಗಿರುತ್ತಾನೆ.

فَمَنْ بَدَّلَهُ بَعْدَمَا سَمِعَهُ فَإِنَّمَا إِثْمُهُ
عَلَى الَّذِينَ يُبَدِّلُونَهُ ۚ إِنَّ اللَّهَ سَمِيعٌ عَلِيمٌ ﴿١٨١﴾

53. ಇಸ್ಲಾಮಿನ ದಂಡ ಸಂಹಿತೆಯಲ್ಲಿ ಕೊಲೆಯ ಪ್ರಕರಣದ ವೇಳೆ ಸಂಧಾನ ಮಾಡಿಕೊಳ್ಳಬಹುದಾಗಿದೆ. ಕೊಲೆಯಾದವನ ವಾರೀಸುದಾರರಿಗೆ ಕೊಲೆಪಾತಕಿಯನ್ನು ಕ್ಷಮಿಸುವ ಅಧಿಕಾರವಿದೆ. ಆಗ ಅವನಿಗೆ ಮರಣದಂಡನೆಯಾಗಬೇಕೆಂದು ನ್ಯಾಯಾಲಯ ಒತ್ತಾಯಿಸುವುದು ನಿಷಿದ್ಧವಾಗಿದೆ. ಆದರೆ ಕ್ಷಮೆ ನೀಡುವುದಾದರೆ ಕೊಲೆ ಪಾತಕಿಯು ಪರಿಹಾರ ಧನ ನೀಡಬೇಕಾಗುವುದು.

54. ಉದಾಹರಣೆಗೆ ಕೊಲೆಯಾದವನ ವಾರೀಸುದಾರರು ಪರಿಹಾರ ಧನವನ್ನು ಪಡೆದ ಬಳಿಕ ಪ್ರತೀಕಾರ ತೀರಿಸಲು ಪ್ರಯತ್ನಿಸುವುದು ಅಥವಾ ಪರಿಹಾರ ನೀಡಲು ಹಿಂದೇಟು ಹಾಕುವ ಮೂಲಕ ಕೊಲೆಯಾದವನ ವಾರೀಸುದಾರರು ಮಾಡಿದ ಉಪಕಾರಕ್ಕೆ ಕೃತಘ್ನತೆ ತೋರುವುದು.

55. ಪಿತ್ರಾರ್ಜಿತ ಸೊತ್ತಿನ ವಿತರಣೆಗೆ ಯಾವುದೇ ನಿರ್ದಿಷ್ಟ ಆದೇಶಗಳು ಇಲ್ಲದಿದ್ದ ಕಾಲದಲ್ಲಿ ಈ ಆದೇಶ ಕೊಡಲಾಗಿತ್ತು. ಆ ಮೂಲಕ ತನ್ನ ವಾರೀಸುದಾರರ ಪಾಲನ್ನು ಉಯಿಲಿನ ಮೂಲಕ ಗೊತ್ತುಪಡಿಸುವಂತೆ ಪ್ರತಿಯೊಬ್ಬರಿಗೂ ಕಡ್ಡಾಯಗೊಳಿಸಲಾಯಿತು. ಅವನ

182. ಆದರೆ ಉಯಿಲು ಮಾಡಿದವನು ಅರಿತೋ ಅರಿಯದೆಯೋ ಹಕ್ಕುಚ್ಯುತಿ ಮಾಡಿರುವನೆಂಬ ಆಶಂಕೆಯಿದ್ದು ಸಂಬಂಧ ಪಟ್ಟವರೊಂದಿಗೆ ಅದನ್ನು ಸರಿಪಡಿಸಿಕೊಂಡರೆ ಅವನ ಮೇಲೆ ಯಾವ ಪಾಪವೂ ಇಲ್ಲ. ನಿಶ್ಚಯವಾಗಿಯೂ ಅಲ್ಲಾಹನು ಕ್ಷಮಿಸುವವನೂ ಕರುಣಾನಿಧಿಯೂ ಆಗಿರುತ್ತಾನೆ.

فَمَنْ خَافَ مِن مُّوصٍ جَنَفًا أَوْ إِثْمًا فَأَصْلَحَ بَيْنَهُمْ فَلَا إِثْمَ عَلَيْهِ ۚ إِنَّ اللَّهَ غَفُورٌ رَّحِيمٌ ﴿١٨٢﴾

183. ಓ ಸತ್ಯವಿಶ್ವಾಸಿಗಳೇ, ಗತ ಪ್ರವಾದಿಗಳ ಅನುಯಾಯಿಗಳಿಗೆ ಕಡ್ಡಾಯಗೊಳಿಸಿದ್ದಂತೆಯೇ ನಿಮ್ಮ ಮೇಲೂ ಉಪವಾಸ ವ್ರತವನ್ನು ಕಡ್ಡಾಯಗೊಳಿಸಲಾಗಿದೆ. ಇದರಿಂದ ನಿಮ್ಮಲ್ಲಿ ಧರ್ಮನಿಷ್ಠೆಯ ಗುಣವಿಶೇಷವುಂಟಾಗುವುದೆಂದು ಆಶಿಸಲಾಗಿದೆ.

يَا أَيُّهَا الَّذِينَ آمَنُوا كُتِبَ عَلَيْكُمُ الصِّيَامُ كَمَا كُتِبَ عَلَى الَّذِينَ مِن قَبْلِكُمْ لَعَلَّكُمْ تَتَّقُونَ ﴿١٨٣﴾

184. ಎಣಿಕೆಯ ಕೆಲವೇ ದಿನಗಳ ಉಪವಾಸ ವ್ರತವದು. ನೀವೆಲ್ಲಾದರೂ ರೋಗಿಯಾಗಿದ್ದರೆ ಅಥವಾ ಪ್ರಯಾಣದಲ್ಲಿದ್ದರೆ ಇತರ ದಿನಗಳಲ್ಲಿ ಅಷ್ಟೇ ಸಂಖ್ಯೆಯನ್ನು ಪೂರ್ತಿಗೊಳಿಸಿ ಕೊಳ್ಳಬೇಕು. ಉಪವಾಸವಿರಲು ಶಕ್ತರಾದವರು (ಉಪವಾಸವಿರದಿದ್ದರೆ) ಪ್ರಾಯಶ್ಚಿತ್ತವನ್ನು ಕೊಡಬೇಕು. ಒಂದು ದಿನದ ಉಪವಾಸದ ಪ್ರಾಯಶ್ಚಿತ್ತವು ಓರ್ವ ಬಡವನಿಗೆ ಆಹಾರ ನೀಡುವುದಾಗಿದೆ ಮತ್ತು ತನ್ನ ಇಚ್ಛೆಯಿಂದ ಇನ್ನಷ್ಟು ಸತ್ಕಾರ್ಯ ಮಾಡಿದರೆ ಇದು ಅವನಿಗೆ ಇನ್ನೂ ಉತ್ತಮ. ಆದರೆ ನೀವು ಅರಿಯುವವರಾಗಿದ್ದರೆ ಉಪವಾಸವಿರುವುದೇ ನಿಮಗೆ ಅತ್ಯುತ್ತಮ.[56]

أَيَّامًا مَّعْدُودَاتٍ ۚ فَمَن كَانَ مِنكُم مَّرِيضًا أَوْ عَلَىٰ سَفَرٍ فَعِدَّةٌ مِّنْ أَيَّامٍ أُخَرَ ۚ وَعَلَى الَّذِينَ يُطِيقُونَهُ فِدْيَةٌ طَعَامُ مِسْكِينٍ ۖ فَمَن تَطَوَّعَ خَيْرًا فَهُوَ خَيْرٌ لَّهُ ۚ وَأَن تَصُومُوا خَيْرٌ لَّكُمْ ۖ إِن كُنتُمْ تَعْلَمُونَ ﴿١٨٤﴾

185. ಮಾನವರಿಗೆ ಸಾದ್ಯಂತ ಸನ್ಮಾರ್ಗ, ಮಾರ್ಗದರ್ಶಕ ಮತ್ತು ಸತ್ಯಾಸತ್ಯಗಳಲ್ಲಿರುವ ಅಂತರವನ್ನು ಸುವ್ಯಕ್ತವಾಗಿ ತಿಳಿಸುವ ಶಿಕ್ಷಣಗಳನ್ನೊಳಗೊಂಡಿರುವ 'ಕುರ್‌ಆನ್' ಅವತೀರ್ಣಗೊಂಡ ತಿಂಗಳು 'ರಮಝಾನ್' ಆಗಿರುತ್ತದೆ. ಆದುದರಿಂದ

شَهْرُ رَمَضَانَ الَّذِي أُنزِلَ فِيهِ الْقُرْآنُ هُدًى لِّلنَّاسِ وَبَيِّنَاتٍ مِّنَ الْهُدَىٰ وَالْفُرْقَانِ ۚ فَمَن شَهِدَ مِنكُمُ الشَّهْرَ

ಮರಣಾನಂತರ ಸಂಭವಿಸಬಹುದಾದ ಕುಟುಂಬ ಕಲಹ ಅಥವಾ ಯಾವುದೇ ಹಕ್ಕುದಾರನ ಹಕ್ಕುಚ್ಯುತಿಯನ್ನು ತಪ್ಪಿಸುವುದು ಇದರ ಉದ್ದೇಶ. ಅನಂತರ ಅಲ್ಲಾಹನು ವಾರೀಸು ಸೊತ್ತಿನ ವಿತರಣೆಗೆ ತನ್ನ ನಿಯಮಗಳನ್ನು ಗೊತ್ತುಪಡಿಸಿದನು. (ಅದು ಮುಂದೆ ಅನ್ನಿಸಾ ಅಧ್ಯಾಯದಲ್ಲಿ ಬರಲಿದೆ) ಅನಂತರ ಅಲ್ಲಾಹನು ಗೊತ್ತುಪಡಿಸಿದ ವಾರೀಸುದಾರರ ಪಾಲಿನಲ್ಲಿ ಉಯಿಲಿನ ಮೂಲಕ ಯಾವುದೇ ಬದಲಾವಣೆ ಮಾಡುವಂತಿಲ್ಲ. ವಾರೀಸುದಾರನಲ್ಲದವನ ಪರವಾಗಿ ಒಟ್ಟು ಆಸ್ತಿಯ ಮೂರನೇ ಒಂದಂಶಕ್ಕಿಂತ ಹೆಚ್ಚು ಉಯಿಲು ಬರೆಯುವಂತಿಲ್ಲ. ಹಾಗೆಯೇ ಸತ್ಯವಿಶ್ವಾಸಿ ಮತ್ತು ಸತ್ಯನಿಷೇಧಿಗಳು ಪರಸ್ಪರ ಆಸ್ತಿಯ ಹಕ್ಕುದಾರರಾಗುವುದಿಲ್ಲ ಎಂಬ ವಿಧಿಯನ್ನು ಪ್ರವಾದಿವರ್ಯರು(ಸ) ಗೊತ್ತುಪಡಿಸಿದರು.

56. ಇಸ್ಲಾಮಿನ ಬಹುತೇಕ ಆದೇಶಗಳಂತೆ ಕಡ್ಡಾಯ ಉಪವಾಸವನ್ನೂ ಹಂತಹಂತವಾಗಿ ಜಾರಿಗೊಳಿಸಲಾಯಿತು. ಪ್ರವಾದಿವರ್ಯರು(ಸ), ಮೊದಲು ಮುಸ್ಲಿಮರಿಗೆ ತಿಂಗಳಿಗೆ ಮೂರು ದಿನ ಉಪವಾಸ ಆಚರಿಸುವಂತೆ ಆದೇಶಿಸಿದರು. ಆದರೆ ಅವು ಕಡ್ಡಾಯವಾಗಿರಲಿಲ್ಲ. ಅನಂತರ ಹಿ. ಶ. 2ರಲ್ಲಿ ರಮಝಾನ್ ತಿಂಗಳಲ್ಲಿ ಉಪವಾಸ ಆಚರಿಸುವ ಆದೇಶ ಅವತೀರ್ಣಗೊಂಡಿತು. ಆದರೆ ಅದರಲ್ಲಿ ಉಪವಾಸ ಆಚರಿಸುವ ಶಕ್ತಿಯಿದ್ದೂ ಉಪವಾಸ ಆಚರಿಸದವರು ಪ್ರತಿಯೊಂದು ಉಪವಾಸದ ಬದಲು ಒಬ್ಬ ಬಡವನಿಗೆ ಉಣಬಡಿಸಬೇಕು ಎಂಬ ರಿಯಾಯಿತಿಯನ್ನಿರಿಸಲಾಯಿತು. ಅನಂತರವಷ್ಟೇ ಮುಂದೆ ಬರಲಿರುವ ಎರಡನೇ ಆದೇಶ ನೀಡಲಾಯಿತು.

ಯಾವನಾದರೂ ಈ ತಿಂಗಳನ್ನು ಹೊಂದಿದಾಗ ಅವನು ಆ ಸಂಪೂರ್ಣ ತಿಂಗಳ ಉಪವಾಸ ವ್ರತವನ್ನಾಚರಿಸಬೇಕು. ಯಾವನಾದರೂ ರೋಗಿಯಾಗಿದ್ದರೆ ಅಥವಾ ಪ್ರಯಾಣಿಕನಾಗಿದ್ದರೆ ಆತನು ಇತರ ದಿನಗಳಲ್ಲಿ ಉಪವಾಸ ದಿನಗಳ ಸಂಖ್ಯೆಯನ್ನು ಪೂರ್ತಿಗೊಳಿಸಬೇಕು. ಅಲ್ಲಾಹನು ನಿಮಗೆ ಸೌಲಭ್ಯವನ್ನೀಯಲು ಬಯಸುತ್ತಾನೆ; ನಿಮ್ಮನ್ನು ಕಷ್ಟಕ್ಕೀಡು ಮಾಡಲು ಇಚ್ಛಿಸುವುದಿಲ್ಲ. ನೀವು ಉಪವಾಸದ ಸಂಖ್ಯೆಯನ್ನು ಪೂರ್ತಿಗೊಳಿಸಲು ಅನುಕೂಲವಾಗುವಂತೆಯೂ, ಸನ್ಮಾರ್ಗದರ್ಶನದ ಮೂಲಕ ನಿಮ್ಮನ್ನು ಪ್ರತಿಷ್ಠಿತಗೊಳಿಸಿದ ಅಲ್ಲಾಹನ ಮಹಿಮೆಯನ್ನು ಕೊಂಡಾಡುತ್ತಾ ಅವನಿಗೆ ಕೃತಜ್ಞರಾಗಿರಲಿಕ್ಕಾಗಿಯೂ ಈ ವಿಧಾನವನ್ನು ತೋರಿಸಿ ಕೊಡಲಾಗಿದೆ.

فَلْيَصُمْهُ ۖ وَمَن كَانَ مَرِيضًا أَوْ عَلَىٰ سَفَرٍ
فَعِدَّةٌ مِّنْ أَيَّامٍ أُخَرَ ۗ يُرِيدُ اللَّهُ بِكُمُ
الْيُسْرَ وَلَا يُرِيدُ بِكُمُ الْعُسْرَ وَلِتُكْمِلُوا
الْعِدَّةَ وَلِتُكَبِّرُوا اللَّهَ عَلَىٰ مَا هَدَاكُمْ
وَلَعَلَّكُمْ تَشْكُرُونَ ﴿١٨٥﴾

186. ಓ ಪೈಗಂಬರರೇ, ನನ್ನ ದಾಸರು ನಿಮ್ಮೊಡನೆ ನನ್ನ ಬಗ್ಗೆ ಕೇಳಿದರೆ, ನಾನು ಅವರಿಗೆ ನಿಕಟನಾಗಿದ್ದೇನೆಂದೂ, ಪ್ರಾರ್ಥಿಸುವವನು ನನ್ನನ್ನು ಪ್ರಾರ್ಥಿಸಿದಾಗ ಅವನ ಪ್ರಾರ್ಥನೆಯನ್ನು ಆಲಿಸುತ್ತೇನೆಂದೂ ಅದಕ್ಕೆ ಉತ್ತರಿಸುತ್ತೇನೆಂದೂ ಅವರಿಗೆ ಹೇಳಿರಿ. ಆದುದರಿಂದ ಅವರು ನನ್ನ ಕರೆಗೆ ಓಗೊಡಲಿ ಮತ್ತು ನನ್ನ ಮೇಲೆ ವಿಶ್ವಾಸವಿರಿಸಲಿ. (ಇದನ್ನು ಅವರಿಗೆ ತಿಳಿಸಿಬಿಡಿರಿ) ಅವರು ಸನ್ಮಾರ್ಗ ಪಡೆಯಲೂಬಹುದು.

وَإِذَا سَأَلَكَ عِبَادِي عَنِّي فَإِنِّي قَرِيبٌ ۖ أُجِيبُ
دَعْوَةَ الدَّاعِ إِذَا دَعَانِ ۖ فَلْيَسْتَجِيبُوا لِي
وَلْيُؤْمِنُوا بِي لَعَلَّهُمْ يَرْشُدُونَ ﴿١٨٦﴾

187. ಉಪವಾಸ ವ್ರತದಂದು ರಾತ್ರಿಕಾಲದಲ್ಲಿ ನೀವು ನಿಮ್ಮ ಪತ್ನಿಯರೊಂದಿಗೆ ಸಂಪರ್ಕ ಇಟ್ಟುಕೊಳ್ಳುವುದನ್ನು 'ಧರ್ಮಸಮ್ಮತ'ಗೊಳಿಸಲಾಗಿರುತ್ತದೆ. ಅವರು ನಿಮಗೆ ಉಡುಪಾಗಿರುವರು ಮತ್ತು ನೀವು ಅವರಿಗೆ ಉಡುಪಾಗಿರುವಿರಿ. ನೀವು ರಹಸ್ಯವಾಗಿ ಆತ್ಮವಂಚನೆ ಮಾಡುತ್ತಿದ್ದುದು ಅಲ್ಲಾಹನಿಗೆ ತಿಳಿಯಿತು. ಆದರೆ, ಅಲ್ಲಾಹನು ನಿಮ್ಮ ಪಶ್ಚಾತ್ತಾಪವನ್ನು ಸ್ವೀಕರಿಸಿ ನಿಮ್ಮನ್ನು ಕ್ಷಮಿಸಿರುತ್ತಾನೆ. ಇನ್ನು ನೀವು ಅವರೊಂದಿಗೆ ರಮಿಸಿರಿ ಮತ್ತು ಅಲ್ಲಾಹನು ನಿಮಗೆ ನಿಯತಗೊಳಿಸಿದ ಸವಿಯನ್ನನುಭವಿಸಿಕೊಳ್ಳಿರಿ ಮತ್ತು ಇರುಳಿನ ಕರಿರೇಖೆಯಿಂದ ಉಷಾಕಾಲದ ಬಿಳಿರೇಖೆಯು ನಿಮಗೆ ಬೇರ್ಪಟ್ಟು ತೋರುವವರೆಗಿನ ನಿಶಾವಧಿಯಲ್ಲಿ ತಿನ್ನಿರಿ ಮತ್ತು ಕುಡಿಯಿರಿ. ಅನಂತರ ಈ ಕಾರ್ಯಗಳನ್ನೆಲ್ಲಾ ಬಿಟ್ಟು, ರಾತ್ರಿಯವರೆಗೆ ನಿಮ್ಮ ಉಪವಾಸ ವ್ರತವನ್ನು ಪೂರ್ತಿಗೊಳಿಸಿರಿ. ನೀವು ಮಸೀದಿಗಳಲ್ಲಿ 'ಇಅ್‌ತಿಕಾಫ್'ಗೆ (ಧ್ಯಾನಾಸಕ್ತರಾಗಿ) ಕುಳಿತಿರುವಾಗ ಸ್ತ್ರೀ ಸಂಭೋಗ ಮಾಡಬೇಡಿರಿ. ಇವು ಅಲ್ಲಾಹನು

أُحِلَّ لَكُمْ لَيْلَةَ الصِّيَامِ الرَّفَثُ إِلَىٰ نِسَائِكُمْ ۚ
هُنَّ لِبَاسٌ لَّكُمْ وَأَنتُمْ لِبَاسٌ لَّهُنَّ ۗ عَلِمَ
اللَّهُ أَنَّكُمْ كُنتُمْ تَخْتَانُونَ أَنفُسَكُمْ فَتَابَ
عَلَيْكُمْ وَعَفَا عَنكُمْ ۖ فَالْآنَ بَاشِرُوهُنَّ
وَابْتَغُوا مَا كَتَبَ اللَّهُ لَكُمْ ۚ وَكُلُوا وَاشْرَبُوا
حَتَّىٰ يَتَبَيَّنَ لَكُمُ الْخَيْطُ الْأَبْيَضُ مِنَ الْخَيْطِ
الْأَسْوَدِ مِنَ الْفَجْرِ ۖ ثُمَّ أَتِمُّوا الصِّيَامَ إِلَى
اللَّيْلِ ۚ وَلَا تُبَاشِرُوهُنَّ وَأَنتُمْ عَاكِفُونَ
فِي الْمَسَاجِدِ ۗ تِلْكَ حُدُودُ اللَّهِ فَلَا تَقْرَبُوهَا ۗ
كَذَٰلِكَ يُبَيِّنُ اللَّهُ آيَاتِهِ لِلنَّاسِ لَعَلَّهُمْ يَتَّقُونَ ﴿١٨٧﴾

ನಿರ್ಣಯಿಸಿದ ಮೇರೆಗಳು. ಇವುಗಳನ್ನು ಸಮೀಪಿಸಬಾರದು. ಹೀಗೆ ಜನರು ಅಪರಾಧಗಳಿಂದ ಪಾರಾಗುವರೆಂದು ನಿರೀಕ್ಷಿಸಿ, ಅಲ್ಲಾಹನು ತನ್ನ ಆದೇಶಗಳನ್ನು ಸುಸ್ಪಷ್ಟವಾಗಿ ವಿವರಿಸುತ್ತಾನೆ.

188. ನೀವು ನಿಮ್ಮ ಸಂಪತ್ತನ್ನು ಪರಸ್ಪರ ಅನುಚಿತ ರೀತಿಯಿಂದ ಕಬಳಿಸಬಾರದು ಮತ್ತು ನಿಮಗೆ ಇತರರ ಸಂಪತ್ತಿನ ಒಂದಂಶವನ್ನು ಉದ್ದೇಶಪೂರ್ವಕವಾಗಿ ಅಕ್ರಮ ರೂಪದಿಂದ ಕಬಳಿಸುವ ಸಂದರ್ಭ ಸಿಗುವಂತೆ ಅವುಗಳನ್ನು ಅಧಿಕಾರಿಗಳ ಮುಂದೆ ಸಮರ್ಪಿಸಬಾರದು.[57]

وَلَا تَأْكُلُوٓا۟ أَمْوَٰلَكُم بَيْنَكُم بِٱلْبَٰطِلِ وَتُدْلُوا۟ بِهَآ إِلَى ٱلْحُكَّامِ لِتَأْكُلُوا۟ فَرِيقًا مِّنْ أَمْوَٰلِ ٱلنَّاسِ بِٱلْإِثْمِ وَأَنتُمْ تَعْلَمُونَ ﴿١٨٨﴾ ع

189. (ಓ ಪೈಗಂಬರರೇ,) ಜನರು ನಿಮ್ಮೊಡನೆ ಚಂದ್ರನ ವೃದ್ಧಿ-ಕ್ಷಯಗಳ ಬಗ್ಗೆ ಪ್ರಶ್ನಿಸುತ್ತಾರೆ. ಅವು ಜನರಿಗೆ ಕಾಲ ನಿರ್ಣಯದ ಹಾಗೂ 'ಹಜ್ಜ್'ನ(ಯಾತ್ರೆಯ) ಸಂಕೇತಗಳಾಗಿವೆಯೆನ್ನಿರಿ. ನೀವು ಹಿಂಭಾಗದಿಂದ ನಿಮ್ಮ ಮನೆಗಳೊಳಗೆ ಪ್ರವೇಶಿಸುತ್ತಿರುವುದು ಪುಣ್ಯ ಕಾರ್ಯವೇನೂ ಅಲ್ಲವೆಂದೂ ಅಲ್ಲಾಹನ ಅಪ್ರಸನ್ನತೆಯಿಂದ ದೂರವಿರುವುದೇ ನಿಜವಾದ ಪುಣ್ಯಕಾರ್ಯವೆಂದೂ ಆ ಪ್ರಯುಕ್ತ ನೀವು ಬಾಗಿಲುಗಳಿಂದಲೇ ನಿಮ್ಮ ಮನೆಗಳೊಳಗೆ ಪ್ರವೇಶಿಸಿರೆಂದೂ ನಿಮಗೆ ವಿಜಯಪ್ರಾಪ್ತಿಯಾಗುವಂತಾಗಲು ಅಲ್ಲಾಹನ ಭಯವಿರಿಸಿಕೊಳ್ಳಿರೆಂದೂ ಅವರೊಡನೆ ಹೇಳಿರಿ.[58]

يَسْـَٔلُونَكَ عَنِ ٱلْأَهِلَّةِ ۖ قُلْ هِىَ مَوَٰقِيتُ لِلنَّاسِ وَٱلْحَجِّ ۗ وَلَيْسَ ٱلْبِرُّ بِأَن تَأْتُوا۟ ٱلْبُيُوتَ مِن ظُهُورِهَا وَلَٰكِنَّ ٱلْبِرَّ مَنِ ٱتَّقَىٰ ۗ وَأْتُوا۟ ٱلْبُيُوتَ مِنْ أَبْوَٰبِهَا ۚ وَٱتَّقُوا۟ ٱللَّهَ لَعَلَّكُمْ تُفْلِحُونَ ﴿١٨٩﴾

190. ನಿಮ್ಮೊಡನೆ ಯುದ್ಧ ಮಾಡುವವರೊಂದಿಗೆ ನೀವೂ ಅಲ್ಲಾಹನ ಮಾರ್ಗದಲ್ಲಿ ಯುದ್ಧ ಮಾಡಿರಿ. ಆದರೆ ಅತಿಕ್ರಮಿಸಬೇಡಿರಿ. ಅಲ್ಲಾಹನು ಅತಿಕ್ರಮಿಸುವವರನ್ನು ಮೆಚ್ಚುವುದಿಲ್ಲ.

وَقَٰتِلُوا۟ فِى سَبِيلِ ٱللَّهِ ٱلَّذِينَ يُقَٰتِلُونَكُمْ وَلَا تَعْتَدُوٓا۟ ۚ إِنَّ ٱللَّهَ لَا يُحِبُّ ٱلْمُعْتَدِينَ ﴿١٩٠﴾

191. ಅವರೊಡನೆ ಹೋರಾಟ ನಡೆಸಬೇಕಾದ ಸಂದರ್ಭ ಬಂದಾಗಲೆಲ್ಲ

وَٱقْتُلُوهُمْ حَيْثُ ثَقِفْتُمُوهُمْ وَأَخْرِجُوهُم

57. ಅಧಿಕಾರಿಗಳಿಗೆ ಲಂಚಕೊಟ್ಟು ಅವರಿಂದ ಅನುಚಿತ ರೀತಿಯಲ್ಲಿ ಪ್ರಯೋಜನ ಪಡೆಯಲು ಪ್ರಯತ್ನಿಸದಿರಿ- ಎಂಬುದು ಇದರ ಒಂದು ಅರ್ಥ. ಅದರ ಇನ್ನೊಂದು ವಾಖ್ಯೆ ಏನೆಂದರೆ, ಈ ಸಂಪತ್ತು ಅನ್ಯರಿಗೆ ಸೇರಿದ್ದು ಎಂದು ನಿಮಗೆ ಚೆನ್ನಾಗಿ ತಿಳಿದಿರುವಾಗ, ಅವನ ಬಳಿ ತನ್ನ ಸೊತ್ತಿನ ಬಗ್ಗೆ ಯಾವುದೇ ಆಧಾರವಿಲ್ಲ ಅಥವಾ ಹೇಗಾದರೂ ಮಾಡಿ ಅದನ್ನು ಕಬಳಿಸಲು ನಿಮಗೆ ಸಾಧ್ಯವಿದೆ ಎಂಬ ಕಾರಣಕ್ಕಾಗಿ ಅದರ ಮೊಕದ್ದಮೆಯನ್ನು ನ್ಯಾಯಾಲಯಕ್ಕೆ ಕೊಂಡೊಯ್ಯದಿರಿ. ನ್ಯಾಯಾಧೀಶರು ಮೊಕದ್ದಮೆಯ ವಿವರಗಳನ್ನು ನೋಡಿ ಸಂಪತ್ತನ್ನು ನಿಮಗೆ ಒದಗಿಸಲೂ ಬಹುದು. ಆದರೆ ಅದೆಂದೂ ನಿಮ್ಮ ನ್ಯಾಯಸಮ್ಮತ ಸೊತ್ತಾಗದು.

58. ಅರೇಬಿಯಾದಲ್ಲಿ ಪ್ರಚಲಿತವಿದ್ದ ಮೂಢನಂಬಿಕೆಗಳಲ್ಲಿ ಇದೂ ಒಂದು. ಹಜ್ಜ್‌ಗಾಗಿ ಇಹ್ರಾಮ್ ಕಟ್ಟಿದ ನಂತರ ಅವರು ಬಾಗಿಲ ಮೂಲಕ ಮನೆಗೆ ಪ್ರವೇಶಿಸುತ್ತಿರಲಿಲ್ಲ. ಬದಲಾಗಿ ಹಿಂದಿನ ಗೋಡೆಯಿಂದ ನೆಗೆದು ಅಥವಾ ಗೋಡೆಯಲ್ಲಿ ಕನ್ನ ಕೊರೆದು ಪ್ರವೇಶಿಸುತ್ತಿದ್ದರು. ಪ್ರವಾಸದಿಂದ ಮರಳಿದ ನಂತರವೂ ಹಿಂದಿನಿಂದಲೇ ಮನೆಗೆ ಪ್ರವೇಶಿಸುತ್ತಿದ್ದರು. ಈ ಸೂಕ್ತದಲ್ಲಿ ಪ್ರಸ್ತುತ ಮೂಢನಂಬಿಕೆಯನ್ನು ರದ್ದುಪಡಿಸಿರುವುದರ ಜತೆಗೆ ಒಳಿತು ಅಂತಹ ಪದ್ಧತಿಗಳಲ್ಲಿಲ್ಲ, ನಿಜವಾಗಿ ಒಳಿತು ಅಲ್ಲಾಹನನ್ನು ಭಯಪಡುವುದು ಮತ್ತು ಅವನ ಆಜ್ಞೋಲ್ಲಂಘನೆಯಿಂದ ದೂರವಿರುವುದಾಗಿದೆ ಎನ್ನುವ ಮೂಲಕ ಎಲ್ಲ ಮೂಢನಂಬಿಕೆಗಳ ಮೇಲೆ ಪ್ರಹಾರ ನಡೆಸಲಾಗಿದೆ.

ಹೋರಾಟ ನಡೆಸಿರಿ ಮತ್ತು ಅವರು ನಿಮ್ಮನ್ನು ಹೊರಕ್ಕಟ್ಟಿದಲ್ಲಿಂದ ನೀವೂ ಅವರನ್ನು ಹೊರಕ್ಕಟ್ಟಿರಿ. ಏಕೆಂದರೆ ಹತ್ಯೆಯು ಕೆಟ್ಟದ್ದಾಗಿದ್ದರೂ ಕ್ಷೋಭೆಯು (ಫಿತ್ನಃ) ಅದಕ್ಕಿಂತಲೂ ಕೆಟ್ಟದಾಗಿದೆ.[59] ಅವರು 'ಮಸ್ಜಿದುಲ್ ಹರಾಮ್'ನ ಬಳಿ ನಿಮ್ಮೊಡನೆ ಹೋರಾಡದಿದ್ದರೆ ನೀವೂ ಹೋರಾಡಬೇಡಿರಿ. ಆದರೆ ಅಲ್ಲಿಯೂ ಅವರು ನಿಮ್ಮೊಡನೆ ಹೋರಾಡಿದರೆ, ನೀವೂ ಅವರನ್ನು ನಿರ್ದಾಕ್ಷಿಣ್ಯವಾಗಿ ವಧಿಸಿರಿ. ಇಂತಹ ಸತ್ಯನಿಷೇಧಿಗಳಿಗೆ ಇದೇ ಪ್ರತಿಫಲ.

مِّنْ حَيْثُ اَخْرَجُوْكُمْ وَالْفِتْنَةُ اَشَدُّ مِنَ
الْقَتْلِ ۚ وَلَا تُقٰتِلُوْهُمْ عِنْدَ الْمَسْجِدِ الْحَرَامِ
حَتّٰى يُقٰتِلُوْكُمْ فِيْهِ ۚ فَاِنْ قٰتَلُوْكُمْ فَاقْتُلُوْهُمْ ؕ
كَذٰلِكَ جَزَآءُ الْكٰفِرِيْنَ ﴿۱۹۱﴾

192. ಅನಂತರ ಅವರು ಹಿಂಜರಿದರೆ ನಿಶ್ಚಯವಾಗಿಯೂ ಅಲ್ಲಾಹನು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆಂಬುದನ್ನು ನೀವು ಅರಿತಿರಬೇಕು.

فَاِنِ انْتَهَوْا فَاِنَّ اللّٰهَ غَفُوْرٌ رَّحِيْمٌ ﴿۱۹۲﴾

193. ಕ್ಷೋಭೆಯು ಸಂಪೂರ್ಣ ಅಳಿದು, ಹೋಗುವವರೆಗೂ ಧರ್ಮವು ಪರಿಪೂರ್ಣವಾಗಿ ಅಲ್ಲಾಹನಿಗೇ ಆಗುವವರೆಗೂ ನೀವು ಅವರ ವಿರುದ್ಧ ಹೋರಾಡಿರಿ. ಅನಂತರ ಅವರು ಹಿಮ್ಮೆಟ್ಟಿದರೆ ಅಕ್ರಮಿಗಳ ವಿನಾ ಇನ್ನಾರ ಮೇಲೂ ಕೈಯೆತ್ತಬಾರದೆಂಬುದನ್ನು ನೀವು ತಿಳಿದಿರಬೇಕು.

وَقٰتِلُوْهُمْ حَتّٰى لَا تَكُوْنَ فِتْنَةٌ وَّيَكُوْنَ
الدِّيْنُ لِلّٰهِ ؕ فَاِنِ انْتَهَوْا فَلَا عُدْوَانَ اِلَّا
عَلَى الظّٰلِمِيْنَ ﴿۱۹۳﴾

194. ಸನ್ಮಾನಿತ ತಿಂಗಳ ಪರ್ಯಾಯ ಸನ್ಮಾನಿತ ತಿಂಗಳೇ ಆಗಿರುತ್ತದೆ. ಎಲ್ಲಾ ಸನ್ಮಾನಿತಗಳನ್ನು ಸರಿಸಮಾನವಾಗಿಯೇ ಗೌರವಿಸಲಾಗುವುದು.[60] ಆದುದರಿಂದ ನಿಮ್ಮ ಮೇಲೆ ಕೈ ಮಾಡಿದವರ ಮೇಲೆ ನೀವೂ ಅದೇ ರೀತಿಯಲ್ಲಿ ಕೈ ಮಾಡಿರಿ. ಆದರೆ ಅಲ್ಲಾಹನ ಭಯವಿರಿಸಿಕೊಳ್ಳಿರಿ. ಅಲ್ಲಾಹನು ಸೀಮೋಲ್ಲಂಘನೆಯನ್ನು ಮಾಡದವರೊಂದಿಗೆ ಮಾತ್ರವಿರುತ್ತಾನೆಂಬುದನ್ನು ನೀವು ತಿಳಿದಿರಬೇಕು.

اَلشَّهْرُ الْحَرَامُ بِالشَّهْرِ الْحَرَامِ وَالْحُرُمٰتُ
قِصَاصٌ ؕ فَمَنِ اعْتَدٰى عَلَيْكُمْ فَاعْتَدُوْا
عَلَيْهِ بِمِثْلِ مَا اعْتَدٰى عَلَيْكُمْ ۪ وَاتَّقُوا
اللّٰهَ وَاعْلَمُوْٓا اَنَّ اللّٰهَ مَعَ الْمُتَّقِيْنَ ﴿۱۹۴﴾

195. ಅಲ್ಲಾಹನ ಮಾರ್ಗದಲ್ಲಿ ವೆಚ್ಚ ಮಾಡಿರಿ ಮತ್ತು ನಿಮ್ಮನ್ನು

وَاَنْفِقُوْا فِىْ سَبِيْلِ اللّٰهِ وَلَا تُلْقُوْا بِاَيْدِيْكُمْ

59. ಇಲ್ಲಿ 'ಫಿತ್ನ' (ಕ್ಷೋಭೆ) ಎಂದರೆ ಒಂದು ಪಂಗಡ ಅಥವಾ ಒಬ್ಬ ವ್ಯಕ್ತಿ ಅಸತ್ಯದ ಬದಲು ಸತ್ಯವನ್ನು ಅಂಗೀಕರಿಸಿದ ಕಾರಣಕ್ಕಾಗಿ ಮಾತ್ರ ಅವರನ್ನು ಹಿಂಸೆ ಮತ್ತು ದಬ್ಬಾಳಿಕೆಗೆ ಗುರಿಪಡಿಸುವುದಾಗಿದೆ.

60. ಅರಬರಲ್ಲಿ ಪ್ರವಾದಿ ಹ. ಇಬ್‌ರಾಹೀಮ್‌ರ(ಅ) ಕಾಲದಿಂದಲೂ ದುಲ್‌ಕಅದಃ, ದುಲ್‌ಹಜ್ಜ್ ಮತ್ತು ಮುಹರ್ರಮ್ ತಿಂಗಳನ್ನು ಹಜ್ಜ್‌ಗಾಗಿಯೂ ರಜಬ್ ತಿಂಗಳನ್ನು ಉಮ್ರಾಕ್ಕಾಗಿಯೂ ಮೀಸಲಿಡುವ ಪದ್ಧತಿ ಇತ್ತು. ಈ ನಾಲ್ಕು ತಿಂಗಳಲ್ಲಿ ಯುದ್ಧ ಮತ್ತು ಕೊಲೆ-ಸುಲಿಗೆಗಳು ನಿಷಿದ್ಧವಾಗಿದ್ದುವು. ಕಅಬಾ ಯಾತ್ರಾರ್ಥಿಗಳು ನೆಮ್ಮದಿಯಿಂದ ಅಲ್ಲಾಹನ ಭವನದ ಯಾತ್ರೆ ಕೈಗೊಂಡು ತಮ್ಮ ಮನೆಗಳಿಗೆ ಮರಳಬೇಕೆಂಬುದೇ ಇದರ ಉದ್ದೇಶ. ಈ ಕಾರಣದಿಂದಲೇ ಇವುಗಳನ್ನು 'ಹರಾಮ್' ಅರ್ಥಾತ್ ಪವಿತ್ರ ಮಾಸಗಳು ಎಂದು ಕರೆಯಲಾಗುತ್ತಿತ್ತು.

ನೀವೇ ವಿನಾಶಕ್ಕೊಳ ಪಡಿಸಿಕೊಳ್ಳಬೇಡಿರಿ. ಸೌಜನ್ಯ ನೀತಿಯನ್ನು ಸ್ವೀಕರಿಸಿಕೊಳ್ಳಿರಿ. ಏಕೆಂದರೆ, ಅಲ್ಲಾಹನು ಸಜ್ಜನರನ್ನು ಪ್ರೀತಿಸುತ್ತಾನೆ.

إِلَى التَّهْلُكَةِ ۛ وَأَحْسِنُوا ۛ إِنَّ اللَّهَ يُحِبُّ
الْمُحْسِنِينَ ﴿١٩٥﴾

196. ಅಲ್ಲಾಹನ ಸಂತುಷ್ಟಿಗಾಗಿ 'ಹಜ್ಜ್' ಮತ್ತು 'ಉಮ್ರಾ'ಗಳ ಸಂಕಲ್ಪ ಮಾಡಿದಾಗ ಅದನ್ನು ಪೂರ್ತಿಗೊಳಿಸಿರಿ. ನೀವೆಲ್ಲಾದರೂ ಸುತ್ತುವರಿಯಲ್ಪಟ್ಟಾಗ ನಿಮಗೊದಗಿರುವ ಬಲಿಯನ್ನು ಅಲ್ಲಾಹನ ಸನ್ನಿಧಿಗೆ ಅರ್ಪಿಸಿರಿ[61] ಮತ್ತು ಬಲಿಯು ತನ್ನ ಸ್ಥಾನವನ್ನು ತಲುಪುವ ತನಕ ನಿಮ್ಮ ತಲೆ ಬೋಳಿಸಬೇಡಿರಿ. ಆದರೆ ರೋಗಿಯಾಗಿರುವ ಅಥವಾ ಶಿರೋಬಾಧೆಯ ಕಾರಣದಿಂದ ತಲೆ ಬೋಳಿಸಿಕೊಂಡಾತನು ಪ್ರಾಯಶ್ಚಿತ್ತ ರೂಪದಲ್ಲಿ ಉಪವಾಸಗಳ ನ್ನಾಚರಿಸಬೇಕು ಅಥವಾ ದಾನ ಕೊಡಬೇಕು ಅಥವಾ ಬಲಿ ಯರ್ಪಿಸಬೇಕು.[62] ಅನಂತರ ನಿಮಗೆ ನೆಮ್ಮದಿಯೊದಗಿದಾಗ,[63] (ಮತ್ತು ನೀವು ಹಜ್ಜ್‌ಗಿಂತ ಮುಂಚಿತವಾಗಿ ಮಕ್ಕಾ ತಲುಪಿದರೆ) 'ಹಜ್ಜ್'ನ ಕಾಲ ಬರುವ ತನಕ 'ಉಮ್ರಾ'ದಿಂದ ಫಲಪಡೆಯುವಾತನು ತನ್ನ ಶಕ್ತ್ಯಾನುಸಾರ ಬಲಿಯನ್ನರ್ಪಿಸಬೇಕು. ಬಲಿಯೊದಗದಿದ್ದರೆ, ಮೂರು ದಿನಗಳ ಉಪವಾಸವನ್ನು 'ಹಜ್ಜ್' ಕಾಲದಲ್ಲಿಯೂ ಏಳು ದಿನಗಳ ಉಪವಾಸವನ್ನು ಸ್ವಗೃಹಕ್ಕೆ ತಲುಪಿದ ಬಳಿಕವೂ, ಹೀಗೆ ಹತ್ತು ದಿನಗಳ ಉಪವಾಸವನ್ನು ಪೂರ್ತಿಯಾಗಿ ಆಚರಿಸಬೇಕು. ಈ ರಿಯಾಯಿತಿಯು ಮಸ್ಜಿದುಲ್ ಹರಾಮ್‌ನ ಸಮೀಪದ ನಿವಾಸಿಗಳಲ್ಲದವರಿಗಾಗಿದೆ. ಅಲ್ಲಾಹನ ಈ ಆಜ್ಞೆಗಳನ್ನು ಉಲ್ಲಂಘಿಸದಿರಿ. ಅಲ್ಲಾಹನು ಕಠಿಣವಾಗಿ ಶಿಕ್ಷಿಸುವವನೆಂಬುದನ್ನು ನೀವು ಚೆನ್ನಾಗಿ ತಿಳಿದಿರಬೇಕು.

وَأَتِمُّوا الْحَجَّ وَالْعُمْرَةَ لِلَّهِ ۚ فَإِنْ أُحْصِرْتُمْ
فَمَا اسْتَيْسَرَ مِنَ الْهَدْيِ ۖ وَلَا تَحْلِقُوا
رُءُوسَكُمْ حَتَّىٰ يَبْلُغَ الْهَدْيُ مَحِلَّهُ ۚ
فَمَن كَانَ مِنكُم مَّرِيضًا أَوْ بِهِ أَذًى مِّن
رَّأْسِهِ فَفِدْيَةٌ مِّن صِيَامٍ أَوْ صَدَقَةٍ
أَوْ نُسُكٍ ۚ فَإِذَا أَمِنتُمْ فَمَن تَمَتَّعَ بِالْعُمْرَةِ
إِلَى الْحَجِّ فَمَا اسْتَيْسَرَ مِنَ الْهَدْيِ ۚ فَمَن
لَّمْ يَجِدْ فَصِيَامُ ثَلَاثَةِ أَيَّامٍ فِي الْحَجِّ وَ
سَبْعَةٍ إِذَا رَجَعْتُمْ ۗ تِلْكَ عَشَرَةٌ كَامِلَةٌ ۗ
ذَٰلِكَ لِمَن لَّمْ يَكُنْ أَهْلُهُ حَاضِرِي الْمَسْجِدِ
الْحَرَامِ ۚ وَاتَّقُوا اللَّهَ وَاعْلَمُوا أَنَّ اللَّهَ
شَدِيدُ الْعِقَابِ ﴿١٩٦﴾

197. 'ಹಜ್ಜ್'ನ ತಿಂಗಳುಗಳು ಎಲ್ಲರಿಗೂ ತಿಳಿದಿವೆ. ಈ ನಿಶ್ಚಿತ ತಿಂಗಳುಗಳಲ್ಲಿ ಹಜ್ಜ್‌ನ ಸಂಕಲ್ಪ ಮಾಡುವಾತನು ಹಜ್ಜ್ ಕಾಲಾವಧಿಯಲ್ಲಿ ಯಾವುದೇ ಕಾಮಾಪೇಕ್ಷೆಯ, ದುರಾಚಾರದ ಮತ್ತು ಕಲಹದ ಕಾರ್ಯಗಳು ತನ್ನಿಂದ ಸಂಭವಿಸದಂತೆ ಜಾಗರೂಕನಾಗಿರಬೇಕು. ನೀವು ಯಾವ ಸತ್ಕಾರ್ಯಗಳನ್ನು

الْحَجُّ أَشْهُرٌ مَّعْلُومَاتٌ ۚ فَمَن فَرَضَ فِيهِنَّ
الْحَجَّ فَلَا رَفَثَ وَلَا فُسُوقَ وَلَا جِدَالَ
فِي الْحَجِّ ۗ وَمَا تَفْعَلُوا مِنْ خَيْرٍ يَعْلَمْهُ
اللَّهُ ۗ وَتَزَوَّدُوا فَإِنَّ خَيْرَ الزَّادِ التَّقْوَىٰ

61. ಅರ್ಥಾತ್- ದಾರಿಯಲ್ಲಿ ಮುಂದುವರಿಯಲು ಅಸಾಧ್ಯವಾಗಿ ಅನಿವಾರ್ಯವಾಗಿ ನಿಂತು ಬಿಡಬೇಕಾಗಿ ಬಂದರೆ ಒಂಟೆ, ಗೋವು ಮತ್ತು ಕುರಿಗಳ ಪೈಕಿ ಲಭ್ಯವಿರುವ ಯಾವುದಾದರೂ ಪ್ರಾಣಿಯನ್ನು ಅಲ್ಲಾಹನಿಗಾಗಿ ಬಲಿಯರ್ಪಿಸಿರಿ.

62. ಇಂತಹ ಸಂದರ್ಭಗಳಲ್ಲಿ ಮೂರು ದಿನದ ಉಪವಾಸ ಆಚರಿಸುವ, ಆರು ಮಂದಿ ಬಡವರಿಗೆ ಉಣಬಡಿಸುವ ಅಥವಾ ಕನಿಷ್ಠ ಒಂದು ಆಡನ್ನು 'ದಿಬಃ' ಮಾಡುವ ಆದೇಶವನ್ನು ಪ್ರವಾದಿವರ್ಯರು(ಸ) ನೀಡಿದ್ದಾರೆಂದು ಪ್ರವಾದಿ ವಚನಗಳಿಂದ ತಿಳಿದು ಬರುತ್ತದೆ.

63. ಅಂದರೆ ನಿಮಗೆ ಅನಿವಾರ್ಯವಾಗಿ ದಾರಿಯಲ್ಲೇ ನಿಂತು ಬಿಡಬೇಕಾಗಿ ಬಂದ ಆ ಕಾರಣವು ನಿವಾರಣೆಯಾದಾಗ.

ಮಾಡಿದರೂ ಅದು ಅಲ್ಲಾಹನ ಅರಿವಿನಲ್ಲಿರುವುದು. ಹಜ್ಜ್ ಯಾತ್ರೆಗೆ ಹೋಗುವಾಗ ದಾರಿವೆಚ್ಚವನ್ನು ಕೊಂಡು ಹೋಗಿರಿ. ಅತ್ಯುತ್ತಮ ದಾರಿವೆಚ್ಚವು ಧರ್ಮನಿಷ್ಠೆ ಆಗಿರುತ್ತದೆ. ಆದುದರಿಂದ ಓ ಬುದ್ಧಿಜೀವಿಗಳೇ, ನನ್ನ ಆಜ್ಞೋಲ್ಲಂಘನೆಯಿಂದ ದೂರವಿರಿ.

وَاتَّقُوْنِ يٰٓاُولِي الْاَلْبَابِ ﴿١٩٧﴾

198. ನೀವು ಹಜ್ಜ್ ಯಾತ್ರೆಯ ಜೊತೆಯಲ್ಲೇ ನಿಮ್ಮ ಪ್ರಭುವಿನ ಅನುಗ್ರಹವನ್ನರಸುತ್ತ ಹೋಗುವುದರಲ್ಲೇನೂ ಅಡ್ಡಿಯಿಲ್ಲ.[64] ನೀವು 'ಅರಫಾ'ದಿಂದ ಹೊರಟು 'ಮಶ್‌ಅರುಲ್ ಹರಾಮ್' (ಮುಝ್ದಲಿಫಾ)ನ ಬಳಿ ತಂಗಿ, ಅಲ್ಲಾಹನನ್ನು ಸ್ಮರಿಸಿರಿ. ಆತನು ನಿಮಗೆ ಮಾರ್ಗದರ್ಶನ ಮಾಡಿದ ರೀತಿಯಲ್ಲೇ ಸ್ಮರಿಸಿರಿ. ಇದಕ್ಕೆ ಮುಂಚೆ ನೀವು ಪಥಭ್ರಷ್ಟರಾಗಿದ್ದಿರಿ.

لَيْسَ عَلَيْكُمْ جُنَاحٌ اَنْ تَبْتَغُوْا فَضْلًا مِّنْ رَّبِّكُمْ ؕ فَاِذَآ اَفَضْتُمْ مِّنْ عَرَفٰتٍ فَاذْكُرُوا اللّٰهَ عِنْدَ الْمَشْعَرِ الْحَرَامِ ۪ وَاذْكُرُوْهُ كَمَا هَدٰىكُمْ ۚ وَاِنْ كُنْتُمْ مِّنْ قَبْلِهٖ لَمِنَ الضَّآلِّيْنَ ﴿١٩٨﴾

199. ಆ ಬಳಿಕ ಇತರರೆಲ್ಲರೂ ಮರಳುವಲ್ಲಿಂದಲೇ ನೀವೂ ಮರಳಿರಿ ಮತ್ತು ಅಲ್ಲಾಹನಿಂದ ಕ್ಷಮೆ ಯಾಚಿಸಿರಿ.[65] ನಿಶ್ಚಯವಾಗಿಯೂ ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

ثُمَّ اَفِيْضُوْا مِنْ حَيْثُ اَفَاضَ النَّاسُ وَاسْتَغْفِرُوا اللّٰهَ ؕ اِنَّ اللّٰهَ غَفُوْرٌ رَّحِيْمٌ ﴿١٩٩﴾

200. ಹೀಗೆ ನೀವು ಹಜ್ಜ್‌ನ ವಿಧಿ ವಿಧಾನಗಳನ್ನು ನಿರ್ವಹಿಸಿದ ಬಳಿಕ, ಹಿಂದೆ ನೀವು ಪೂರ್ವಿಕರನ್ನು ಸ್ಮರಿಸುತ್ತಿದ್ದಂತೆಯೇ ಅಲ್ಲಾಹನನ್ನು ಸ್ಮರಿಸಿರಿ; ಮಾತ್ರವಲ್ಲ ಅದಕ್ಕಿಂತಲೂ ಅಧಿಕವಾಗಿ ಸ್ಮರಿಸಿರಿ. (ಆದರೆ, ಅಲ್ಲಾಹನನ್ನು ಸ್ಮರಿಸುವವರಲ್ಲೂ ತುಂಬಾ ತಾರತಮ್ಯವಿದೆ.) ಅವರಲ್ಲಿ ಕೆಲವರು, "ಓ ನಮ್ಮ ಪ್ರಭೂ, ನಮಗೆ ಇಹಲೋಕದಲ್ಲೇ ಎಲ್ಲವನ್ನೂ ಕೊಟ್ಟುಬಿಡು" ಎನ್ನುವವರಿದ್ದಾರೆ. ಇಂತಹವರಿಗೆ ಪರಲೋಕದಲ್ಲಿ ಯಾವ ಪಾಲೂ ಇಲ್ಲ.

فَاِذَا قَضَيْتُمْ مَّنَاسِكَكُمْ فَاذْكُرُوا اللّٰهَ كَذِكْرِكُمْ اٰبَآءَكُمْ اَوْ اَشَدَّ ذِكْرًا ؕ فَمِنَ النَّاسِ مَنْ يَّقُوْلُ رَبَّنَآ اٰتِنَا فِي الدُّنْيَا وَمَا لَهٗ فِي الْاٰخِرَةِ مِنْ خَلَاقٍ ﴿٢٠٠﴾

201. ಇನ್ನು ಕೆಲವರು, "ಓ ನಮ್ಮ ಪ್ರಭೂ, ನಮಗೆ ಇಹಲೋಕದಲ್ಲಿಯೂ ಒಳಿತನ್ನು ದಯಪಾಲಿಸು ಪರಲೋಕದಲ್ಲಿಯೂ ಒಳಿತನ್ನು ದಯಪಾಲಿಸು ಮತ್ತು ನಮ್ಮನ್ನು ಅಗ್ನಿಯಾತನೆಯಿಂದ ರಕ್ಷಿಸು" ಎನ್ನುವವರೂ ಇದ್ದಾರೆ.

وَمِنْهُمْ مَّنْ يَّقُوْلُ رَبَّنَآ اٰتِنَا فِي الدُّنْيَا حَسَنَةً وَّفِي الْاٰخِرَةِ حَسَنَةً وَّقِنَا عَذَابَ النَّارِ ﴿٢٠١﴾

64. ಅಲ್ಲಾಹನ ಅನುಗ್ರಹವನ್ನು ಹುಡುಕುವುದೆಂದರೆ ಹಜ್ಜ್‌ನ ಅವಧಿಯಲ್ಲಿ ಉಪಜೀವನಕ್ಕಾಗಿ ಯಾವುದೇ ಕೆಲಸವನ್ನು ಮಾಡುವುದಾಗಿದೆ.

65. ಹಝ್ರುತ್ ಇಬ್‌ರಾಹೀಮ್ ಮತ್ತು ಇಸ್ಮಾಈಲ್(ಅ) ಅವರ ಕಾಲದಿಂದಲೂ ಪ್ರಚಲಿತವಿದ್ದ ಹಜ್ಜ್‌ನ ವಿಧಾನವೇನೆಂದರೆ ದುಲ್‌ಹಜ್ಜ್ ತಿಂಗಳ 9ನೇ ತಾರೀಕಿನಂದು ಮಿನಾದಿಂದ ಅರಫಾತ್‌ಗೆ ಹೋಗಿ ರಾತ್ರಿ ಅಲ್ಲಿಂದ ಮರಳಿ 'ಮುಝ್ದಲಿಫಾ'ದಲ್ಲಿ ತಂಗುತ್ತಿದ್ದರು. ಅನಂತರ ಕ್ರಮೇಣ ಕುರೈಶರ ಬ್ರಾಹ್ಮಣ್ಯ ಸ್ಥಾಪಿತವಾದಾಗ ಅವರು "ನಾವಾದರೋ ಹರಮ್‌ನ ನಿವಾಸಿಗಳು, ಸಾಮಾನ್ಯ ಅರಬರಂತೆ ಅರಫಾದ ತನಕ ಹೋಗುವುದು ನಮ್ಮ ಘನತೆಗೆ ತಕ್ಕುದಲ್ಲ" ಎನ್ನತೊಡಗಿದರು. ಆದ್ದರಿಂದ ಅವರು ತಮ್ಮ ಪ್ರತ್ಯೇಕತೆಯನ್ನು ಉಳಿಸಿಕೊಳ್ಳಲಿಕ್ಕಾಗಿ ಮುಝ್ದಲಿಫಾದ ತನಕ ಹೋಗಿ ಅಲ್ಲಿಂದ ಮರಳುತ್ತಿದ್ದರು. ಉಳಿದವರನ್ನು ಅರಫಾದ ತನಕ ಹೋಗಲು ಬಿಡುತ್ತಿದ್ದರು. ಈ ದುರಹಂಕಾರ ಮತ್ತು ದುರಭಿಮಾನದ ಮೂರ್ತಿಯನ್ನೇ ಈ ಸೂಕ್ತದ ಮೂಲಕ ನುಚ್ಚುನೂರುಗೊಳಿಸಲಾಗಿದೆ.

202. ಇಂತಹವರು ತಮ್ಮ ದುಡಿಮೆಗನುಸಾರವಾಗಿ (ಇಕ್ಕಡೆಗಳಲ್ಲೂ) ಪಾಲು ಪಡೆಯುವರು. ಅಲ್ಲಾಹನು ಲೆಕ್ಕ ತೀರಿಸುವುದರಲ್ಲಿ ಅತಿ ಶೀಘ್ರನಾಗಿರುತ್ತಾನೆ.

أُولَٰئِكَ لَهُمْ نَصِيبٌ مِّمَّا كَسَبُوا ۚ وَاللَّهُ سَرِيعُ الْحِسَابِ ﴿٢٠٢﴾

203. ನೀವು ಅಲ್ಲಾಹನ ಧ್ಯಾನದಲ್ಲಿ ಕಳೆಯಬೇಕಾಗಿರುವ ಎಣಿಕೆಯ ಕೆಲವು ದಿನಗಳಿವು. ಯಾವನಾದರೂ ಲಗುಬಗೆಯಿಂದ ಎರಡೇ ದಿನಗಳಲ್ಲಿ ಮರಳಿದರೂ ಏನೂ ದೋಷವಿಲ್ಲ. ಇನ್ನಾವನಾದರೂ ಸ್ವಲ್ಪ ಹೆಚ್ಚು ಕಾಲ ನಿಂತು ಮರಳಿದರೂ ಏನೂ ದೋಷವಿಲ್ಲ.[66] ಇದು, ಈ ದಿನಗಳನ್ನು ಧರ್ಮನಿಷ್ಠೆಯಲ್ಲಿ ಕಳೆದಿದ್ದರೆ ಮಾತ್ರ. ಅಲ್ಲಾಹನ ಅವಿಧೇಯತೆಯಿಂದ ದೂರವಿರಿ. ಒಂದು ದಿನ ಅವನ ಸನ್ನಿಧಿಯಲ್ಲಿ ನಿಮಗೆ ಹಾಜರಾಗಲಿದೆಯೆಂಬುದನ್ನು ಚೆನ್ನಾಗಿ ಅರಿತುಕೊಳ್ಳಿರಿ.

وَاذْكُرُوا اللَّهَ فِي أَيَّامٍ مَّعْدُودَاتٍ ۚ فَمَن تَعَجَّلَ فِي يَوْمَيْنِ فَلَا إِثْمَ عَلَيْهِ وَمَن تَأَخَّرَ فَلَا إِثْمَ عَلَيْهِ ۚ لِمَنِ اتَّقَىٰ ۗ وَاتَّقُوا اللَّهَ وَاعْلَمُوا أَنَّكُمْ إِلَيْهِ تُحْشَرُونَ ﴿٢٠٣﴾

204. ಜನರ ಪೈಕಿ ಯಾವನಾದರೊಬ್ಬನ ಮಾತುಗಳು ಐಹಿಕ ಜೀವನದಲ್ಲಿ ನಿಮಗೆ ಅತ್ಯಂತ ಹಿತವಾಗಿ ತೋರುತ್ತವೆ. ಅವನು ತನ್ನ ನಿಷ್ಕಾಪಟ್ಯದ ಬಗ್ಗೆ ಪದೇ ಪದೇ ಅಲ್ಲಾಹನನ್ನು ಸಾಕ್ಷ್ಯ ವಿರಿಸುತ್ತಾನೆ. ಆದರೆ ವಾಸ್ತವದಲ್ಲಿ ಅವನು ಸತ್ಯದ ಅತ್ಯಂತ ಕೆಟ್ಟ ಶತ್ರುವಾಗಿರುತ್ತಾನೆ.

وَمِنَ النَّاسِ مَن يُعْجِبُكَ قَوْلُهُ فِي الْحَيَاةِ الدُّنْيَا وَيُشْهِدُ اللَّهَ عَلَىٰ مَا فِي قَلْبِهِ وَهُوَ أَلَدُّ الْخِصَامِ ﴿٢٠٤﴾

205. ಅಂತಹವನಿಗೆ ಅಧಿಕಾರ ಪ್ರಾಪ್ತವಾದಾಗ[67] ಭೂಮಿಯ ಮೇಲೆ ಅವನ ಚಟುವಟಿಕೆಗಳೆಲ್ಲ ಕ್ಷೋಭೆಯನ್ನುಂಟು ಮಾಡಲಿಕ್ಕೂ ಹೊಲ-ಬೆಳೆಗಳನ್ನು ಹಾಳುಮಾಡಲಿಕ್ಕೂ ಮಾನವ ವಂಶವನ್ನು ನಾಶಮಾಡಲಿಕ್ಕೂ ಆಗಿರುತ್ತವೆ. ವಾಸ್ತವದಲ್ಲಿ (ಅವನು ಸಾಕ್ಷ್ಯ ವಿರಿಸುತ್ತಿರುವ) ಅಲ್ಲಾಹನು ಕ್ಷೋಭೆಯನ್ನು ಎಷ್ಟು ಮಾತ್ರಕ್ಕೂ ಮೆಚ್ಚುವುದಿಲ್ಲ.

وَإِذَا تَوَلَّىٰ سَعَىٰ فِي الْأَرْضِ لِيُفْسِدَ فِيهَا وَيُهْلِكَ الْحَرْثَ وَالنَّسْلَ ۗ وَاللَّهُ لَا يُحِبُّ الْفَسَادَ ﴿٢٠٥﴾

206. 'ಅಲ್ಲಾಹನ ಭಯವಿರಿಸಿಕೋ' ಎಂದು ಅವನೊಡನೆ ಹೇಳಲಾದಾಗ, ಅವನ ದುರಭಿಮಾನವು ಅವನನ್ನು ಪಾಪಕಾರ್ಯದಲ್ಲಿ ದೃಢಗೊಳಿಸುತ್ತದೆ. ಅಂತಹವನಿಗೆ ನರಕವೇ ಸಾಕು ಮತ್ತು ಅದು ಅತ್ಯಂತ ಕೆಟ್ಟ ತಾಣ.

وَإِذَا قِيلَ لَهُ اتَّقِ اللَّهَ أَخَذَتْهُ الْعِزَّةُ بِالْإِثْمِ ۚ فَحَسْبُهُ جَهَنَّمُ ۚ وَلَبِئْسَ الْمِهَادُ ﴿٢٠٦﴾

66. ಅರ್ಥಾತ್- 'ಅಯ್ಯಾಮುತ್ತಶ್‌ರೀಕ್' (ದುಲ್‌ಹಜ್ಜ್ ತಿಂಗಳ 9ರಿಂದ 13) ಅವಧಿಯಲ್ಲಿ ಮಿನಾದಿಂದ ಮಕ್ಕಾಕ್ಕೆ ದುಲ್‌ಹಜ್ಜ್ ಹನ್ನೆರಡರಂದು ಮರಳಿದರೂ ಸರಿಯೆ, ಹದಿಮೂರರಂದು ಮರಳಿದರೂ ಸರಿಯೆ.

67. ಇದರ ಇನ್ನೊಂದು ಅನುವಾದ 'ಅವನು ಮರಳಿದಾಗ' ಎಂದೂ ಆಗಬಹುದು. ಅರ್ಥಾತ್- ಹೀಗೆಲ್ಲಾ ಹೇಳಿದ ಬಳಿಕ ಅವನು ಮರಳಿದಾಗ ಅವನು ಮಾಡುವುದು ಈ ರೀತಿ ಎಂದು ಹೇಳಲಾಗಿದೆ.

207. ಇನ್ನೊಂದೆಡೆ ಅಲ್ಲಾಹನ ಸಂಪ್ರೀತಿಯ ಆಕಾಂಕ್ಷೆಯಲ್ಲಿ ತನ್ನ ದೇಹವನ್ನು ಸವೆಸುವವನೂ ಇದ್ದಾನೆ. ಅಂತಹ ದಾಸನ ಮೇಲೆ ಅಲ್ಲಾಹನು ಅತ್ಯಂತ ಕೃಪಾಳುವಾಗಿರುತ್ತಾನೆ.

وَمِنَ النَّاسِ مَنْ يَّشْرِيْ نَفْسَهُ ابْتِغَآءَ
مَرْضَاتِ اللّٰهِ ؕ وَاللّٰهُ رَءُوْفٌۢ بِالْعِبَادِ ﴿٢٠٧﴾

208. ಓ ಸತ್ಯವಿಶ್ವಾಸಿಗಳೇ, ನೀವು ಸರ್ವಸಂಪೂರ್ಣವಾಗಿ ಇಸ್ಲಾಮಿನೊಳಗೆ ಸೇರಿಕೊಳ್ಳಿರಿ[68] ಮತ್ತು ಶೈತಾನನನ್ನು ಅನುಸರಿಸಬೇಡಿರಿ. ನಿಶ್ಚಯವಾಗಿಯೂ ಅವನು ನಿಮ್ಮ ಪ್ರತ್ಯಕ್ಷ ಶತ್ರುವಾಗಿದ್ದಾನೆ.

يٰۤاَيُّهَا الَّذِيْنَ اٰمَنُوا ادْخُلُوْا فِى السِّلْمِ كَآفَّةً ۪
وَّلَا تَتَّبِعُوْا خُطُوٰتِ الشَّيْطٰنِ ؕ اِنَّهٗ لَـكُمْ
عَدُوٌّ مُّبِيْنٌ ﴿٢٠٨﴾

209. ನೀವು ನಿಮ್ಮ ಬಳಿಗೆ ಬಂದಿರುವ ಸುವ್ಯಕ್ತ ಬೋಧನೆಗಳನ್ನು ಹೊಂದಿಯೂ ತಪ್ಪಿ ನಡೆದರೆ, ಅಲ್ಲಾಹನು ಮಹಾ ಪ್ರತಾಪಿಯೂ ಯುಕ್ತಿಪೂರ್ಣನೂ ಆಗಿರುತ್ತಾನೆಂಬುದನ್ನು ಚೆನ್ನಾಗಿ ಅರಿತುಕೊಳ್ಳಿರಿ.

فَاِنْ زَلَـلْتُمْ مِّنْۢ بَعْدِ مَا جَآءَتْكُمُ الْبَيِّنٰتُ
فَاعْلَمُوْٓا اَنَّ اللّٰهَ عَزِيْزٌ حَكِيْمٌ ﴿٢٠٩﴾

210. (ಇಷ್ಟೆಲ್ಲಾ ಉಪದೇಶ ಹಾಗೂ ಬೋಧನೆಗಳ ಬಳಿಕವೂ ಜನರು ನೆಟ್ಟಗಾಗದಿದ್ದಲ್ಲಿ) ಅವರೇನು, ಮೋಡಗಳ ಛತ್ರಗಳಲ್ಲಿ ದೇವಚರರ ಸಮೂಹದೊಂದಿಗೆ ಅಲ್ಲಾಹನು ಸ್ವತಃ ಬಂದೆರಗಿ ಅಂತಿಮ ತೀರ್ಮಾನವನ್ನೇ ಮಾಡಿಬಿಡಬೇಕೆಂದು ನಿರೀಕ್ಷಿಸುತ್ತಿರುವರೇ? ಕೊನೆಗಂತು ಎಲ್ಲಾ ಪ್ರಕರಣಗಳೂ ಅಲ್ಲಾಹನ ಸನ್ನಿಧಿಯಲ್ಲೇ ಸಮರ್ಪಿತವಾಗಲಿಕ್ಕಿವೆ.

هَلْ يَنْظُرُوْنَ اِلَّآ اَنْ يَّاْتِيَهُمُ اللّٰهُ فِىْ ظُلَلٍ
مِّنَ الْغَمَامِ وَالْمَلٰٓـئِكَةُ وَقُضِىَ الْاَمْرُ ؕ وَ
اِلَى اللّٰهِ تُرْجَعُ الْاُمُوْرُ ﴿٢١٠﴾

211. ಬನೀಇಸ್ರಾಈಲರೊಡನೆ, ನಾವು ಅವರಿಗೆ ಯಾವ ಯಾವ ತರದ ಸುವ್ಯಕ್ತ ದೃಷ್ಟಾಂತಗಳನ್ನು ತೋರಿಸಿದ್ದೆವು ಮತ್ತು ಅಲ್ಲಾಹನ ಅನುಗ್ರಹ ಹೊಂದಿದ ಬಳಿಕ ಅದನ್ನು ದುರ್ದೆಸೆಗೆ ಬದಲಿಸುವ ಜನಾಂಗಕ್ಕೆ ಅಲ್ಲಾಹನು ಎಂತಹ ಕಠಿಣ ಶಿಕ್ಷೆ ಕೊಡುತ್ತಾನೆಂದು ಕೇಳಿರಿ.

سَلْ بَنِىْٓ اِسْرَآءِيْلَ کَمْ اٰتَيْنٰهُمْ مِّنْ اٰيَةٍۢ
بَيِّنَةٍ ؕ وَمَنْ يُّبَدِّلْ نِعْمَةَ اللّٰهِ مِنْۢ بَعْدِ
مَا جَآءَتْهُ فَاِنَّ اللّٰهَ شَدِيْدُ الْعِقَابِ ﴿٢١١﴾

212. ಸತ್ಯನಿಷೇಧ ಮಾರ್ಗವನ್ನು ಸ್ವೀಕರಿಸಿಕೊಂಡವರಿಗೆ ಭೂಲೋಕ ಜೀವನವು ಅತ್ಯಂತ ಮನಮೋಹಕವಾಗಿ ಮಾಡಲ್ಪಟ್ಟಿದೆ. ಇಂತಹವರು ಸತ್ಯವಿಶ್ವಾಸ ಮಾರ್ಗ ಸ್ವೀಕರಿಸಿದವರನ್ನು ಅಪಹಾಸ್ಯ ಮಾಡುತ್ತಾರೆ. ಆದರೆ, ಪುನರುತ್ಥಾನ ದಿನದಂದು ಅವರ ಎದುರಾಗಿ

زُيِّنَ لِلَّذِيْنَ كَفَرُوا الْحَيٰوةُ الدُّنْيَا وَ
يَسْخَرُوْنَ مِنَ الَّذِيْنَ اٰمَنُوْا ۘ وَالَّذِيْنَ
اتَّقَوْا فَوْقَهُمْ يَوْمَ الْقِيٰمَةِ ؕ وَاللّٰهُ يَرْزُقُ

68. ಅರ್ಥಾತ್- ಯಾವುದೇ ಅಪವಾದಗಳಿರದಂತೆ ನಿಮ್ಮ ಜೀವನವನ್ನು ಸಂಪೂರ್ಣವಾಗಿ ಇಸ್ಲಾಮಿಗೆ ಬದ್ಧಗೊಳಿಸಿರಿ. ಜೀವನವನ್ನು ಅನೇಕ ರಂಗಗಳಲ್ಲಿ ವಿಂಗಡಿಸಿ, ಕೆಲವದರಲ್ಲಿ ಇಸ್ಲಾಮಿನ ಪಾಲನೆ ಮಾಡಿ ಉಳಿದವುಗಳಲ್ಲಿ ಅದರಿಂದ ಹೊರಗುಳಿಯುವಂತಾಗಬಾರದು.

مَنْ يَّشَآءُ بِغَيْرِ حِسَابٍ ﴿٢١٢﴾

ಧರ್ಮನಿಷ್ಠರೇ ಅತ್ಯುನ್ನತ ಪದವಿಯಲ್ಲಿರುವರು. ಭೂಲೋಕದ ಜೀವನಾಧಾರವನ್ನಂತು ತಾನಿಚ್ಛಿಸಿದವರಿಗೆ ಅಮಿತವಾಗಿ ನೀಡಲು ಅಲ್ಲಾಹನು ಅಧಿಕಾರವುಳ್ಳವನಾಗಿರುತ್ತಾನೆ.

كَانَ النَّاسُ اُمَّةً وَّاحِدَةً فَبَعَثَ اللّٰهُ
النَّبِيّٖنَ مُبَشِّرِيْنَ وَمُنْذِرِيْنَ وَاَنْزَلَ
مَعَهُمُ الْكِتٰبَ بِالْحَقِّ لِيَحْكُمَ بَيْنَ النَّاسِ
فِيْمَا اخْتَلَفُوْا فِيْهِ وَمَا اخْتَلَفَ فِيْهِ اِلَّا
الَّذِيْنَ اُوْتُوْهُ مِنْ بَعْدِ مَا جَآءَتْهُمُ الْبَيِّنٰتُ
بَغْيًا بَيْنَهُمْ فَهَدَى اللّٰهُ الَّذِيْنَ اٰمَنُوْا لِمَا
اخْتَلَفُوْا فِيْهِ مِنَ الْحَقِّ بِاِذْنِهٖ وَاللّٰهُ
يَهْدِيْ مَنْ يَّشَآءُ اِلٰى صِرَاطٍ مُّسْتَقِيْمٍ ﴿٢١٣﴾

213. ಆರಂಭದಲ್ಲಿ ಜನರೆಲ್ಲರೂ ಒಂದೇ ಸಂಪ್ರದಾಯದವರಾಗಿದ್ದರು. (ಈ ಸ್ಥಿತಿ ಬಹುಕಾಲ ಉಳಿಯಲಿಲ್ಲ. ಅವರೊಳಗೆ ಭಿನ್ನಾಭಿಪ್ರಾಯಗಳುಂಟಾದುವು) ಆಗ ಅಲ್ಲಾಹನು ಸತ್ಯಮಾರ್ಗದ ಬಗ್ಗೆ ಸುವಾರ್ತೆ ನೀಡುವವರೂ ಮಿಥ್ಯಮಾರ್ಗದ ಬಗ್ಗೆ ಎಚ್ಚರಿಕೆ ಕೊಡುವವರೂ ಆದ ಪ್ರವಾದಿಗಳನ್ನು ರವಾನಿಸಿದನು ಮತ್ತು ಅವರೊಂದಿಗೆ, ಸತ್ಯದ ವಿಷಯದಲ್ಲಿ ಜನರಲ್ಲುಂಟಾಗಿದ್ದ ಭಿನ್ನಾಭಿಪ್ರಾಯಗಳ ಬಗ್ಗೆ ತೀರ್ಪು ನೀಡಲಿಕ್ಕಾಗಿ ಪರಮಸತ್ಯ ಗ್ರಂಥವನ್ನು ಇಳಿಸಿದನು. (ಪ್ರಾರಂಭದಲ್ಲಿ ಜನರಿಗೆ ಸತ್ಯವನ್ನು ತೋರಿಸಿಕೊಡದಿದ್ದುದರಿಂದೇನೂ ಅವರಲ್ಲಿ ಈ ತರದ ಭಿನ್ನಾಭಿಪ್ರಾಯಗಳು ತಲೆದೋರಿದುದಲ್ಲ ನಿಜವಾಗಿ) ಸತ್ಯದ ಶಿಕ್ಷಣ ಕೊಡಲ್ಪಟ್ಟವರೇ ಈ ಅಭಿಪ್ರಾಯ ಭೇದಗಳನ್ನುಂಟು ಮಾಡಿದರು. ಅವರು ಕೇವಲ ಪರಸ್ಪರ ಅತಿರೇಕ ನಡೆಸಲು ಇಷ್ಟಪಡುತ್ತಿದ್ದುದರಿಂದಲೇ ಸುವ್ಯಕ್ತ ದೃಷ್ಟಾಂತಗಳನ್ನು ಪಡೆದ ಬಳಿಕ ಸತ್ಯವನ್ನು ತ್ಯಜಿಸಿ ವಿವಿಧ ಹಾದಿಗಳನ್ನು ಸೃಷ್ಟಿಸಿಕೊಂಡರು. ಜನರು ಭಿನ್ನಾಭಿಪ್ರಾಯ ತಾಳಿದ್ದ ಆ ಸತ್ಯಮಾರ್ಗವನ್ನು ಅಲ್ಲಾಹನು ತನ್ನ ಅನುಮತಿಯಿಂದ, ಪ್ರವಾದಿಗಳ ಮೇಲೆ ವಿಶ್ವಾಸವಿಟ್ಟವರಿಗೆ ತೋರಿಸಿಕೊಟ್ಟನು. ಅಲ್ಲಾಹನು ತಾನಿಚ್ಛಿಸಿದವರಿಗೆ ಸನ್ಮಾರ್ಗವನ್ನು ತೋರಿಸುತ್ತಾನೆ.

اَمْ حَسِبْتُمْ اَنْ تَدْخُلُوا الْجَنَّةَ وَلَمَّا يَاْتِكُمْ
مَّثَلُ الَّذِيْنَ خَلَوْا مِنْ قَبْلِكُمْ مَسَّتْهُمُ
الْبَاْسَآءُ وَالضَّرَّآءُ وَزُلْزِلُوْا حَتّٰى يَقُوْلَ
الرَّسُوْلُ وَالَّذِيْنَ اٰمَنُوْا مَعَهٗ مَتٰى نَصْرُ
اللّٰهِ اَلَآ اِنَّ نَصْرَ اللّٰهِ قَرِيْبٌ ﴿٢١٤﴾

214. ನಿಮಗಿಂತ ಹಿಂದೆ ವಿಶ್ವಾಸವಿಟ್ಟಿದ್ದವರ ಮೇಲೆ ಸಂಭವಿಸಿದ್ದ ಘಟನೆಗಳೆಲ್ಲ ನಿಮ್ಮ ಮೇಲೆ ಇನ್ನೂ ಸಂಭವಿಸಿಲ್ಲದಿದ್ದರೂ ನಿಮಗೆ ನಿರಾಯಾಸವಾಗಿ ಸ್ವರ್ಗ ಪ್ರವೇಶ ಒದಗುವುದೆಂದು ನೀವು ಎಣಿಸಿದ್ದೀರಾ?[69] ಆಗಿನ ಸಂದೇಶವಾಹಕರೂ ಅವರ ಜೊತೆಯ ಸತ್ಯವಿಶ್ವಾಸಿಗಳೂ, "ಅಲ್ಲಾಹನ ಸಹಾಯ ಎಂದು ಬಂದೀತು?" ಎಂದು ಕಿರುಚಿ ಬಿಡುವಷ್ಟು ಕಷ್ಟಗಳೂ ವಿಪತ್ತುಗಳೂ ಅವರ ಮೇಲೆ ಎರಗಿದುವು ಮತ್ತು ಅವರನ್ನು ನಡುಗಿಸಿ

69. ಅರ್ಥಾತ್- ಭೂಮುಖಕ್ಕೆ ಪ್ರವಾದಿಗಳು ಬಂದಾಗಲೆಲ್ಲಾ ಅವರಿಗೂ ಅವರ ಅನುಯಾಯಿಗಳಿಗೂ ದೇವಧಿಕ್ಕಾರಿಗಳಿಂದ ಅತ್ಯಂತ ಕಠಿಣ ಪ್ರತಿರೋಧ ಎದುರಾಯಿತು. ಅವರು ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಮಿಥ್ಯದ ಬದಲಿಗೆ ಸತ್ಯಧರ್ಮದ ಸಂಸ್ಥಾಪನೆಗೆ ಪ್ರಯತ್ನಿಸಿದರು. ಆಗಷ್ಟೇ ಅವರು ಸ್ವರ್ಗಕ್ಕೆ ಅರ್ಹರಾದರು. ಅಲ್ಲಾಹನಿಗಾಗಿ ಮತ್ತು ಅವನ ಧರ್ಮಕ್ಕಾಗಿ ಯಾವ ಯಾತನೆಯನ್ನೂ ಸಹಿಸದೆ ಸ್ವರ್ಗ ಅಷ್ಟು ಅಗ್ಗದಿಂದೇನೂ ಪ್ರಾಪ್ತವಾಗುವುದಿಲ್ಲ.

ಬಿಡಲಾಯಿತು. "ಇದೋ, ಅಲ್ಲಾಹನ ಸಹಾಯ ಸಮೀಪವಿದೆ" (ಎಂದು ಆಗ ಅವರನ್ನು ಸಂತೈಸಲಾಯಿತು.)

215. ನಾವೇನನ್ನು ಖರ್ಚು ಮಾಡಬೇಕೆಂದು ಜನರು ಕೇಳುತ್ತಾರೆ. ನೀವು ಏನು ಖರ್ಚು ಮಾಡುತ್ತೀರೋ ಅದನ್ನು ನಿಮ್ಮ ಮಾತಾಪಿತರ, ಸಂಬಂಧಿಕರ, ಅನಾಥರ, ಬಡವರ ಮತ್ತು ಪ್ರಯಾಣಿಕರ ಮೇಲೆ ಖರ್ಚು ಮಾಡಿರೆಂದೂ ನೀವು ಮಾಡುವ ಎಲ್ಲ ಒಳಿತುಗಳನ್ನು ಅಲ್ಲಾಹನು ಚೆನ್ನಾಗಿ ಅರಿಯುವವನಾಗಿರುತ್ತಾನೆಂದೂ ಉತ್ತರ ಹೇಳಿರಿ.

يَسْـَٔلُوْنَكَ مَاذَا يُنْفِقُوْنَ ؕ قُلْ مَاۤ اَنْفَقْتُمْ
مِّنْ خَيْرٍ فَلِلْوَالِدَيْنِ وَالْاَقْرَبِيْنَ وَالْيَتٰمٰى
وَالْمَسٰكِيْنِ وَابْنِ السَّبِيْلِ ؕ وَمَا تَفْعَلُوْا
مِنْ خَيْرٍ فَاِنَّ اللّٰهَ بِهٖ عَلِيْمٌ ﴿۲۱۵﴾

216. ನಿಮಗೆ ಯುದ್ಧವನ್ನು ಶಾಸನಗೊಳಿಸಲಾಗಿದೆ. ಅದು ನಿಮಗೆ ಅಪ್ರಿಯವಾಗಿದೆ- ಒಂದು ವಸ್ತುವು ನಿಮಗೆ ಅಪ್ರಿಯವಾಗಿದ್ದರೂ ಆ ವಸ್ತುವೇ ನಿಮಗೆ ಗುಣಕರವಾಗಿರಲೂ ಸಾಧ್ಯವಿದೆ ಮತ್ತು ಒಂದು ವಸ್ತುವು ನಿಮಗೆ ಪ್ರಿಯವಾಗಿದ್ದರೂ ಆ ವಸ್ತುವೇ ನಿಮಗೆ ಹಾನಿಕರವಾಗಿರಲೂ ಸಾಧ್ಯವಿದೆ. ಅಲ್ಲಾಹನು ಬಲ್ಲವನಾಗಿದ್ದಾನೆ, ನೀವು ಬಲ್ಲವರಲ್ಲ.

كُتِبَ عَلَيْكُمُ الْقِتَالُ وَهُوَ كُرْهٌ لَّكُمْ ۚ وَ
عَسٰۤى اَنْ تَكْرَهُوْا شَيْـًٔا وَّهُوَ خَيْرٌ لَّكُمْ ۚ وَ
عَسٰۤى اَنْ تُحِبُّوْا شَيْـًٔا وَّهُوَ شَرٌّ لَّكُمْ ؕ وَاللّٰهُ
يَعْلَمُ وَاَنْتُمْ لَا تَعْلَمُوْنَ ﴿۲۱۶﴾

217. ಮಾನ್ಯ ಮಾಸದಲ್ಲಿ ಕಾದಾಡುವ ಬಗ್ಗೆ ಜನರು ನಿಮ್ಮೊಡನೆ ಕೇಳುತ್ತಾರೆ. ಹೇಳಿರಿ: ಅದರಲ್ಲಿ ಕಾದಾಡುವುದು ಮಹಾಪರಾಧವೇ ಸರಿ. ಆದರೆ ಜನರನ್ನು ದೇವಮಾರ್ಗದಿಂದ ತಡೆಯುವುದೂ ಅಲ್ಲಾಹನನ್ನು ನಿಷೇಧಿಸುವುದೂ ದೇವಾರಾಧಕರ ಪಾಲಿಗೆ 'ಮಸ್ಜಿದುಲ್ ಹರಾಮ್'ನ ದಾರಿಯನ್ನು ಮುಚ್ಚುವುದೂ ಹರಮ್(ಕಅಬಾದ ಪರಿಸರ)ನೊಳಗಿರುವವರನ್ನು ಅಲ್ಲಿಂದ ಹೊರಕ್ಕೆ ಅಟ್ಟುವುದೂ ಅಲ್ಲಾಹನ ದೃಷ್ಟಿಯಲ್ಲಿ ಅದಕ್ಕಿಂತಲೂ ಮಹತ್ತರ ಅಪರಾಧವಾಗಿರುತ್ತದೆ ಮತ್ತು ಕ್ಷೋಭೆ ರಕ್ತ ಪಾತಕ್ಕಿಂತಲೂ ಮಹತ್ತರ ಅಪರಾಧವಾಗಿರುತ್ತದೆ.[70] ಅವರಂತು ನಿಮ್ಮೊಂದಿಗೆ ಕಾದಾಡುತ್ತಲೇ ಇರುವರು. ಅವರಿಂದ ಸಾಧ್ಯವೆನಿಸಿದರೆ ನಿಮ್ಮನ್ನು ನಿಮ್ಮ ಧರ್ಮದಿಂದ ಮರಳಿಸಿ ಕೊಂಡೊಯ್ಯುವರು. (ಇದನ್ನು ಚೆನ್ನಾಗಿ ಅರಿತಿರಬೇಕು) ನಿಮ್ಮಲ್ಲಿ

يَسْـَٔلُوْنَكَ عَنِ الشَّهْرِ الْحَرَامِ قِتَالٍ فِيْهِ ؕ
قُلْ قِتَالٌ فِيْهِ كَبِيْرٌ ؕ وَصَدٌّ عَنْ سَبِيْلِ
اللّٰهِ وَكُفْرٌۢ بِهٖ وَالْمَسْجِدِ الْحَرَامِ ۗ وَاِخْرَاجُ
اَهْلِهٖ مِنْهُ اَكْبَرُ عِنْدَ اللّٰهِ ۚ وَالْفِتْنَةُ
اَكْبَرُ مِنَ الْقَتْلِ ؕ وَلَا يَزَالُوْنَ يُقَاتِلُوْنَكُمْ
حَتّٰى يَرُدُّوْكُمْ عَنْ دِيْنِكُمْ اِنِ اسْتَطَاعُوْا ؕ
وَمَنْ يَّرْتَدِدْ مِنْكُمْ عَنْ دِيْنِهٖ فَيَمُتْ وَ
هُوَ كَافِرٌ فَاُولٰٓئِكَ حَبِطَتْ اَعْمَالُهُمْ فِى
الدُّنْيَا وَالْاٰخِرَةِ ۚ وَاُولٰٓئِكَ اَصْحٰبُ النَّارِ ۚ

70. ಈ ವಿಷಯವನ್ನು ಒಂದು ಘಟನೆಯ ಹಿನ್ನೆಲೆಯಲ್ಲಿ ಪ್ರಸ್ತಾಪಿಸಲಾಗಿದೆ. ಹಿ. ಶ. 2ರ ರಜಬ್ ತಿಂಗಳಲ್ಲಿ ಪ್ರವಾದಿವರ್ಯರು(ಸ) ಎಂಟು ಜನರನ್ನೊಳಗೊಂಡ ತಂಡವನ್ನು ನಖ್ಲಃ (ಮಕ್ಕಾ ಮತ್ತು ತಾಯಿಫ್‌ನ ನಡುವಿನ ಒಂದು ಸ್ಥಳ) ಎಂಬಲ್ಲಿಗೆ ಕಳುಹಿಸಿ, ಕುರೈಶರ ಚಲನವಲನ ಮತ್ತು ಅವರ ಮುಂದಿನ ಯೋಜನೆಗಳ ಕುರಿತು ಮಾಹಿತಿ ಸಂಗ್ರಹಿಸುವಂತೆ ಆದೇಶಿಸಿದರು. ಆದರೆ ಅವರು ಯುದ್ಧದ ಅನುಮತಿ ಕೊಟ್ಟಿರಲಿಲ್ಲ. ಅವರಿಗೆ ದಾರಿಯಲ್ಲಿ ಒಂದು ಚಿಕ್ಕ ವ್ಯಾಪಾರಿ ತಂಡ ಎದುರಾದಾಗ ಅವರು ಅದರ ಮೇಲೆ ಮುಗಿಬಿದ್ದು, ಒಬ್ಬ ವ್ಯಕ್ತಿಯನ್ನು ಕೊಲೆಗೈದು ಉಳಿದವರನ್ನು ಸಂಪತ್ತಿನ ಸಮೇತ ಸೆರೆ ಹಿಡಿದು ಮಕ್ಕಾಕ್ಕೆ ತಂದರು. ಈ ಘಟನೆ ರಜಬ್ ತಿಂಗಳ ಅಂತ್ಯ ಮತ್ತು ಶಅಬಾನ್‌ನ ಆರಂಭದ ವೇಳೆ ನಡೆದಿತ್ತು. ಆದ್ದರಿಂದ ಆಕ್ರಮಣವು ಪವಿತ್ರ ತಿಂಗಳೆನಿಸಿರುವ

ಯಾವನಾದರೂ ಧರ್ಮದಿಂದ ವಿಮುಖನಾದರೆ ಅವಿಶ್ವಾಸಾವಸ್ಥೆಯಲ್ಲಿ ಪ್ರಾಣ ಬಿಟ್ಟರೆ, ಅವನ ಕರ್ಮಗಳು ಇಹಪರಗಳೆರಡರಲ್ಲೂ ವ್ಯರ್ಥವಾಗಿ ಹೋಗುವುವು. ಇಂತಹವ ರೆಲ್ಲರೂ ನರಕವಾಸಿಗಳು ಮತ್ತು ಅವರು ಚಿರಕಾಲ ನರಕದಲ್ಲೇ ಉಳಿಯುವರು.

هُمْ فِيهَا خٰلِدُونَ ﴿٢١٧﴾

218. ಇದಕ್ಕೆ ವ್ಯತಿರಿಕ್ತವಾಗಿ ವಿಶ್ವಾಸವಿರಿಸಿದವರೂ ಅಲ್ಲಾಹನ ಮಾರ್ಗ ದಲ್ಲಿ ಮನೆಮಾರನ್ನು ಬಿಟ್ಟವರೂ ಜಿಹಾದ್ ನಡೆಸಿದವರೂ[71] ಅಲ್ಲಾಹನ ಕೃಪೆಯನ್ನು ಅರ್ಹವಾಗಿ ನಿರೀಕ್ಷಿಸುವವರಾಗಿರುತ್ತಾರೆ ಮತ್ತು ಅಲ್ಲಾಹನು ಅವರಿಂದ ಸಂಭವಿಸಿ ಹೋದ ಲೋಪ ದೋಷಗಳನ್ನು ಕ್ಷಮಿಸುವವನೂ ತನ್ನ ಕರುಣೆಯಿಂದ ಅವರನ್ನು ಅನುಗ್ರಹಿಸುವವನೂ ಆಗಿರುತ್ತಾನೆ.

إِنَّ الَّذِينَ آمَنُوا وَالَّذِينَ هَاجَرُوا وَ
جٰهَدُوا فِي سَبِيلِ اللّٰهِ ۙ أُولٰٓئِكَ يَرْجُونَ
رَحْمَتَ اللّٰهِ ۗ وَاللّٰهُ غَفُورٌ رَّحِيمٌ ﴿٢١٨﴾

219. ಮದ್ಯಪಾನ ಮತ್ತು ಜೂಜಾಟದ ಬಗ್ಗೆ ಏನು ಆದೇಶವಿದೆಯೆಂದು ಕೇಳುತ್ತಾರೆ. ಹೇಳಿರಿ! ಅವೆರಡರಲ್ಲೂ ಮಹತ್ತರವಾದ ಕೇಡಿದೆ. ಅವುಗಳಲ್ಲಿ ಜನರಿಗೆ ಕೆಲವು ಪ್ರಯೋಜನಗಳು ಇದ್ದರೂ ಅವುಗಳಿಂದಾಗುವ ಹಾನಿಯು ಪ್ರಯೋಜನಗಳಿಗಿಂತ ಬಹಳಷ್ಟು ಹೆಚ್ಚು.[72] ನಾವು ದೇವ ಮಾರ್ಗದಲ್ಲಿ ಏನನ್ನು ಖರ್ಚು ಮಾಡಬೇಕೆಂದು ಕೇಳುತ್ತಾರೆ. "ನಿಮ್ಮ ಅವಶ್ಯಕತೆಗಿಂತ ಮಿಕ್ಕಿರುವುದನ್ನು"[73] ಎಂದು ಹೇಳಿರಿ.

يَسْـَٔلُونَكَ عَنِ الْخَمْرِ وَالْمَيْسِرِ ۖ قُلْ
فِيهِمَآ إِثْمٌ كَبِيرٌ وَّمَنَافِعُ لِلنَّاسِ وَإِثْمُهُمَآ
أَكْبَرُ مِن نَّفْعِهِمَا ۗ وَيَسْـَٔلُونَكَ مَاذَا يُنفِقُونَ ۬ۖ
قُلِ الْعَفْوَ ۗ كَذٰلِكَ يُبَيِّنُ اللّٰهُ لَكُمُ الْآيٰتِ
لَعَلَّكُمْ تَتَفَكَّرُونَ ﴿٢١٩﴾

220. ನೀವು ಇಹ-ಪರಗಳೆರಡರ ಬಗ್ಗೆಯೂ ಚಿಂತೆಯುಳ್ಳವರಾಗ ಬಹುದೆಂದು ನಿರೀಕ್ಷಿಸಿ ಅಲ್ಲಾಹನು ನಿಮಗೆ ಈ ರೀತಿಯಲ್ಲಿ

فِي الدُّنْيَا وَالْآخِرَةِ ۗ وَيَسْـَٔلُونَكَ عَنِ الْيَتٰمٰى ۖ

'ರಜಬ್'ನಲ್ಲೇ ನಡೆಯಿತೇನೋ ಎನ್ನುವ ಸಂಶಯ ಹುಟ್ಟಿಸುವಂತಿತ್ತು. ಆದ್ದರಿಂದ ಕುರೈಶರು ಮತ್ತು ಅವರೊಂದಿಗೆ ತೆರೆಮರೆಯ ಸಂಬಂಧ ಹೊಂದಿದ್ದ ಮದೀನಾದ ಯಹೂದಿಯರು ಮತ್ತು ಕಪಟವಿಶ್ವಾಸಿಗಳು ಮುಸ್ಲಿಮರ ವಿರುದ್ಧ ಅಪಪ್ರಚಾರ ನಡೆಸಲು ಈ ಘಟನೆಗೆ ಸಾಕಷ್ಟು ಪ್ರಚಾರ ನೀಡಿದರು. ನೋಡಲು ಇವರು ಮಹಾ ದೇವಭಕ್ತರು, ಆದರೆ ಇವರ ಅವಸ್ಥೆ ನೋಡಿದರೆ ಪವಿತ್ರ ತಿಂಗಳಲ್ಲೂ ರಕ್ತಪಾತ ಮಾಡಲು ಹಿಂಜರಿಯುವುದಿಲ್ಲ ಎನ್ನುವ ಆಕ್ಷೇಪಗಳನ್ನು ಆರಂಭಿಸಿದರು. ಈ ಸೂಕ್ತದಲ್ಲಿ ಆ ಆಕ್ಷೇಪಗಳಿಗೆ ಉತ್ತರ ಕೊಡಲಾಗಿದೆ.

71. ಜಿಹಾದ್, ಎಂದರೆ ನಿರ್ದಿಷ್ಟ ಉದ್ದೇಶದ ಸಾಧನೆಗಾಗಿ ತನ್ನ ಗರಿಷ್ಠ ಶಕ್ತಿಯನ್ನು ವಿನಿಯೋಗಿಸುವುದಾಗಿದೆ. ಇದು ಕೇವಲ ಯುದ್ಧವೆಂಬ ಅರ್ಥವನ್ನು ಹೊಂದಿರುವ ಪದವಲ್ಲ. ಯುದ್ಧಕ್ಕೆ 'ಕಿತಾಲ್' ಎಂಬ ಪದವನ್ನು ಉಪಯೋಗಿಸಲಾಗಿದೆ. 'ಜಿಹಾದ್' ಎಂಬ ಪದ ಅದಕ್ಕಿಂತ ವಿಶಾಲಾರ್ಥವನ್ನು ಹೊಂದಿದೆ. ಯುದ್ಧವೂ ಸೇರಿದಂತೆ ಎಲ್ಲಾ ಬಗೆಯ ಹೋರಾಟ ಅದರಲ್ಲಿ ಒಳಗೊಂಡಿದೆ.

72. ಇದು ಮದ್ಯಪಾನ ಮತ್ತು ಜೂಜಿನ ಕುರಿತು ಇರುವ ಮೊದಲ ಆಜ್ಞೆಯಾಗಿದೆ. ಇದರಲ್ಲಿ ಆ ಕುರಿತು ಅಸಮಾಧಾನವನ್ನಷ್ಟೇ ಪ್ರಕಟಿಸಲಾಗಿದೆ. ಮುಂದೆ ಅನ್ನಿಸಾ ಅಧ್ಯಾಯದ ಸೂಕ್ತ 43 ಮತ್ತು ಅಲ್ ಮಾಯಿದಃ ಅಧ್ಯಾಯದ ಸೂಕ್ತ 90ರಲ್ಲಿ ಅನಂತರದ ಆದೇಶಗಳು ಬಂದಿವೆ.

73. ಈ ಸೂಕ್ತದ ಕುರಿತು ಚಿತ್ರ-ವಿಚಿತ್ರ ಅರ್ಥಗಳನ್ನು ಕಲ್ಪಿಸಲಾಗುತ್ತಿದೆ. ವಾಸ್ತವದಲ್ಲಿ ಸೂಕ್ತದಲ್ಲಿ ಬಂದಿರುವ ಶಬ್ದಗಳಿಂದ

ಆದೇಶಗಳನ್ನು ಸುಸ್ಪಷ್ಟವಾಗಿ ವಿವರಿಸುತ್ತಾನೆ. ಅನಾಥರೊಂದಿಗೆ ಎಂತಹ ವ್ಯವಹಾರ ಕೈಗೊಳ್ಳಬೇಕೆಂದು ನಿಮ್ಮೊಡನೆ ಕೇಳುತ್ತಾರೆ. ಹೇಳಿರಿ: ಅವರಿಗೆ ಹಿತವಾಗುವಂತಹ ವ್ಯವಹಾರ ಕೈಗೊಳ್ಳುವುದೇ ಉತ್ತಮ. ನೀವು ಅವರೊಂದಿಗೆ ಸಹಬಾಳುವೆ ನಡೆಸುವುದರಲ್ಲಿ ಅಡ್ಡಿಯಿಲ್ಲ. ಅವರು ನಿಮ್ಮ ಸಹೋದರರೇ ತಾನೆ. ಅಹಿತ ಮಾಡುವವರ ಮತ್ತು ಹಿತ ಮಾಡುವವರ ವಿವರ ಅಲ್ಲಾಹನಿಗೆ ತಿಳಿದೇ ಇದೆ. ಅಲ್ಲಾಹನು ಇಚ್ಛಿಸುತ್ತಿದ್ದರೆ ಈ ವಿಷಯದಲ್ಲಿ ನಿಮ್ಮೊಂದಿಗೆ ಕಠಿಣತೆಯನ್ನು ತೋರಿಸುತ್ತಿದ್ದನು. ಆದರೆ, ಅವನು ಸಾಮರ್ಥ್ಯವಿರುವವನಾಗಿರುವುದರೊಂದಿಗೆ ಯುಕ್ತಿಪೂರ್ಣನೂ ಆಗಿರುತ್ತಾನೆ.

قُلْ إِصْلَاحٌ لَّهُمْ خَيْرٌ ۖ وَإِنْ تُخَالِطُوهُمْ فَإِخْوَانُكُمْ
وَاللَّهُ يَعْلَمُ الْمُفْسِدَ مِنَ الْمُصْلِحِ ۚ وَلَوْ شَاءَ
اللَّهُ لَأَعْنَتَكُمْ ۚ إِنَّ اللَّهَ عَزِيزٌ حَكِيمٌ ﴿٢٢٠﴾

221. ಬಹುದೇವವಿಶ್ವಾಸಿನಿಯರು ಸತ್ಯವಿಶ್ವಾಸವನ್ನು ಸ್ವೀಕರಿಸುವವರೆಗೂ ನೀವು ಅವರನ್ನು ವಿವಾಹವಾಗಬಾರದು. ಓರ್ವ ಸತ್ಯವಿಶ್ವಾಸಿನಿಯಾದ ದಾಸಿಯು ಓರ್ವ ಬಹುದೇವ ವಿಶ್ವಾಸಿನಿಯಾದ ಕುಲೀನ ಸ್ತ್ರೀಗಿಂತ ಉತ್ತಮಳು. ಅವಳು ನಿಮಗೆ ಎಷ್ಟು ಮೆಚ್ಚಿಕೆಯವಳೇ ಆಗಿರಲಿ ಮತ್ತು ಬಹುದೇವ ವಿಶ್ವಾಸಿ ಪುರುಷರು ಸತ್ಯವಿಶ್ವಾಸವನ್ನು ಸ್ವೀಕರಿಸುವವರೆಗೂ ನಿಮ್ಮ ಸ್ತ್ರೀಯರನ್ನು ಅವರಿಗೆ ವಿವಾಹ ಮಾಡಿಕೊಡಬಾರದು. ಓರ್ವ ಸತ್ಯವಿಶ್ವಾಸಿ ಗುಲಾಮನು ಬಹುದೇವ ವಿಶ್ವಾಸಿ ಕುಲೀನ ಪುರುಷನಿಗಿಂತ ಉತ್ತಮ. ಅವನು ನಿಮಗೆ ಅದೆಷ್ಟು ಮೆಚ್ಚಿಕೆಯವನೇ ಆಗಿರಲಿ. ಇವರು ನಿಮ್ಮನ್ನು ಅಗ್ನಿಯ ಕಡೆಗೆ ಆಹ್ವಾನಿಸುತ್ತಾರೆ ಮತ್ತು ಅಲ್ಲಾಹನು ತನ್ನ ಅನುಜ್ಞೆಯಿಂದ ನಿಮ್ಮನ್ನು ಸ್ವರ್ಗ ಹಾಗೂ ಪಾಪ ವಿಮೋಚನೆಯ ಕಡೆಗೆ ಆಹ್ವಾನಿಸುತ್ತಾನೆ ಮತ್ತು ಜನರು ಬೋಧನೆ ಸ್ವೀಕರಿಸಿ ಪಾಠ ಕಲಿಯಲೆಂದು ಅವನು ತನ್ನ ಆದೇಶಗಳನ್ನು ಅವರ ಮುಂದೆ ವಿವರಿಸುತ್ತಾನೆ.

وَلَا تَنْكِحُوا الْمُشْرِكَاتِ حَتَّىٰ يُؤْمِنَّ ۚ وَلَأَمَةٌ
مُؤْمِنَةٌ خَيْرٌ مِنْ مُشْرِكَةٍ وَلَوْ أَعْجَبَتْكُمْ ۗ
وَلَا تُنْكِحُوا الْمُشْرِكِينَ حَتَّىٰ يُؤْمِنُوا ۚ وَلَعَبْدٌ
مُؤْمِنٌ خَيْرٌ مِنْ مُشْرِكٍ وَلَوْ أَعْجَبَكُمْ ۗ أُولَٰئِكَ
يَدْعُونَ إِلَى النَّارِ ۖ وَاللَّهُ يَدْعُو إِلَى الْجَنَّةِ
وَالْمَغْفِرَةِ بِإِذْنِهِ ۖ وَيُبَيِّنُ آيَاتِهِ لِلنَّاسِ
لَعَلَّهُمْ يَتَذَكَّرُونَ ﴿٢٢١﴾

222. ಆರ್ತವ(ಋತುಸ್ರಾವ)ದ ಕುರಿತು ಅವರು ನಿಮ್ಮೊಡನೆ ಕೇಳುತ್ತಾರೆ. ಹೇಳಿರಿ: ಅದೊಂದು ಮಾಲಿನ್ಯಾವಸ್ಥೆ. ಆರ್ತವಾವಸ್ಥೆಯಲ್ಲಿ ಸ್ತ್ರೀಯರಿಂದ ದೂರವಿರಿ. ಅವರು ಶುದ್ಧರಾಗುವ ವರೆಗೆ ಅವರನ್ನು

وَيَسْأَلُونَكَ عَنِ الْمَحِيضِ ۖ قُلْ هُوَ أَذًى
فَاعْتَزِلُوا النِّسَاءَ فِي الْمَحِيضِ ۖ وَلَا تَقْرَبُوهُنَّ

ವ್ಯಕ್ತವಾಗುವುದೇನೆಂದರೆ ಜನರು ತಮ್ಮ ಸೊತ್ತಿನ ಒಡೆಯರಾಗಿದ್ದರು. ಅವರು ದೇವಸಂಪ್ರೀತಿ ಗಳಿಸಲು ತಾವೇನನ್ನು ವ್ಯಯಿಸಬೇಕೆಂದು ಪ್ರಶ್ನಿಸುತ್ತಿದ್ದರು. ಅದಕ್ಕುತ್ತರವಾಗಿ ಅವರಿಗೆ ಮೊದಲು ನಿಮ್ಮ ಜೀವನಾವಶ್ಯಕತೆಗಳನ್ನು ಈಡೇರಿಸಿಕೊಳ್ಳಿ. ಮಿಕ್ಕುಳಿದಿರುವುದನ್ನು ಅಲ್ಲಾಹನ ಮಾರ್ಗದಲ್ಲಿ ವ್ಯಯಿಸಿರಿ ಎಂದು ಹೇಳಲಾಗಿದೆ. ಇದು ದಾಸನು ಅಲ್ಲಾಹನ ಮಾರ್ಗದಲ್ಲಿ ಇಚ್ಛಾಪೂರ್ವಕ ಮಾಡುವ ಖರ್ಚಾಗಿದೆ.

ಸಮೀಪಿಸಬೇಡಿರಿ.[74] ಅವರು ಶುದ್ಧರಾದ ಬಳಿಕ ನಿಮಗೆ ಅಲ್ಲಾಹನು ವಿಧಿಸಿದ ಪ್ರಕಾರ ಅವರ ಬಳಿ ಹೋಗಿರಿ. ನಿಶ್ಚಯವಾಗಿಯೂ ಪಾಪಗಳಿಂದ ಪಶ್ಚಾತ್ತಾಪ ಪಡುವವರನ್ನೂ ಶುದ್ಧಾಚಾರವಿರಿಸುವವರನ್ನೂ ಅಲ್ಲಾಹನು ಇಷ್ಟಪಡುತ್ತಾನೆ.

حَتّٰى يَطْهُرْنَ ۚ فَاِذَا تَطَهَّرْنَ فَاْتُوْهُنَّ مِنْ حَيْثُ اَمَرَكُمُ اللّٰهُ ۗ اِنَّ اللّٰهَ يُحِبُّ التَّوَّابِيْنَ وَيُحِبُّ الْمُتَطَهِّرِيْنَ ﴿۲۲۲﴾

223. ನಿಮ್ಮ ಸ್ತ್ರೀಯರು ನಿಮ್ಮ ಹೊಲಗಳಾಗಿರುತ್ತಾರೆ. ನಿಮ್ಮ ಹೊಲದಲ್ಲಿ ಇಷ್ಟಬಂದಂತೆ ಹೋಗುವ ಅಧಿಕಾರ ನಿಮಗಿದೆ. ಆದರೆ ನಿಮ್ಮ ಭವಿಷ್ಯದ ಕುರಿತು ಚಿಂತಿಸಿರಿ ಮತ್ತು ಅಲ್ಲಾಹನ ಭಯವಿರಿಸಿಕೊಳ್ಳಿರಿ.[75] ಒಂದು ದಿನ ಆತನನ್ನು ಭೇಟಿಯಾಗಲಿಕ್ಕಿದೆ ಎಂಬುದನ್ನು ಚೆನ್ನಾಗಿ ತಿಳಿದುಕೊಂಡಿರಬೇಕು ಮತ್ತು ಓ ಪ್ರವಾದಿಯವರೇ, ನಿಮ್ಮ ಬೋಧನೆಯನ್ನು ಸ್ವೀಕರಿಸಿದವರಿಗೆ ಯಶಸ್ಸಿನ ಶುಭವಾರ್ತೆಯನ್ನು ತಿಳಿಸಿಬಿಡಿರಿ.

نِسَآؤُكُمْ حَرْثٌ لَّكُمْ ۪ فَاْتُوْا حَرْثَكُمْ اَنّٰى شِئْتُمْ ۫ وَقَدِّمُوْا لِاَنْفُسِكُمْ ۗ وَاتَّقُوا اللّٰهَ وَاعْلَمُوْٓا اَنَّكُمْ مُّلٰقُوْهُ ۗ وَبَشِّرِ الْمُؤْمِنِيْنَ ﴿۲۲۳﴾

224. ಒಳಿತು, ಧರ್ಮನಿಷ್ಠೆ ಮತ್ತು ಜನರ ಸುಧಾರಣೆಯ ಕಾರ್ಯಗಳಿಂದ ದೂರ ಸರಿಯುವ ಉದ್ದೇಶದಿಂದ ಮಾಡುವ ಶಪಥಗಳಿಗಾಗಿ ಅಲ್ಲಾಹನ ನಾಮವನ್ನು ಉಪಯೋಗಿಸಬೇಡಿರಿ. ಅಲ್ಲಾಹನು ಸರ್ವವನ್ನೂ ಆಲಿಸುವವನೂ ಅರಿಯುವವನೂ ಆಗಿರುತ್ತಾನೆ.

وَلَا تَجْعَلُوا اللّٰهَ عُرْضَةً لِّاَيْمَانِكُمْ اَنْ تَبَرُّوْا وَتَتَّقُوْا وَتُصْلِحُوْا بَيْنَ النَّاسِ ۗ وَاللّٰهُ سَمِيْعٌ عَلِيْمٌ ﴿۲۲۴﴾

225. ಅನೈಚ್ಛಿಕವಾಗಿ ಅರ್ಥಶೂನ್ಯ ಶಪಥಗೈದುದಕ್ಕಾಗಿ ಅಲ್ಲಾಹನು ನಿಮ್ಮನ್ನು ಹಿಡಿಯುವುದಿಲ್ಲ. ಆದರೆ ಅವನು, ನೀವು ಹೃತ್ಪೂರ್ವಕ ಮಾಡಿದ ಶಪಥಗಳ ವಿಚಾರಣೆ ನಡೆಸಿಯೇ ತೀರುವನು. ಅಲ್ಲಾಹನು ಅತ್ಯಂತ ಕ್ಷಮಾದಾನಿಯೂ ಸಹನಶೀಲನೂ ಆಗಿರುತ್ತಾನೆ.

لَا يُؤَاخِذُكُمُ اللّٰهُ بِاللَّغْوِ فِيْٓ اَيْمَانِكُمْ وَلٰكِنْ يُّؤَاخِذُكُمْ بِمَا كَسَبَتْ قُلُوْبُكُمْ ۗ وَاللّٰهُ غَفُوْرٌ حَلِيْمٌ ﴿۲۲۵﴾

226. ತಮ್ಮ ಪತ್ನಿಯರನ್ನು ಸಮೀಪಿಸಲಾರೆವೆಂದು ಶಪಥ ಮಾಡಿ ಕೊಂಡವರಿಗೆ ನಾಲ್ಕು ತಿಂಗಳುಗಳ ಕಾಲಾವಧಿ ಇದೆ.[76] ಅವರು ಒಲಿದುಕೊಂಡರೆ ಅಲ್ಲಾಹನು ಕ್ಷಮಿಸುವವನೂ ಕರುಣಾನಿಧಿಯೂ ಆಗಿರುತ್ತಾನೆ.

لِلَّذِيْنَ يُؤْلُوْنَ مِنْ نِّسَآئِهِمْ تَرَبُّصُ اَرْبَعَةِ اَشْهُرٍ ۚ فَاِنْ فَآءُوْ فَاِنَّ اللّٰهَ غَفُوْرٌ رَّحِيْمٌ ﴿۲۲۶﴾

---

74. ಅರ್ಥಾತ್- ಆ ಸಂದರ್ಭದಲ್ಲಿ ಅವರೊಂದಿಗೆ ಸಂಸರ್ಗ ನಡೆಸದಿರಿ.

75. ಸಮಗ್ರ ಪದಗಳಿವು. ಇವುಗಳಿಂದ ಎರಡು ಅರ್ಥಗಳು ಹೊರಡುತ್ತವೆ. ಎರಡಕ್ಕೂ ಸಮಾನ ಪ್ರಾಧಾನ್ಯತೆವಿದೆ. ಮೊದಲನೆಯದಾಗಿ ನಿಮ್ಮ ವಂಶವನ್ನು ಕಾಪಾಡಲು ಪ್ರಯತ್ನಿಸಿರಿ. ಆ ಮೂಲಕ ನೀವು ಲೋಕವನ್ನು ತ್ಯಜಿಸುವುದಕ್ಕೆ ಮೊದಲು ನಿಮ್ಮ ಜಾಗದಲ್ಲಿ ಕೆಲಸ ಮಾಡುವ ಇತರರು ಹುಟ್ಟಿಕೊಳ್ಳುವರು. ಎರಡನೆಯದಾಗಿ ನೀವು ನಿಮ್ಮ ಸ್ಥಾನವನ್ನು ವಹಿಸಿಕೊಡಲಿರುವ ಆ ಮುಂದಿನ ಪೀಳಿಗೆಯನ್ನು ಧರ್ಮ, ನೀತಿ ಮತ್ತು ಮಾನವೀಯತೆಯ ಮುತ್ತುಗಳಿಂದ ಶೃಂಗರಿಸಲು ಪ್ರಯತ್ನಿಸಿರಿ.

76. ಶರೀಅತ್‌ನ ಪಾರಿಭಾಷಿಕದಲ್ಲಿ ಇದನ್ನು 'ಈಲಾ' ಎನ್ನಲಾಗಿದೆ. ಪತಿ-ಪತ್ನಿಯರ ನಡುವಿನ ಸಂಬಂಧ ಯಾವಾಗಲೂ ಸುಗಮವಾಗಿರಲು ಸಾಧ್ಯವಿಲ್ಲ. ಸಂಬಂಧ ಕೆಡಲು ಕಾರಣಗಳು ಉಂಟಾಗುತ್ತಲೇ ಇರುತ್ತವೆ. ಆದರೆ ವಿಧ್ಯುಕ್ತವಾಗಿ ವೈವಾಹಿಕ ಸಂಬಂಧದಲ್ಲಿ ಬೆಸೆದುಕೊಂಡಿದ್ದರೂ, ಕಾರ್ಯತಃ ಅವರು ಪತಿ-ಪತ್ನಿಯರೇ ಅಲ್ಲವೇನೋ ಎನ್ನುವ ರೀತಿಯಲ್ಲಿ ಸಂಬಂಧ ಕೆಡುವುದು ಶರೀಅತ್‌ನ

227. ಮತ್ತು ಅವರು ತಲಾಕಿನ (ವಿವಾಹ ವಿಚ್ಛೇದನದ) ನಿರ್ಧಾರವನ್ನೇ ಕೈಗೊಂಡಿದ್ದರೆ, ಅಲ್ಲಾಹನು ಎಲ್ಲವನ್ನೂ ಆಲಿಸುವವನೂ ಅರಿಯುವವನೂ ಆಗಿರುತ್ತಾನೆಂಬುದನ್ನು ತಿಳಿದಿರಲಿ.[77]

وَإِنْ عَزَمُوا الطَّلَاقَ فَإِنَّ اللَّهَ سَمِيعٌ عَلِيمٌ ﴿٢٢٧﴾

228. ತಲಾಕ್ ಕೊಡಲ್ಪಟ್ಟ ಸ್ತ್ರೀಯರು ಮೂರು ಬಾರಿ ಮುಟ್ಟಾಗುವ ತನಕ ತಮ್ಮನ್ನು ತಡೆದಿರಿಸಿಕೊಳ್ಳಬೇಕು ಮತ್ತು ಅಲ್ಲಾಹನು ಅವರ ಗರ್ಭಾಶಯದೊಳಗೆ ಸೃಷ್ಟಿಸಿರುವುದನ್ನು ಬಚ್ಚಿಡುವುದು ಅವರಿಗೆ ಧರ್ಮಬದ್ಧವಲ್ಲ. ಅವರು ಅಲ್ಲಾಹ್ ಮತ್ತು ನಿರ್ಣಾಯಕ ದಿನದ ಮೇಲೆ ವಿಶ್ವಾಸವಿರಿಸುವವರಾಗಿದ್ದರೆ ಹಾಗೆ ಎಂದಿಗೂ ಮಾಡಬಾರದು. ಅವರ ಪತಿಯಂದಿರು ಸಂಬಂಧವನ್ನು ಸುಗಮಗೊಳಿಸಿಕೊಳ್ಳಲುದ್ಯುಕ್ತರಾಗಿದ್ದರೆ, ಈ 'ಇದ್ದತ್'ನ ಕಾಲಾವಧಿಯಲ್ಲಿ ಅವರನ್ನು ಪುನಃ ತಮ್ಮ ಪತ್ನಿತ್ವಕ್ಕೆ ಮರಳಿಸಿಕೊಳ್ಳಲು ಹಕ್ಕುಳ್ಳವರಾಗಿರುತ್ತಾರೆ.[78] ಪುರುಷರಿಗೆ ಸ್ತ್ರೀಯರ ಮೇಲೆ ಹಕ್ಕಿರುವ ಹಾಗೆಯೇ ಸ್ತ್ರೀಯರಿಗೂ ಪುರುಷರ ಮೇಲೆ ನ್ಯಾಯೋಚಿತ ಹಕ್ಕು ಇದೆ. ಆದರೆ ಅವರ ಮೇಲೆ ಪುರುಷರಿಗೆ ಒಂದು ಪದವಿ ಇದೆ ಮತ್ತು ಅಲ್ಲಾಹನು ಮಹಾ ಪ್ರತಾಪಶಾಲಿಯೂ ವಿವೇಕಪೂರ್ಣನೂ ಆಗಿರುತ್ತಾನೆ.

وَالْمُطَلَّقَاتُ يَتَرَبَّصْنَ بِأَنْفُسِهِنَّ ثَلَاثَةَ قُرُوءٍ ۚ
وَلَا يَحِلُّ لَهُنَّ أَنْ يَكْتُمْنَ مَا خَلَقَ اللَّهُ فِي
أَرْحَامِهِنَّ إِنْ كُنَّ يُؤْمِنَّ بِاللَّهِ وَالْيَوْمِ الْآخِرِ ۚ
وَبُعُولَتُهُنَّ أَحَقُّ بِرَدِّهِنَّ فِي ذَٰلِكَ إِنْ أَرَادُوا
إِصْلَاحًا ۚ وَلَهُنَّ مِثْلُ الَّذِي عَلَيْهِنَّ بِالْمَعْرُوفِ ۚ
وَلِلرِّجَالِ عَلَيْهِنَّ دَرَجَةٌ ۗ وَاللَّهُ عَزِيزٌ حَكِيمٌ ﴿٢٢٨﴾

229. ತಲಾಕ್ (ವಿವಾಹ ವಿಚ್ಛೇದನ) ಎರಡು ಸಲ. ಅನಂತರ ನ್ಯಾಯೋಚಿತವಾಗಿ ಸ್ತ್ರೀಯನ್ನು ತಡೆದಿರಿಸಿಕೊಳ್ಳಬೇಕು ಅಥವಾ ಯೋಗ್ಯ ರೀತಿಯಿಂದ ಅವಳನ್ನು ಬಿಡುಗಡೆಗೊಳಿಸಬೇಕು.[79] ಬಿಡುಗಡೆಗೊಳಿಸುವಾಗ ನೀವು ಅವರಿಗೆ (ಪತ್ನಿಯರಿಗೆ) ಕೊಟ್ಟಿದ್ದ ಸಾಧನಗಳ ಪೈಕಿ ಏನನ್ನೂ ಮರಳಿ ಪಡೆಯುವುದು ನಿಮಗೆ ಧರ್ಮಸಮ್ಮತ ಅಲ್ಲ. ದಂಪತಿಗಳಿಗೆ ಅಲ್ಲಾಹನ ಮೇರೆಗಳಲ್ಲೇ ನೆಲೆನಿಲ್ಲಲು ಅಸಾಧ್ಯವಾದೀತೆಂಬ ಸಂದೇಹ ಸ್ಥಿತಿಯು ಇದಕ್ಕೆ

الطَّلَاقُ مَرَّتَانِ ۖ فَإِمْسَاكٌ بِمَعْرُوفٍ أَوْ تَسْرِيحٌ
بِإِحْسَانٍ ۗ وَلَا يَحِلُّ لَكُمْ أَنْ تَأْخُذُوا مِمَّا
آتَيْتُمُوهُنَّ شَيْئًا إِلَّا أَنْ يَخَافَا أَلَّا يُقِيمَا حُدُودَ
اللَّهِ ۖ فَإِنْ خِفْتُمْ أَلَّا يُقِيمَا حُدُودَ اللَّهِ فَلَا
جُنَاحَ عَلَيْهِمَا فِيمَا افْتَدَتْ بِهِ ۗ تِلْكَ

ದೃಷ್ಟಿಯಲ್ಲಿ ಅರೋಚಕವಾಗಿದೆ. ಸಂಬಂಧ ಈ ರೀತಿಯಲ್ಲಿ ಕೆಟ್ಟು ಹೋದರೆ ಅಲ್ಲಾಹನು ನಾಲ್ಕು ತಿಂಗಳ ಕಾಲಾವಧಿಯನ್ನು ಗೊತ್ತುಪಡಿಸಿದ್ದಾನೆ. ಈ ಅವಧಿಯಲ್ಲಿ ತಮ್ಮ ಸಂಬಂಧವನ್ನು ಸುಧಾರಿಸಿಕೊಳ್ಳಿರಿ ಅಥವಾ ದಾಂಪತ್ಯ ಸಂಬಂಧವನ್ನು ಕೊನೆಗೊಳಿಸಿರಿ. ಆ ಮೂಲಕ ಇಬ್ಬರೂ ಪರಸ್ಪರ ಸ್ವತಂತ್ರರಾಗಿ ತಮಗೆ ಸರಿಹೊಂದುವವರೊಂದಿಗೆ ವಿವಾಹ ಮಾಡಿಕೊಳ್ಳಬಹುದಾಗಿದೆ.

77. ಅರ್ಥಾತ್- ಅನ್ಯಾಯವಾಗಿ ನೀವು ಪತ್ನಿಯನ್ನು ತೊರೆದಿದ್ದರೆ ಅಲ್ಲಾಹನಿಂದ ನಿರ್ಭಯರಾಗಿ ಇರಬೇಡಿರಿ. ಅವನು ನಿಮ್ಮ ಅತಿಕ್ರಮದ ಬಗ್ಗೆ ಅಜ್ಞನಾಗಿಲ್ಲ.

78. ಪತಿಯು ಪತ್ನಿಗೆ ಒಂದು ಅಥವಾ ಎರಡು ತಲಾಕ್ ನೀಡಿರುವ ಸಂದರ್ಭದಲ್ಲಿ ಈ ಆಜ್ಞೆ ಅನ್ವಯವಾಗುತ್ತದೆ. ಆಗ ಅದು 'ತಲಾಕ್ ರಜಈ' ಎನಿಸಿಕೊಳ್ಳುತ್ತದೆ. ಇದ್ದತ್‌ನ ಅವಧಿಯಲ್ಲಿ ಪತಿ ಪುನಃ ಪತ್ನಿಯನ್ನು ಸೇರಬಹುದು.

79. ಈ ಸೂಕ್ತದ ಮೂಲಕ ವ್ಯಕ್ತವಾಗುವುದೇನೆಂದರೆ ಪತಿ ತನ್ನ ವಿವಾಹ ಬಂಧನದಲ್ಲಿರುವ ಪತ್ನಿಯೊಬ್ಬಳಿಗೆ ಗರಿಷ್ಠ ಎರಡು ಬಾರಿ 'ತಲಾಕ್ ರಜಈ'ಯ ಹಕ್ಕನ್ನು ಪ್ರಯೋಗಿಸಬಹುದು. ತನ್ನ ಪತ್ನಿಗೆ ಎರಡು ಬಾರಿ ತಲಾಕ್ ನೀಡಿ ಪುನಃ ಆಕೆಯನ್ನು ಸೇರಿರುವ ಪತಿ, ತನ್ನ ಜೀವನಾವಧಿಯಲ್ಲಿ ಎಂದಾದರೂ ಮೂರನೆಯ ಬಾರಿ ಆಕೆಗೆ ತಲಾಕ್ ನೀಡಿದರೆ, ಆ ಸ್ತ್ರೀ ಅವನಿಂದ ಶಾಶ್ವತವಾಗಿ ಅಗಲುವಳು.

ಹೊರತಾಗಿದೆ. ಇಂತಹ ಸ್ಥಿತಿಯಲ್ಲಿ ಅವರಿಬ್ಬರೂ ಅಲ್ಲಾಹನ ಮೇರೆಗಳಲ್ಲೇ ನೆಲೆನಿಲ್ಲಲಾರರೆಂದು ನಿಮಗೆ ಶಂಕೆಯುಂಟಾದಾಗ ಸ್ತ್ರೀಯು ತನ್ನ ಪುರುಷನಿಗೆ (ಪತಿಗೆ) ಏನಾದರೂ ಪರಿಹಾರ ಕೊಟ್ಟು ಬಿಡುಗಡೆ ಹೊಂದುವುದರಲ್ಲಿ ದೋಷವಿಲ್ಲ.[80] ಅಲ್ಲಾಹನಿಂದ ನಿಶ್ಚಯಿಸಲ್ಪಟ್ಟ ಮೇರೆಗಳಿವು. ಇವುಗಳನ್ನು ಉಲ್ಲಂಘಿಸಬೇಡಿರಿ. ಅಲ್ಲಾಹನ ಮೇರೆಗಳನ್ನು ಯಾರಾದರೂ ಮೀರಿದರೆ ಅವರೇ ಅಕ್ರಮಿಗಳು.

حُدُوْدُ اللّٰهِ فَلَا تَعْتَدُوْهَا ۚ وَمَنْ يَّتَعَدَّ
حُدُوْدَ اللّٰهِ فَاُولٰٓئِكَ هُمُ الظّٰلِمُوْنَ ﴿٢٢٩﴾

230. ಮತ್ತು (ಪತಿಯು ಎರಡು ಬಾರಿ ತಲಾಕ್ ಕೊಟ್ಟ ಬಳಿಕ ಮೂರನೇ ಬಾರಿಯೂ) ತಲಾಕ್ ಕೊಟ್ಟು ಬಿಟ್ಟರೆ ಆ ಸ್ತ್ರೀಯ ನಿಕಾಹ್ ಇನ್ನೊಬ್ಬನೊಂದಿಗೆ ಆಗಿ ಅವನು ತಲಾಕ್ ಕೊಡುವ ಹೊರತು ಅವಳು ಪುನಃ ಅವನಿಗೆ (ಮೊದಲಿನ ಪತಿಗೆ) ಹಲಾಲ್ ಆಗಲಾರಳು.[81] ಆಗ (ದ್ವಿತೀಯ ಪತಿ ತಲಾಕ್ ಕೊಟ್ಟಾಗ) ಮೊದಲಿನ ಪತಿಯೂ ಈ ಸ್ತ್ರೀಯೂ ಅಲ್ಲಾಹನ ಮೇರೆಯೊಳಗಿರುವೆವೆಂದು ಭಾವಿಸುವುದಾದರೆ, ಅವರು ಪರಸ್ಪರ ಒಲಿದು ಕೊಳ್ಳುವುದರಲ್ಲಿ ದೋಷವಿಲ್ಲ. ಅಲ್ಲಾಹನಿಂದ ನಿಶ್ಚಯಿಸಲ್ಪಟ್ಟ ಮೇರೆಗಳಿವು. (ಅವನ ಮೇರೆಗಳನ್ನು ಮೀರುವುದರ ಪರಿಣಾಮವನ್ನು) ತಿಳಿದಿರುವವರ ಮಾರ್ಗದರ್ಶನಕ್ಕಾಗಿ ಅವನು ಇವುಗಳನ್ನು ಅಭಿವ್ಯಕ್ತಪಡಿಸುತ್ತಾನೆ.

فَاِنْ طَلَّقَهَا فَلَا تَحِلُّ لَهٗ مِنْۢ بَعْدُ حَتّٰى
تَنْكِحَ زَوْجًا غَيْرَهٗ ۗ فَاِنْ طَلَّقَهَا فَلَا جُنَاحَ
عَلَيْهِمَآ اَنْ يَّتَرَاجَعَآ اِنْ ظَنَّآ اَنْ يُّقِيْمَا
حُدُوْدَ اللّٰهِ ۗ وَتِلْكَ حُدُوْدُ اللّٰهِ يُبَيِّنُهَا
لِقَوْمٍ يَّعْلَمُوْنَ ﴿٢٣٠﴾

231. ನೀವು ಸ್ತ್ರೀಯರಿಗೆ ತಲಾಕ್ ಕೊಟ್ಟು ಅವರ 'ಇದ್ದತ್' ಪೂರ್ಣಗೊಳ್ಳಲು ಸಮೀಪಿಸಿದಾಗ ಅವರನ್ನು ನ್ಯಾಯೋಚಿತ ರೀತಿಯಲ್ಲಿ ಇರಿಸಿಕೊಳ್ಳಿರಿ ಇಲ್ಲವೆ ನ್ಯಾಯೋಚಿತ ರೀತಿಯಿಂದ ಬಿಡುಗಡೆಗೊಳಿಸಿರಿ. ಕೇವಲ ಸತಾಯಿಸಲಿಕ್ಕಾಗಿ ಅವರನ್ನು ತಡೆದಿರಿಸಿಕೊಂಡರೆ ಅದು ಅತಿಕ್ರಮವಾಗುವುದು. ಹೀಗೆ ಮಾಡಿದಾತನು ವಾಸ್ತವದಲ್ಲಿ ತನ್ನ ಮೇಲೆ ತಾನೇ ಅಕ್ರಮವೆಸಗುವನು. ಅಲ್ಲಾಹನ ಆಯತ್‌ಗಳನ್ನು ಅಪಹಾಸ್ಯ ಮಾಡಬೇಡಿರಿ. ಅಲ್ಲಾಹನು ನಿಮ್ಮ ಮೇಲೆ ಎಷ್ಟು ದೊಡ್ಡ ಅನುಗ್ರಹ ಮಾಡಿರುತ್ತಾನೆಂಬುದನ್ನು

وَاِذَا طَلَّقْتُمُ النِّسَآءَ فَبَلَغْنَ اَجَلَهُنَّ
فَاَمْسِكُوْهُنَّ بِمَعْرُوْفٍ اَوْ سَرِّحُوْهُنَّ
بِمَعْرُوْفٍ ۠ وَلَا تُمْسِكُوْهُنَّ ضِرَارًا لِّتَعْتَدُوْا ۚ
وَمَنْ يَّفْعَلْ ذٰلِكَ فَقَدْ ظَلَمَ نَفْسَهٗ ۗ وَلَا
تَتَّخِذُوْٓا اٰيٰتِ اللّٰهِ هُزُوًا ۘ وَّاذْكُرُوْا نِعْمَتَ
اللّٰهِ عَلَيْكُمْ وَمَآ اَنْزَلَ عَلَيْكُمْ مِّنَ الْكِتٰبِ

80. ಶರೀಅತ್‌ನ ಪಾರಿಭಾಷಿಕದಲ್ಲಿ ಇದನ್ನು 'ಖುಲಾ' ಎನ್ನುತ್ತಾರೆ. ಅರ್ಥಾತ್- ಪತ್ನಿಯು ತನ್ನ ಪತಿಗೆ ಏನನ್ನಾದರೂ ಕೊಟ್ಟು ಅಥವಾ ಕೊಡಿಸಿ ತಲಾಕ್ ಪಡೆಯುವುದು. ಅಂತಹ ಸಂದರ್ಭದಲ್ಲಿ ಪತಿಗೆ, ಆಕೆಯಿಂದ ತಾನು ನೀಡಿದ ಸಂಪತ್ತು ಅಥವಾ ಅದರ ಯಾವುದಾದರೊಂದು ಭಾಗವನ್ನು ಅಥವಾ ಒಮ್ಮತಾಭಿಪ್ರಾಯದಿಂದ ಏನನ್ನು ನಿಶ್ಚಯಿಸಲಾಗುತ್ತದೋ ಅದನ್ನು ಪಡೆಯುವುದು ಧರ್ಮಸಮ್ಮತವಾಗಿದೆ. ಆದರೆ ಪತಿ ಸ್ವತಃ ಪತ್ನಿಗೆ ತಲಾಕ್ ನೀಡಿದ್ದರೆ ಅವನು ಆಕೆಗೆ ನೀಡಿದ ಯಾವುದೇ ಸೊತ್ತನ್ನು ಮರಳಿ ಪಡೆಯುವಂತಿಲ್ಲ.

81. ಅಂದರೆ ಯಾವುದಾದರೊಂದು ಸಂದರ್ಭದಲ್ಲಿ ಸ್ವಇಚ್ಛೆಯಿಂದ ತಲಾಕ್ ನೀಡುವುದಾಗಿದೆ. ಇದರಿಂದ ಕೇವಲ ಮೊದಲನೇ ಪತಿಗೆ ಸ್ತ್ರೀಯನ್ನು ಹಲಾಲ್‌ಗೊಳಿಸಲು ಮಾಡಲಾಗುವ ವಿವಾಹ ಮತ್ತು ವಿವಾಹ ವಿಚ್ಛೇದನದ ಸಂಚಿಗೆ ಯಾವುದೇ ಅವಕಾಶ ದೊರೆಯುವುದಿಲ್ಲ.

ಮರೆಯದಿರಿ. ನಿಮ್ಮ ಮೇಲೆ ಇಳಿಸಿದ ಗ್ರಂಥ ಮತ್ತು ಸದ್ವಿವೇಕಗಳ ಗೌರವವನ್ನು ಕಾಪಾಡಬೇಕೆಂದು ಅವನು ನಿಮಗೆ ಉಪದೇಶಿಸುತ್ತಾನೆ. ಅಲ್ಲಾಹನನ್ನು ಭಯಪಡಿರಿ. ಅಲ್ಲಾಹನಿಗೆ ಸರ್ವ ವಿಷಯಗಳ ಅರಿವಿದೆ ಎಂಬುದನ್ನು ಚೆನ್ನಾಗಿ ಅರಿತುಕೊಳ್ಳಿರಿ.

وَالْحِكْمَةِ يَعِظُكُم بِهِ ۚ وَاتَّقُوا اللَّهَ وَاعْلَمُوا
أَنَّ اللَّهَ بِكُلِّ شَيْءٍ عَلِيمٌ ﴿٢٣١﴾

232. ನೀವು ನಿಮ್ಮ ಸ್ತ್ರೀಯರಿಗೆ ತಲಾಕ್ ಕೊಟ್ಟ ಬಳಿಕ ಅವರು ತಮ್ಮ ಇದ್ದತ್ ಪೂರ್ತಿಗೊಳಿಸಿಕೊಂಡಾಗ ತಮಗಿಷ್ಟ ಬಂದ ಪತಿಯರೊಂದಿಗೆ ವಿವಾಹ ಮಾಡಿಕೊಳ್ಳಲು ನ್ಯಾಯೋಚಿತ ರೀತಿಯಲ್ಲಿ ಒಪ್ಪಿಕೊಂಡರೆ, ಅವರು ಪರಸ್ಪರ ನಿಕಾಹ್ ಮಾಡಿಕೊಳ್ಳುವುದನ್ನು ಆತಂಕಪಡಿಸಬಾರದು. ನೀವು ಅಲ್ಲಾಹನ ಮೇಲೂ ಅಂತಿಮ ದಿವಸದ ಮೇಲೂ ವಿಶ್ವಾಸವಿಡುವವರಾಗಿದ್ದರೆ ಹೀಗೆ ಮಾಡಬಾರದೆಂದು ನಿಮಗೆ ಉಪದೇಶ ನೀಡಲಾಗುತ್ತಿದೆ. ನಿಮಗೆ ಸಭ್ಯವೂ ಪರಿಶುದ್ಧವೂ ಆಗಿರುವ ನಡವಳಿಕೆ ಇದೇ ಆಗಿರುತ್ತದೆ. ಅಲ್ಲಾಹನು ಬಲ್ಲವನು, ನೀವು ಬಲ್ಲವರಲ್ಲ.

وَإِذَا طَلَّقْتُمُ النِّسَاءَ فَبَلَغْنَ أَجَلَهُنَّ
فَلَا تَعْضُلُوهُنَّ أَن يَنكِحْنَ أَزْوَاجَهُنَّ
إِذَا تَرَاضَوْا بَيْنَهُم بِالْمَعْرُوفِ ۗ ذَٰلِكَ يُوعَظُ
بِهِ مَن كَانَ مِنكُمْ يُؤْمِنُ بِاللَّهِ وَالْيَوْمِ
الْآخِرِ ۗ ذَٰلِكُمْ أَزْكَىٰ لَكُمْ وَأَطْهَرُ ۗ
وَاللَّهُ يَعْلَمُ وَأَنتُمْ لَا تَعْلَمُونَ ﴿٢٣٢﴾

233. ತಮ್ಮ ಶಿಶುಗಳು ಪೂರ್ಣ ಸ್ತನಪಾನಾವಧಿಯ ವರೆಗೆ ಹಾಲು ಕುಡಿಯಬೇಕೆಂದು ಪಿತರು ಬಯಸಿದರೆ, ತಾಯಂದಿರು ತಮ್ಮ ಶಿಶುಗಳಿಗೆ ಎರಡು ವರ್ಷ ಪೂರ್ತಿಯಾಗಿ ಹಾಲುಣಿಸಬೇಕು.[82] ಆಗ ಶಿಶುವಿನ ತಂದೆಯು ಅವರಿಗೆ ನ್ಯಾಯೋಚಿತ ರೀತಿಯಿಂದ ಅನ್ನ, ಬಟ್ಟೆ ಕೊಡಲು ಬಾಧ್ಯಸ್ಥನಾಗುವನು. ಆದರೆ ಅವನವನ ಶಕ್ತಿಗಿಂತ ಮೀರಿದ ಭಾರವನ್ನು ಯಾರ ಮೇಲೂ ಹಾಕಬಾರದು. ಶಿಶುವು ತಾಯಿಯದ್ದು ಎಂಬ ಕಾರಣದಿಂದ ಅವಳನ್ನು ಕಷ್ಟಕ್ಕೊಳಪಡಿಸಬಾರದು ಮತ್ತು ಶಿಶುವಿನ ತಂದೆಯೆಂಬ ಕಾರಣದಿಂದ ಅವನನ್ನೂ ಪೇಚಾಟಕ್ಕೊಳಪಡಿಸಬಾರದು. ಮೊಲೆಹಾಲನ್ನುಣಿಸುವವಳ ಈ ಹಕ್ಕು ತಂದೆಯ ಮೇಲಿರುವಂತೆಯೇ ಅವನ ವಾರೀಸುದಾರರ ಮೇಲೂ ಇದೆ. ಆದರೆ ಉಭಯತ್ರರು ಪರಸ್ಪರ ವಿಚಾರ ವಿನಿಮಯದಿಂದ ಒಮ್ಮತರಾಗಿ ಮೊಲೆ ಹಾಲನ್ನು ಬಿಡಿಸಲಿಚ್ಛಿಸುವುದರಲ್ಲಿ ತಪ್ಪಿಲ್ಲ ಮತ್ತು ನಿಮ್ಮ ಶಿಶುಗಳಿಗೆ ಅನ್ಯ ಸ್ತ್ರೀಯಿಂದ ಸ್ತನಪಾನ ಮಾಡಿಸುವ ಇರಾದೆ ನಿಮಗಿದ್ದರೆ, ಅದಕ್ಕೆ ಪ್ರತಿಫಲವನ್ನು ನಿಶ್ಚಯಿಸಿ ಅದನ್ನು ನ್ಯಾಯೋಚಿತವಾಗಿ ಪಾವತಿ ಮಾಡಿದರೆ ಅದರಲ್ಲೂ ತಪ್ಪಿಲ್ಲ. ಅಲ್ಲಾಹನನ್ನು ಭಯಪಡಿರಿ. ನೀವು ಮಾಡುವುದೆಲ್ಲವೂ ಅಲ್ಲಾಹನ ವೀಕ್ಷಣದೊಳಗಿದೆ ಎಂಬುದನ್ನು ನೀವು ತಿಳಿದಿರಬೇಕು.

وَالْوَالِدَاتُ يُرْضِعْنَ أَوْلَادَهُنَّ حَوْلَيْنِ
كَامِلَيْنِ لِمَنْ أَرَادَ أَن يُتِمَّ الرَّضَاعَةَ ۚ
وَعَلَى الْمَوْلُودِ لَهُ رِزْقُهُنَّ وَكِسْوَتُهُنَّ
بِالْمَعْرُوفِ ۚ لَا تُكَلَّفُ نَفْسٌ إِلَّا وُسْعَهَا ۚ لَا
تُضَارَّ وَالِدَةٌ بِوَلَدِهَا وَلَا مَوْلُودٌ لَّهُ
بِوَلَدِهِ ۚ وَعَلَى الْوَارِثِ مِثْلُ ذَٰلِكَ ۗ فَإِنْ
أَرَادَا فِصَالًا عَن تَرَاضٍ مِّنْهُمَا وَتَشَاوُرٍ
فَلَا جُنَاحَ عَلَيْهِمَا ۗ وَإِنْ أَرَدتُّمْ أَن تَسْتَرْضِعُوا
أَوْلَادَكُمْ فَلَا جُنَاحَ عَلَيْكُمْ إِذَا سَلَّمْتُم مَّا
آتَيْتُم بِالْمَعْرُوفِ ۗ وَاتَّقُوا اللَّهَ وَاعْلَمُوا
أَنَّ اللَّهَ بِمَا تَعْمَلُونَ بَصِيرٌ ﴿٢٣٣﴾

82. ಇದು ತಲಾಕ್, ಖುಲಾ, ಫಸ್ಕ್ ಅಥವಾ ತಫ್ರೀಕ್‌ನ ಮೂಲಕ ದಂಪತಿಗಳು ಪರಸ್ಪರ ಬೇರ್ಪಟ್ಟಿದ್ದು, ಸ್ತ್ರೀಯು ಸ್ತನಪಾನ ಮಾಡುವ ಮಗುವನ್ನು ಹೊಂದಿರುವ ಸಂದರ್ಭಕ್ಕಿರುವ ಆಜ್ಞೆಯಾಗಿದೆ.

234. ನಿಮ್ಮಲ್ಲಿ ಯಾರಾದರೂ ಮೃತಪಟ್ಟರೆ ಮತ್ತು ಅವರ ಪತ್ನಿಯರು ಜೀವಂತರಾಗಿದ್ದರೆ, ಅವರು (ಪತ್ನಿಯರು) ನಾಲ್ಕು ತಿಂಗಳು ಹತ್ತು ದಿನಗಳ ತನಕ ತಮ್ಮನ್ನು ತಾವೇ ತಡೆದಿರಿಸಿಕೊಳ್ಳಬೇಕು.[83] ಇದ್ದತ್ ಮುಗಿದ ಬಳಿಕ ಅವರು ತಮ್ಮ ವೈಯಕ್ತಿಕ ವಿಷಯದಲ್ಲಿ ನ್ಯಾಯೋಚಿತವಾದುದೇನನ್ನಾದರೂ ಮಾಡಿದರೆ (ಅರ್ಥಾತ್ ವಿವಾಹ) ಅದರ ಹೊಣೆ ನಿಮ್ಮ ಮೇಲಿಲ್ಲ. ಅಲ್ಲಾಹನು ನಿಮ್ಮೆಲ್ಲರ ಕರ್ಮಗಳನ್ನು ಅರಿಯುವವನಾಗಿರುತ್ತಾನೆ.

وَالَّذِيْنَ يُتَوَفَّوْنَ مِنْكُمْ وَيَذَرُوْنَ اَزْوَاجًا
يَّتَرَبَّصْنَ بِاَنْفُسِهِنَّ اَرْبَعَةَ اَشْهُرٍ وَّعَشْرًا ۚ
فَاِذَا بَلَغْنَ اَجَلَهُنَّ فَلَا جُنَاحَ عَلَيْكُمْ فِيْمَا
فَعَلْنَ فِيْٓ اَنْفُسِهِنَّ بِالْمَعْرُوْفِ ۗ وَاللّٰهُ بِمَا
تَعْمَلُوْنَ خَبِيْرٌ ﴿٢٣٤﴾

235. ಇದ್ದತ್‌ನ ಕಾಲಾವಧಿಯಲ್ಲಿ ಆ ವಿಧವೆಯರೊಂದಿಗೆ ವಿವಾಹದ ಇರಾದೆಯನ್ನು ನೀವು ಸಂಕೇತಗಳ ಮೂಲಕ ಪ್ರಕಟಗೊಳಿಸಿದರೂ ಮನಸ್ಸಿನೊಳಗೆ ಬಚ್ಚಿಟ್ಟರೂ ತಪ್ಪಿಲ್ಲ. ನಿಮ್ಮ ಮನದೊಳಗೆ ಅವರ ಯೋಚನೆ ಬಂದೇ ತೀರುವುದೆಂಬುದನ್ನು ಅಲ್ಲಾಹನು ಅರಿತಿರುತ್ತಾನೆ. ಆದರೆ ರಹಸ್ಯ ವಾಗ್ದಾನ ಮಾಡಬಾರದು. ಯಾವುದೇ ಪ್ರಸ್ತಾಪ ಮಾಡುವುದಾದರೆ ನ್ಯಾಯೋಚಿತ ರೀತಿಯಿಂದ ಮಾಡಿರಿ. ಇದ್ದತ್ ಪೂರ್ಣಗೊಳ್ಳುವ ತನಕ ವಿವಾಹ ಬಂಧನದ ನಿರ್ಧಾರ ಮಾಡಬೇಡಿರಿ. ಅಲ್ಲಾಹನು ನಿಮ್ಮ ಹೃದಯಗಳಲ್ಲಿರುವುದನ್ನೂ ಅರಿಯುತ್ತಾನೆಂಬುದನ್ನು ಚೆನ್ನಾಗಿ ತಿಳಿದುಕೊಳ್ಳಿರಿ. ಆದುದರಿಂದ ಆತನನ್ನು ಭಯಪಡಿರಿ. ಅಲ್ಲಾಹನು ಚಿಕ್ಕ ಪುಟ್ಟ ವಿಷಯಗಳನ್ನು ಕ್ಷಮಿಸುವವನೂ ಸಹನಶೀಲನೂ ಆಗಿರುತ್ತಾನೆಂಬುದನ್ನು ನೀವು ತಿಳಿದಿರಬೇಕು.

وَلَا جُنَاحَ عَلَيْكُمْ فِيْمَا عَرَّضْتُمْ بِهٖ مِنْ
خِطْبَةِ النِّسَآءِ اَوْ اَكْنَنْتُمْ فِيْٓ اَنْفُسِكُمْ ۗ عَلِمَ
اللّٰهُ اَنَّكُمْ سَتَذْكُرُوْنَهُنَّ وَلٰكِنْ لَّا تُوَاعِدُوْهُنَّ
سِرًّا اِلَّآ اَنْ تَقُوْلُوْا قَوْلًا مَّعْرُوْفًا ۗ وَلَا تَعْزِمُوْا
عُقْدَةَ النِّكَاحِ حَتّٰى يَبْلُغَ الْكِتٰبُ اَجَلَهٗ ۗ وَ
اعْلَمُوْٓا اَنَّ اللّٰهَ يَعْلَمُ مَا فِيْٓ اَنْفُسِكُمْ
فَاحْذَرُوْهُ ۚ وَاعْلَمُوْٓا اَنَّ اللّٰهَ غَفُوْرٌ حَلِيْمٌ ﴿٢٣٥﴾

236. ನೀವು ನಿಮ್ಮ ಸ್ತ್ರೀಯರನ್ನು ಸ್ಪರ್ಶಿಸುವುದಕ್ಕಿಂತ ಅಥವಾ ಅವರಿಗೆ ಮಹ್ರ್ (ವಿವಾಹ ಧನ) ನಿಶ್ಚಯಿಸುವುದಕ್ಕಿಂತ ಮುಂಚೆ ಅವರಿಗೆ ತಲಾಕ್ ಕೊಟ್ಟರೆ, ನಿಮ್ಮ ಮೇಲೇನೂ ದೋಷವಿಲ್ಲ. ಇಂತಹ ಸಂದರ್ಭದಲ್ಲಿ ಅವರಿಗೆ ಸ್ವತ್ತನ್ನೇನಾದರೂ ಕೊಡಬೇಕು. ಧನಿಕರು ತನ್ನ ಶಕ್ತ್ಯಾನುಸಾರ ಮತ್ತು ಬಡವನು ತನ್ನ ಶಕ್ತ್ಯಾನುಸಾರ ನ್ಯಾಯೋಚಿತ ರೀತಿಯಿಂದ ಕೊಡಬೇಕು. ಇದು ಸಜ್ಜನರ ಮೇಲಿರುವ ಬಾಧ್ಯತೆಯಾಗಿದೆ.

لَا جُنَاحَ عَلَيْكُمْ اِنْ طَلَّقْتُمُ النِّسَآءَ مَا لَمْ
تَمَسُّوْهُنَّ اَوْ تَفْرِضُوْا لَهُنَّ فَرِيْضَةً ۚ ۖ وَّمَتِّعُوْهُنَّ ۚ
عَلَى الْمُوْسِعِ قَدَرُهٗ وَعَلَى الْمُقْتِرِ قَدَرُهٗ ۚ مَتَاعًا
بِالْمَعْرُوْفِ ۚ حَقًّا عَلَى الْمُحْسِنِيْنَ ﴿٢٣٦﴾

83. ಪತಿಯೊಂದಿಗೆ 'ದೈಹಿಕ ಸಂಪರ್ಕ' ಏರ್ಪಡುವ ಮೊದಲೇ ಪತಿಯನ್ನು ಕಳಕೊಂಡ ಸ್ತ್ರೀಯರಿಗೂ ಮರಣದ ನಂತರದ ಈ ಇದ್ದತ್ ಅನ್ವಯಿಸುತ್ತದೆ. ಆದರೆ ಗರ್ಭಿಣಿ ಸ್ತ್ರೀ ಇದಕ್ಕೆ ಹೊರತಾಗಿದ್ದಾಳೆ. ಆಕೆಯ ಇದ್ದತ್‌ನ ಅವಧಿ ಹೆರಿಗೆಯ ತನಕವಾಗಿದೆ. ಹೆರಿಗೆ ಪತಿಯ ನಿಧನದ ತಕ್ಷಣವಾದರೂ ಅಥವಾ ಕೆಲವು ತಿಂಗಳುಗಳ ಬಳಿಕವಾದರೂ ಸರಿಯೇ. 'ತಮ್ಮನ್ನು ತಾವು ತಡೆದಿರಿಸಿಕೊಳ್ಳಬೇಕು' ಎಂದರೆ ಮರುವಿವಾಹದಿಂದ ತಡೆದಿರಿಸಿಕೊಳ್ಳಬೇಕೆಂದು ಮಾತ್ರವಲ್ಲ, ತನ್ನನ್ನು ಶೃಂಗಾರದಿಂದಲೂ ತಡೆದಿರಿಸಬೇಕೆಂಬುದೂ ಅದರಲ್ಲಿ ಸೇರಿದೆ.

237. ಅವರನ್ನು ಸ್ಪರ್ಶಿಸುವುದಕ್ಕಿಂತ ಮುಂಚೆ ತಲಾಕ್ ಕೊಟ್ಟರೆ, 'ವಿವಾಹಧನ' (ಮಹ್ರ್) ನಿಶ್ಚಯಿಸಲ್ಪಟ್ಟಿದ್ದರೆ, ಅರ್ಧಾಂಶ ವಿವಾಹಧನ ಕೊಡಬೇಕು. ಸ್ತ್ರೀಯು ಮೃದು ನೀತಿಯನ್ನನುಸರಿಸಿದರೆ (ಮತ್ತು ವಿವಾಹಧನ ಬಿಟ್ಟುಕೊಟ್ಟರೆ) ಅಥವಾ ವಿವಾಹ ಸಂಬಂಧವನ್ನು ಕೈಯಲ್ಲಿರಿಸಿ ಕೊಂಡಿರುವ ಪುರುಷನು ಮೃದು ನೀತಿಯನ್ನನುಸರಿಸಿದರೆ (ಮತ್ತು ಪೂರ್ಣ ವಿವಾಹಧನ ಕೊಟ್ಟು ಬಿಟ್ಟರೆ) ಅದು ಬೇರೆ ವಿಷಯ ಮತ್ತು ನೀವು (ಅರ್ಥಾತ್ ಪತಿ) ಮೃದುನೀತಿಯನ್ನನುಸರಿಸಿದರೆ ಇದು ಧರ್ಮನಿಷ್ಠೆಯೊಂದಿಗೆ ಹೆಚ್ಚು ಅನುರೂಪವಾಗಿರುತ್ತದೆ. ಪರಸ್ಪರ ವ್ಯವಹಾರದಲ್ಲಿ ಔದಾರ್ಯವನ್ನು ಮರೆಯಬೇಡಿರಿ. ನಿಮ್ಮ ಕರ್ಮಗಳನ್ನು ಅಲ್ಲಾಹನು ವೀಕ್ಷಿಸುತ್ತಿದ್ದಾನೆ.

وَاِنْ طَلَّقْتُمُوْهُنَّ مِنْ قَبْلِ اَنْ تَمَسُّوْهُنَّ
وَقَدْ فَرَضْتُمْ لَهُنَّ فَرِيْضَةً فَنِصْفُ مَا
فَرَضْتُمْ اِلَّآ اَنْ يَّعْفُوْنَ اَوْ يَعْفُوَا الَّذِىْ
بِيَدِهٖ عُقْدَةُ النِّكَاحِ ؕ وَاَنْ تَعْفُوْٓا
اَقْرَبُ لِلتَّقْوٰى ؕ وَلَا تَنْسَوُا الْفَضْلَ
بَيْنَكُمْ ؕ اِنَّ اللّٰهَ بِمَا تَعْمَلُوْنَ بَصِيْرٌ ﴿٢٣٧﴾

238. ನಿಮ್ಮ ನಮಾಝ್‌ಗಳನ್ನು ಜಾಗರೂಕತೆಯಿಂದ ಪಾಲಿಸಿರಿ; ಮುಖ್ಯವಾಗಿ ಸರ್ವಗುಣ ಸಂಪನ್ನವಾದ ನಮಾಝ್.[84] ಅತ್ಯಂತ ವಿಧೇಯ ದಾಸರು ನಿಲ್ಲುವ ಹಾಗೆ ಅಲ್ಲಾಹನ ಮುಂದೆ ನಿಲ್ಲಿರಿ.

حٰفِظُوْا عَلَى الصَّلَوٰتِ وَالصَّلٰوةِ الْوُسْطٰى
وَقُوْمُوْا لِلّٰهِ قٰنِتِيْنَ ﴿٢٣٨﴾

239. ಭಯೋತ್ಪಾದಕ ಪರಿಸ್ಥಿತಿಯಲ್ಲಿ, ಪಾದಚಾರಿಗಳಾಗಿ ಅಥವಾ ಸವಾರರಾಗಿ ಸಾಧ್ಯವಿರುವ ರೀತಿಯಲ್ಲಿ ನಮಾಝ್ ನಿರ್ವಹಿಸಿರಿ. ಅಭಯವೊದಗಿದಾಗ ಹಿಂದೆ ನೀವು ತಿಳಿಯದೆ ಇದ್ದುದನ್ನು ಅಲ್ಲಾಹನು ನಿಮಗೆ ಕಲಿಸಿ ಕೊಟ್ಟಿರುವ ರೀತಿಯಲ್ಲಿ ಅವನನ್ನು ಧ್ಯಾನಿಸಿರಿ.

فَاِنْ خِفْتُمْ فَرِجَالًا اَوْ رُكْبَانًا ۚ فَاِذَآ
اَمِنْتُمْ فَاذْكُرُوا اللّٰهَ كَمَا عَلَّمَكُمْ مَّا لَمْ
تَكُوْنُوْا تَعْلَمُوْنَ ﴿٢٣٩﴾

240. ನಿಮ್ಮಲ್ಲಿ ಪತ್ನಿಯರನ್ನು ಬಿಟ್ಟು ಮೃತ್ಯುವಶರಾಗುವವರು ತಮ್ಮ ಪತ್ನಿಯರಿಗೆ ಒಂದು ವರ್ಷದ ವರೆಗೆ ಜೀವನಾಂಶ ಕೊಡಬೇಕೆಂದೂ ಅವರನ್ನು ಗೃಹಬಾಹಿರರನ್ನಾಗಿ ಮಾಡಬಾರದೆಂದೂ ಉಯಿಲು ಅಥವಾ ಮೃತ್ಯುಪತ್ರ ಮಾಡಬೇಕು. ಆ ಬಳಿಕ ಅವರು ತಾವೇ ಹೊರಟು ಹೋದರೆ ಅವರು ತಮ್ಮ ವಿಷಯದಲ್ಲಿ ನ್ಯಾಯೋಚಿತವಾಗಿ ಏನು ಮಾಡಿದರೂ ಅದರ ಹೊಣೆ ನಿಮ್ಮ ಮೇಲಿಲ್ಲ. ಅಲ್ಲಾಹನು ಎಲ್ಲರ ಮೇಲೂ ಪ್ರಬಲಾಧಿಕಾರವುಳ್ಳವನೂ ವಿವೇಕಜ್ಞಾನಿಯೂ ಆಗಿರುತ್ತಾನೆ.

وَالَّذِيْنَ يُتَوَفَّوْنَ مِنْكُمْ وَيَذَرُوْنَ
اَزْوَاجًا ۖۚ وَّصِيَّةً لِّاَزْوَاجِهِمْ مَّتَاعًا اِلَى
الْحَوْلِ غَيْرَ اِخْرَاجٍ ۚ فَاِنْ خَرَجْنَ فَلَا
جُنَاحَ عَلَيْكُمْ فِىْ مَا فَعَلْنَ فِىْٓ اَنْفُسِهِنَّ
مِنْ مَّعْرُوْفٍ ؕ وَاللّٰهُ عَزِيْزٌ حَكِيْمٌ ﴿٢٤٠﴾

84. ಮೂಲದಲ್ಲಿ 'ಸಲಾತುಲ್ ಉಸ್ತಾ' ಎಂಬ ಪದ ಪ್ರಯೋಗವಾಗಿದೆ. 'ಉಸ್ತಾ' ಎಂದರೆ ಮಧ್ಯಮ ಎಂದಾಗಿದೆ. ಉನ್ನತ ಮತ್ತು ಶ್ರೇಷ್ಠ ಎಂಬರ್ಥವೂ ಅದಕ್ಕಿದೆ. 'ಸಲಾತುಲ್ ಉಸ್ತಾ' ಎಂದರೆ ನಡುವಿನ ನಮಾಝ್ ಎಂದೂ ಆಗಬಹುದು ಅಥವಾ ಸಮಯಪಾಲನೆ ಮತ್ತು ಸಂಪೂರ್ಣ ಕಟ್ಟುನಿಟ್ಟಿನೊಂದಿಗೆ ಏಕಾಗ್ರತೆಯಿಂದ ಮಾಡುವ ಸರ್ವ ಗುಣಸಂಪನ್ನವಾದ ನಮಾಝ್ ಕೂಡ ಆಗಬಹುದು. ನಡುವಿನ ನಮಾಝ್ ಎಂದು ಅರ್ಥೈಸಿರುವ ವ್ಯಾಖ್ಯಾನಕಾರರು ಇದನ್ನು 'ಅಸರ್' ನಮಾಝ್ ಎನ್ನುತ್ತಾರೆ.

241. ಇದೇ ರೀತಿಯಲ್ಲಿ ತಲಾಕ್ ಕೊಡಲ್ಪಟ್ಟ ಸ್ತ್ರೀಯರಿಗೆ ನ್ಯಾಯೋಚಿತವಾಗಿ ಸ್ವತ್ತನ್ನೇನಾದರೂ ಕೊಟ್ಟು ಬೀಳ್ಕೊಡಬೇಕು. ಇದು ಧರ್ಮನಿಷ್ಠರುಗಳ ಮೇಲಿನ ಬಾಧ್ಯತೆಯಾಗಿರುತ್ತದೆ.

وَلِلْمُطَلَّقٰتِ مَتَاعٌۢ بِالْمَعْرُوْفِ ؕ حَقًّا
عَلَى الْمُتَّقِيْنَ ﴿٢٤١﴾

242. ಹೀಗೆ ಅಲ್ಲಾಹನು ತನ್ನ ಆದೇಶಗಳನ್ನು ಸುಸ್ಪಷ್ಟವಾಗಿ ವಿವರಿಸಿ ಹೇಳುತ್ತಾನೆ. ನೀವು ವಿಚಾರವಂತರಾಗುವಿರೆಂದು ನಿರೀಕ್ಷಿಸಲಾಗಿದೆ.

كَذٰلِكَ يُبَيِّنُ اللّٰهُ لَكُمْ اٰيٰتِهٖ
لَعَلَّكُمْ تَعْقِلُوْنَ ﴿٢٤٢﴾

243. ಮೃತ್ಯುವಿಗೆ ಹೆದರಿ ತಮ್ಮ ಮನೆಮಾರುಗಳನ್ನು ಬಿಟ್ಟು ಹೋದ ಸಾವಿರಾರು ಮಂದಿಯ ಬಗ್ಗೆ ನೀವು ವಿವೇಚಿಸಿದಿರಾ? ಅಲ್ಲಾಹನು ಅವರೊಡನೆ, 'ಸತ್ತು ಹೋಗಿರಿ' ಎಂದನು. ಅನಂತರ ಅವನು ಅವರಿಗೆ ಜೀವದಾನ ಮಾಡಿದನು.[85] ವಾಸ್ತವದಲ್ಲಿ ಅಲ್ಲಾಹನು ಮಾನವರ ಮೇಲೆ ಮಹಾ ಕೃಪೆ ತೋರುವವನಾಗಿರುತ್ತಾನೆ. ಆದರೆ, ಅನೇಕರು ಕೃತಜ್ಞತೆ ಸಲ್ಲಿಸುವುದಿಲ್ಲ.

اَلَمْ تَرَ اِلَى الَّذِيْنَ خَرَجُوْا مِنْ دِيَارِهِمْ
وَهُمْ اُلُوْفٌ حَذَرَ الْمَوْتِ ۪ فَقَالَ لَهُمُ
اللّٰهُ مُوْتُوْا ۫ ثُمَّ اَحْيَاهُمْ ؕ اِنَّ اللّٰهَ لَذُوْ
فَضْلٍ عَلَى النَّاسِ وَلٰكِنَّ اَكْثَرَ
النَّاسِ لَا يَشْكُرُوْنَ ﴿٢٤٣﴾

244. ಮುಸ್ಲಿಮರೇ, ಅಲ್ಲಾಹನ ಮಾರ್ಗದಲ್ಲಿ ಯುದ್ಧ ಮಾಡಿರಿ. ಅಲ್ಲಾಹನು ಸರ್ವವನ್ನೂ ಆಲಿಸುವವನೂ ಅರಿತಿರುವವನೂ ಆಗಿರುತ್ತಾನೆಂಬುದನ್ನು ಚೆನ್ನಾಗಿ ತಿಳಿದು ಕೊಳ್ಳಿರಿ.

وَقَاتِلُوْا فِيْ سَبِيْلِ اللّٰهِ وَاعْلَمُوْٓا اَنَّ اللّٰهَ
سَمِيْعٌ عَلِيْمٌ ﴿٢٤٤﴾

245. ಅಲ್ಲಾಹನಿಗೆ ಉತ್ತಮ ಸಾಲವನ್ನು[86] ನೀಡುವವರು ನಿಮ್ಮಲ್ಲಿ ಯಾರಿದ್ದಾರೆ? ಹಾಗಾದರೆ ಅವನು ಅದನ್ನು ಅನೇಕಾನೇಕಪಟ್ಟು ವರ್ಧಿಸಿ ನಿಮಗೆ ಮರಳಿಸುವನು. ಕ್ಷಯಗೊಳಿಸುವುದೂ ವರ್ಧಿಸುವುದೂ ಅಲ್ಲಾಹನ ಅಧಿಕಾರದಲ್ಲಿದೆ. ನಿಮಗೆಲ್ಲ ಆತನೆಡೆಗೇ ಮರಳಲಿಕ್ಕಿದೆ.

مَنْ ذَا الَّذِيْ يُقْرِضُ اللّٰهَ قَرْضًا حَسَنًا
فَيُضٰعِفَهٗ لَهٗٓ اَضْعَافًا كَثِيْرَةً ؕ وَاللّٰهُ
يَقْبِضُ وَيَبْصُۜطُ ۪ وَاِلَيْهِ تُرْجَعُوْنَ ﴿٢٤٥﴾

246. 'ಮೂಸಾ'ರ ಅನಂತರ ಬನೀಇಸ್ರಾಈಲರ ಸರದಾರರ ಮೇಲೆ ಸಂಭವಿಸಿದುದರ ಬಗ್ಗೆ ನೀವು ವಿವೇಚಿಸಿದಿರಾ? ಅವರು ತಮ್ಮ ಪ್ರವಾದಿಯೊಡನೆ ನಾವು ಅಲ್ಲಾಹನ ಮಾರ್ಗದಲ್ಲಿ ಯುದ್ಧ ಮಾಡಲಿಕ್ಕಾಗಿ ನಮಗೊಬ್ಬ ಅರಸನನ್ನು ನಿಯೋಗಿಸಿರಿ" ಎಂದರು. ಪ್ರವಾದಿ, "ನಿಮಗೆ ಯುದ್ಧ ಮಾಡಲು ಅಪ್ಪಣೆ ಕೊಟ್ಟಾಗ ನೀವು

اَلَمْ تَرَ اِلَى الْمَلَاِ مِنْۢ بَنِيْٓ اِسْرَآءِيْلَ مِنْۢ
بَعْدِ مُوْسٰى ۘ اِذْ قَالُوْا لِنَبِيٍّ لَّهُمُ ابْعَثْ لَنَا
مَلِكًا نُّقَاتِلْ فِيْ سَبِيْلِ اللّٰهِ ؕ قَالَ هَلْ
عَسَيْتُمْ اِنْ كُتِبَ عَلَيْكُمُ الْقِتَالُ اَلَّا

85. ಈ ಸೂಚನೆ ಬನೀಇಸ್ರಾಈಲರ ನಿರ್ಗಮನದ ಕಡೆಗಿದೆ. ಅಲ್ ಮಾಇದಃ ಅಧ್ಯಾಯದ ನಾಲ್ಕನೆಯ ರುಕೂಅ್‌ನಲ್ಲಿ ಅಲ್ಲಾಹನು ಇದನ್ನು ಸವಿಸ್ತಾರವಾಗಿ ವಿವರಿಸಿದ್ದಾನೆ.

86. 'ಉತ್ತಮ ಸಾಲ'ವೆಂದರೆ ಸದ್ಭಾವನೆಯೊಂದಿಗೆ ನಿಸ್ವಾರ್ಥದಿಂದ ಅಲ್ಲಾಹನ ಮಾರ್ಗದಲ್ಲಿ ಸಂಪತ್ತನ್ನು ವೆಚ್ಚಮಾಡುವುದಾಗಿದೆ. ಅದನ್ನು ಅಲ್ಲಾಹನು ತನ್ನ ಪಾಲಿನ ಸಾಲವೆಂದು ಬಗೆಯುತ್ತಾನೆ. ಅದರ ಅಸಲನ್ನು ಮಾತ್ರವಲ್ಲ ಅದಕ್ಕಿಂತ ಎಷ್ಟೋ ಪಟ್ಟು ಅಧಿಕ ಹಿಂದಿರುಗಿಸುವ ಬಗ್ಗೆ ಅಲ್ಲಾಹನು ವಾಗ್ದಾನ ಮಾಡುತ್ತಾನೆ.

تُقَاتِلُوْا ۭ قَالُوْا وَمَا لَنَآ اَلَّا نُقَاتِلَ فِيْ
سَبِيْلِ اللّٰهِ وَقَدْ اُخْرِجْنَا مِنْ دِيَارِنَا وَ
اَبْنَاۗىِٕنَا ۭ فَلَمَّا كُتِبَ عَلَيْهِمُ الْقِتَالُ تَوَلَّوْا
اِلَّا قَلِيْلًا مِّنْهُمْ ۭ وَاللّٰهُ عَلِيْمٌۢ بِالظّٰلِمِيْنَ ﴿٢٤٦﴾

ಯುದ್ಧ ಮಾಡದಿರಲಾರಿರಷ್ಟೆ?" ಎಂದು ಕೇಳಿದರು. ಅವರು, "ನಾವು ನಮ್ಮ ಸ್ವಂತ ಮನೆಗಳಿಂದ ಹೊರಕ್ಕಟ್ಟಲ್ಪಟ್ಟಿರುವಾಗ ಮತ್ತು ನಮ್ಮ ಮಕ್ಕಳು ಮರಿಗಳು ನಮ್ಮಿಂದ ಬೇರ್ಪಡಿಸಲ್ಪಟ್ಟಿರುವಾಗ ನಾವು ಅಲ್ಲಾಹನ ಮಾರ್ಗದಲ್ಲಿ ಹೋರಾಟ ನಡೆಸದಿರುವುದಾದರೂ ಹೇಗೆ?" ಎನ್ನತೊಡಗಿದರು. ಆದರೆ, ಅವರಿಗೆ ಯುದ್ಧ ಮಾಡಲು ಆಜ್ಞೆ ಕೊಟ್ಟಾಗ ಕೆಲವೇ ಮಂದಿಯನ್ನುಳಿದು ಮಿಕ್ಕವರೆಲ್ಲರೂ ಬೆನ್ನು ತೋರಿಸಿದರು. ಅಲ್ಲಾಹನು ಅವರ ಪೈಕಿ ಪ್ರತಿಯೊಬ್ಬ ಅಕ್ರಮಿಯನ್ನೂ ಚೆನ್ನಾಗಿ ಬಲ್ಲವನಾಗಿರುತ್ತಾನೆ.

وَقَالَ لَهُمْ نَبِيُّهُمْ اِنَّ اللّٰهَ قَدْ بَعَثَ لَكُمْ
طَالُوْتَ مَلِكًا ۭ قَالُوْٓا اَنّٰى يَكُوْنُ لَهُ الْمُلْكُ
عَلَيْنَا وَنَحْنُ اَحَقُّ بِالْمُلْكِ مِنْهُ وَلَمْ
يُؤْتَ سَعَةً مِّنَ الْمَالِ ۭ قَالَ اِنَّ اللّٰهَ
اصْطَفٰىهُ عَلَيْكُمْ وَزَادَهٗ بَسْطَةً فِي الْعِلْمِ
وَالْجِسْمِ ۭ وَاللّٰهُ يُؤْتِيْ مُلْكَهٗ مَنْ يَّشَاۗءُ ۭ
وَاللّٰهُ وَاسِعٌ عَلِيْمٌ ﴿٢٤٧﴾

247. ಅಲ್ಲಾಹನು 'ತಾಲೂತ'ರನ್ನು ನಿಮ್ಮ ಅರಸನನ್ನಾಗಿ ನೇಮಿಸಿರುತ್ತಾನೆಂದು ಅವರ ಪ್ರವಾದಿ ಅವರೊಡನೆ ಹೇಳಿದರು. ಇದನ್ನು ಕೇಳಿದಾಗ ಅವರು, "ಅವನು ನಮ್ಮ ಅರಸನಾಗಲು ಹಕ್ಕುದಾರನಾದುದು ಹೇಗೆ? ಅರಸುತನದ ಅರ್ಹತೆಯನ್ನು ಅವನಿಗಿಂತ ಹೆಚ್ಚು ನಾವು ಹೊಂದಿರುತ್ತೇವೆ. ಅವನೊಬ್ಬ ದೊಡ್ಡ ಶ್ರೀಮಂತನೂ ಅಲ್ಲ" ಎಂದರು. ಆಗ ಪ್ರವಾದಿ, "ಅಲ್ಲಾಹನು ನಿಮಗೆ ಬದಲಾಗಿ ಅವನನ್ನು ಆಯ್ಕೆ ಮಾಡಿರುತ್ತಾನೆ ಮತ್ತು ಅವನಿಗೆ ಬೌದ್ಧಿಕ ಹಾಗೂ ಶಾರೀರಿಕ ಶಕ್ತಿ ಸಾಮರ್ಥ್ಯಗಳನ್ನು ಅತ್ಯಧಿಕವಾಗಿ ನೀಡಿರುತ್ತಾನೆ. ತನ್ನ ಸಾಮ್ರಾಜ್ಯದ ಅಧಿಕಾರವನ್ನು ತನಗಿಷ್ಟ ಬಂದವರಿಗೆ ಕೊಡುವ ಅಧಿಕಾರ ಅಲ್ಲಾಹನಿಗಿದೆ. ಅಲ್ಲಾಹನು ಅತಿ ವಿಶಾಲನೂ ಸರ್ವಜ್ಞನೂ ಆಗಿರುತ್ತಾನೆ" ಎಂದುತ್ತರಿಸಿದರು.

وَقَالَ لَهُمْ نَبِيُّهُمْ اِنَّ اٰيَةَ مُلْكِهٖٓ اَنْ يَّاْتِيَكُمُ
التَّابُوْتُ فِيْهِ سَكِيْنَةٌ مِّنْ رَّبِّكُمْ وَبَقِيَّةٌ
مِّمَّا تَرَكَ اٰلُ مُوْسٰى وَاٰلُ هٰرُوْنَ تَحْمِلُهُ
الْمَلٰۗىِٕكَةُ ۭ اِنَّ فِيْ ذٰلِكَ لَاٰيَةً لَّكُمْ اِنْ
كُنْتُمْ مُّؤْمِنِيْنَ ﴿٢٤٨﴾ ع ٣٢ ١٢

248. ಇದರೊಂದಿಗೆ ಅವರ ಪ್ರವಾದಿಯು ಅವರೊಡನೆ "ಅವನು (ತಾಲೂತ್) ದೇವವತಿಯಿಂದ ರಾಜನಾಗಿ ನೇಮಕ ಹೊಂದಿರುವನೆಂಬ ಬಗ್ಗೆ ಸಂಕೇತವಾಗಿ, ಅವನ ಕಾಲದಲ್ಲಿ, ನಿಮ್ಮ ಪಾಲಕ ಪ್ರಭುವಿನ ಕಡೆಯಿಂದ, ನಿಮಗೆ ಮನಶ್ಶಾಂತಿಯನ್ನು ನೀಡುವ ಸಾಧನವಾಗಿರುವ ಆ ಪೆಟ್ಟಿಗೆಯು ನಿಮಗೆ ಮರಳಿ ಸಿಗುವುದು. ಅದರಲ್ಲಿ ಮೂಸಾರ ಸಂತತಿ ಮತ್ತು ಹಾರೂನರ ಸಂತತಿಯವರು ಬಿಟ್ಟು ಹೋಗಿದ್ದ ಮಂಗಲ ವಸ್ತುಗಳಿವೆ. ಅದನ್ನೀಗ ದೇವಚರರು ಹೊತ್ತುಕೊಂಡಿದ್ದಾರೆ. ನೀವು ಸತ್ಯವಿಶ್ವಾಸಿಗಳಾಗಿರುವಿರಾದರೆ ಇದು ನಿಮಗೆ ಬಹು ದೊಡ್ಡ ದೃಷ್ಟಾಂತ" ಎಂದೂ ಹೇಳಿದರು.

فَلَمَّا فَصَلَ طَالُوْتُ بِالْجُنُوْدِ ۙ قَالَ اِنَّ اللّٰهَ

249. ತಾಲೂತನು ಸೇನೆಗಳನ್ನು ನಡೆಸಿಕೊಂಡು ಹೊರಟಾಗ ಹೀಗೆಂದನು:

"ಒಂದು ನದಿಯ ಮೂಲಕ ಅಲ್ಲಾಹನಿಂದ ನಿಮ್ಮ ಪರೀಕ್ಷೆ ನಡೆಯಲಿದೆ. ಅದರ ನೀರು ಕುಡಿದವನು ನನ್ನ ಸಂಗಡಿಗನಲ್ಲ. ಅದರಿಂದ ತನ್ನ ದಾಹವನ್ನು ನೀಗಿಸಿಕೊಳ್ಳದಿರುವಾತನು ಮಾತ್ರ ನನ್ನ ಸಂಗಾತಿ. ಒಂದು ವೇಳೆ ಒಂದು ಬೊಗಸೆ ಕುಡಿದರೆ ಚಿಂತಿಲ್ಲ." ಆದರೆ ಅವರಲ್ಲಿ ಕೆಲವೇ ಮಂದಿಯ ಹೊರತು ಎಲ್ಲರೂ ನದಿಯಿಂದ ಚೆನ್ನಾಗಿ ನೀರು ಕುಡಿದುಬಿಟ್ಟರು. ಹೀಗೆ ತಾಲೂತ್ ಮತ್ತು ಅವನ ಮುಸ್ಲಿಮ್ ಸಂಗಡಿಗರು ನದಿಯನ್ನು ದಾಟಿ ಮುಂದುವರಿದಾಗ ಅವರು ತಾಲೂತನೊಡನೆ, ಇಂದು ನಮ್ಮಲ್ಲಿ ಜಾಲೂತ್ ಮತ್ತು ಅವನ ಸೇನೆಗಳೊಂದಿಗೆ ಹೋರಾಡಲು ಶಕ್ತಿಯಿಲ್ಲವೆಂದು ಹೇಳಿಬಿಟ್ಟರು.[87] ಆದರೆ ತಮಗೆ ಒಂದು ದಿನ ಅಲ್ಲಾಹನನ್ನು ಸಂಧಿಸಲಿಕ್ಕಿದೆಯೆಂಬುದನ್ನು ಅರಿತಿದ್ದವರು, "ಅಲ್ಲಾಹನ ವತಿಯಿಂದ ಅದೆಷ್ಟೋ ಸಲ ಒಂದು ಚಿಕ್ಕ ಸಮೂಹವು ಅತಿ ದೊಡ್ಡ ಸಮೂಹದ ಮೇಲೆ ವಿಜಯ ಪಡೆದುದಿದೆ. ಅಲ್ಲಾಹನು ಸಹನಶೀಲರೊಂದಿಗಿದ್ದಾನೆ" ಎಂದು ಹೇಳಿದರು.

مُبْتَلِيكُم بِنَهَرٍ فَمَن شَرِبَ مِنْهُ فَلَيْسَ
مِنِّي وَمَن لَّمْ يَطْعَمْهُ فَإِنَّهُ مِنِّي إِلَّا مَنِ
اغْتَرَفَ غُرْفَةً بِيَدِهِ فَشَرِبُوا مِنْهُ إِلَّا
قَلِيلًا مِّنْهُمْ فَلَمَّا جَاوَزَهُ هُوَ وَالَّذِينَ آمَنُوا
مَعَهُ قَالُوا لَا طَاقَةَ لَنَا الْيَوْمَ بِجَالُوتَ وَ
جُنُودِهِ قَالَ الَّذِينَ يَظُنُّونَ أَنَّهُم مُّلَاقُوا
اللَّهِ كَم مِّن فِئَةٍ قَلِيلَةٍ غَلَبَتْ فِئَةً
كَثِيرَةً بِإِذْنِ اللَّهِ وَاللَّهُ مَعَ الصَّابِرِينَ ﴿٢٤٩﴾

250. ಅವರು 'ಜಾಲೂತ್' ಮತ್ತು ಅವನ ಸೇನೆಗಳನ್ನೆದುರಿಸಲು ಹೊರಟಾಗ ಹೀಗೆ ಪ್ರಾರ್ಥಿಸಿದರು, "ಓ ನಮ್ಮ ಪ್ರಭೂ, ನಮಗೆ ಸಹನೆಯನ್ನು ಪ್ರದಾನ ಮಾಡು. ನಮ್ಮ ಹೆಜ್ಜೆಗಳನ್ನು ಅಚಲಗೊಳಿಸು. ಸತ್ಯನಿಷೇಧಿ ತಂಡದ ಎದುರು ನಮಗೆ ವಿಜಯ ನೀಡು."

وَلَمَّا بَرَزُوا لِجَالُوتَ وَجُنُودِهِ قَالُوا رَبَّنَا
أَفْرِغْ عَلَيْنَا صَبْرًا وَثَبِّتْ أَقْدَامَنَا وَ
انصُرْنَا عَلَى الْقَوْمِ الْكَافِرِينَ ﴿٢٥٠﴾

251. ಕೊನೆಗೆ ಅಲ್ಲಾಹನ ಅನುಮತಿಯಿಂದ ಅವರು ಸತ್ಯನಿಷೇಧಕರನ್ನು ಹೊಡೆದಟ್ಟಿದರು ಮತ್ತು ದಾವೂದರು ಜಾಲೂತನನ್ನು ವಧಿಸಿದರು. ಅಲ್ಲಾಹನು ಅವರಿಗೆ ಸಾಮ್ರಾಜ್ಯವನ್ನೂ ಯುಕ್ತಿಯನ್ನೂ ಅವನು ಬಯಸಿದ ಎಲ್ಲಾ ವಿಷಯಗಳ ಜ್ಞಾನವನ್ನೂ ನೀಡಿದನು. -ಹೀಗೆ ಅಲ್ಲಾಹನು ಮಾನವರ ಒಂದು ಕೂಟವನ್ನು ಇನ್ನೊಂದು ಕೂಟದ ಮೂಲಕ ಸರಿಸಿ ಬಿಡದಿರುತ್ತಿದ್ದರೆ ಭೂಮಿಯ ವ್ಯವಸ್ಥೆಯು ಕೆಟ್ಟು ಹೋಗುತ್ತಿತ್ತು. ಆದರೆ ಲೋಕದ ಜನರ ಮೇಲೆ ಅಲ್ಲಾಹನ ಮಹಾ ಕೃಪೆಯಿದೆ. (ಅವನು ಈ ರೀತಿಯಲ್ಲಿ ಕ್ಷೋಭೆಯನ್ನು ನಿವಾರಿಸುವ ವ್ಯವಸ್ಥೆ ಮಾಡುತ್ತಲೇ ಇರುತ್ತಾನೆ.)

فَهَزَمُوهُم بِإِذْنِ اللَّهِ وَقَتَلَ دَاوُودُ جَالُوتَ
وَآتَاهُ اللَّهُ الْمُلْكَ وَالْحِكْمَةَ وَعَلَّمَهُ مِمَّا
يَشَاءُ وَلَوْلَا دَفْعُ اللَّهِ النَّاسَ بَعْضَهُم
بِبَعْضٍ لَّفَسَدَتِ الْأَرْضُ وَلَٰكِنَّ اللَّهَ
ذُو فَضْلٍ عَلَى الْعَالَمِينَ ﴿٢٥١﴾

252. ಇವು ಅಲ್ಲಾಹನ ವಚನಗಳಾಗಿದ್ದು ಇವುಗಳನ್ನು ಇದ್ದಕ್ಕಿದ್ದಂತೆ

تِلْكَ آيَاتُ اللَّهِ نَتْلُوهَا عَلَيْكَ بِالْحَقِّ

87. ಪ್ರಾಯಶಃ ನದಿಯ ನೀರನ್ನು ಕುಡಿಯುವ ಮೂಲಕ ತಮ್ಮ ತಾಳ್ಮೆಯನ್ನು ಕಳಕೊಂಡವರೇ ಈ ಮಾತನ್ನೂ ಹೇಳಿರಬೇಕು.

وَاِنَّكَ لَمِنَ الْمُرْسَلِيْنَ ﴿٢٥٢﴾

ನಾವು ನಿಮಗೆ ಕೇಳಿಸುತ್ತಿದ್ದೇವೆ ಮತ್ತು ನಿಶ್ಚಯವಾಗಿಯೂ ನೀವು ಸಂದೇಶವಾಹಕರಾಗಿ ಕಳುಹಿಸಲ್ಪಟ್ಟವರಲ್ಲಾಗಿರುತ್ತೀರಿ.

تِلْكَ الرُّسُلُ فَضَّلْنَا بَعْضَهُمْ عَلٰى بَعْضٍ ۘ
مِنْهُمْ مَّنْ كَلَّمَ اللّٰهُ وَرَفَعَ بَعْضَهُمْ دَرَجٰتٍ ؕ
وَاٰتَيْنَا عِيْسَى ابْنَ مَرْيَمَ الْبَيِّنٰتِ وَاَيَّدْنٰهُ
بِرُوْحِ الْقُدُسِ ؕ وَلَوْ شَآءَ اللّٰهُ مَا اقْتَتَلَ الَّذِيْنَ
مِنْۢ بَعْدِهِمْ مِّنْۢ بَعْدِ مَا جَآءَتْهُمُ الْبَيِّنٰتُ
وَلٰكِنِ اخْتَلَفُوْا فَمِنْهُمْ مَّنْ اٰمَنَ وَمِنْهُمْ
مَّنْ كَفَرَ ؕ وَلَوْ شَآءَ اللّٰهُ مَا اقْتَتَلُوْا ۟ وَلٰكِنَّ
اللّٰهَ يَفْعَلُ مَا يُرِيْدُ ﴿٢٥٣﴾

253. *(ನಮ್ಮ ವತಿಯಿಂದ ಮಾನವರ ಸನ್ಮಾರ್ಗದರ್ಶನಕ್ಕಾಗಿ ನಿಯುಕ್ತರಾದ) ಸಂದೇಶವಾಹಕರವರು. ನಾವು ಅವರಲ್ಲಿ ಒಬ್ಬರಿಂದೊಬ್ಬರಿಗೆ ಉನ್ನತೋನ್ನತ ಸ್ಥಾನಗಳನ್ನು ನೀಡಿದ್ದೇವೆ. ಅಲ್ಲಾಹನು ಸ್ವತಃ ಸಂಭಾಷಣೆ ನಡೆಸಿದವರು ಅವರಲ್ಲಿದ್ದಾರೆ. ಇನ್ನು ಕೆಲವರಿಗೆ ಆತನು ಇತರ ನೆಲೆಗಳಲ್ಲಿ ಉನ್ನತ ಸ್ಥಾನಗಳನ್ನು ನೀಡಿದನು. ಕೊನೆಗೆ ಮರ್ಯಮರ ಪುತ್ರ 'ಈಸಾ'ರಿಗೆ ಸುವ್ಯಕ್ತ ದೃಷ್ಟಾಂತಗಳನ್ನು ನೀಡಿ, ಪವಿತ್ರ ಆತ್ಮದಿಂದ ಅವರಿಗೆ ಸಹಾಯ ಮಾಡಿದನು. ಅಲ್ಲಾಹನು ಇಚ್ಛಿಸುತ್ತಿದ್ದರೆ ಈ ಸಂದೇಶವಾಹಕರ ಅನಂತರ ಸುವ್ಯಕ್ತ ದೃಷ್ಟಾಂತಗಳನ್ನು ಕಂಡವರು ಪರಸ್ಪರ ಕಾದಾಡಲು ಸಾಧ್ಯವಿರಲಿಲ್ಲ. ಆದರೆ (ಅವರನ್ನು ಭಿನ್ನಾಭಿಪ್ರಾಯಗಳಿಂದ ಬಲಾತ್ಕಾರವಾಗಿ ತಡೆಯುವುದು ಅಲ್ಲಾಹನ ನಿಯಮವಾಗಿರಲಿಲ್ಲವಾದುದರಿಂದ) ಅವರು ಪರಸ್ಪರ ಭಿನ್ನಾಭಿಪ್ರಾಯ ತಾಳಿದರು. ಅನಂತರ ಕೆಲವರು ವಿಶ್ವಾಸವಿರಿಸಿದರು, ಇನ್ನು ಕೆಲವರು ನಿರಾಕರಣೆಯ ಮಾರ್ಗವನ್ನನುಸರಿಸಿದರು. ಅಲ್ಲಾಹನು ಇಚ್ಛಿಸುತ್ತಿದ್ದರೆ ಅವರು ಪರಸ್ಪರ ಹೊಡೆದಾಡುತ್ತಿರಲಿಲ್ಲ. ಆದರೆ ಅಲ್ಲಾಹನು ತಾನಿಚ್ಛಿಸಿದುದನ್ನೇ ಮಾಡುತ್ತಾನೆ.

يٰۤاَيُّهَا الَّذِيْنَ اٰمَنُوْۤا اَنْفِقُوْا مِمَّا رَزَقْنٰكُمْ
مِّنْ قَبْلِ اَنْ يَّاْتِىَ يَوْمٌ لَّا بَيْعٌ فِيْهِ وَلَا
خُلَّةٌ وَّلَا شَفَاعَةٌ ؕ وَالْكٰفِرُوْنَ هُمُ الظّٰلِمُوْنَ ﴿٢٥٤﴾

254. ಸತ್ಯವಿಶ್ವಾಸಿಗಳೇ, ವ್ಯಾಪಾರ ವಿನಿಮಯಗಳು ನಡೆಯದ, ಗೆಳೆತನಗಳೂ ಶಿಫಾರಸುಗಳೂ ಫಲಕಾರಿಯಾಗದ ಆ ದಿನ ಬರುವುದಕ್ಕಿಂತ ಮೊದಲೇ ನಾವು ನಿಮಗೊದಗಿಸಿರುವ ಸೊತ್ತು ವಿತ್ತಗಳಿಂದ ಖರ್ಚು ಮಾಡಿರಿ. ನಿರಾಕರಣೆಯ ನೀತಿಯನ್ನು ಹೊಂದಿದವರೇ ಅಕ್ರಮಿಗಳು.

اَللّٰهُ لَاۤ اِلٰهَ اِلَّا هُوَ ۚ اَلْحَىُّ الْقَيُّوْمُ ۚ لَا تَاْخُذُهٗ
سِنَةٌ وَّلَا نَوْمٌ ؕ لَهٗ مَا فِى السَّمٰوٰتِ وَمَا
فِى الْاَرْضِ ؕ مَنْ ذَا الَّذِىْ يَشْفَعُ عِنْدَهٗۤ
اِلَّا بِاِذْنِهٖ ؕ يَعْلَمُ مَا بَيْنَ اَيْدِيْهِمْ وَمَا
خَلْفَهُمْ ۚ وَلَا يُحِيْطُوْنَ بِشَىْءٍ مِّنْ عِلْمِهٖۤ اِلَّا

255. ಅಲ್ಲಾಹನು ಚಿರಂತನು, ಸ್ವಯಂಜೀವಂತನು. ಅಖಿಲ ಪ್ರಪಂಚದ ನಿಯಂತ್ರಕನಾದ ಆತನ ಹೊರತು ಆರಾಧ್ಯನಾರೂ ಇಲ್ಲ. ಅವನಿಗೆ ತೂಕಡಿಕೆಯಾಗಲೀ ನಿದ್ರೆಯಾಗಲೀ ಬಾಧಿಸುವುದಿಲ್ಲ. ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿ ಇರುವುದೆಲ್ಲವೂ ಆತನದೇ. ಆತನ ಸನ್ನಿಧಿಯಲ್ಲಿ ಆತನ ಅಪ್ಪಣೆಯಿಲ್ಲದೆ ಶಿಫಾರಸು ಮಾಡತಕ್ಕವನಾರಿದ್ದಾನೆ? ದಾಸರ ಮುಂದಿರುವುದನ್ನೂ ಆತನು ಬಲ್ಲನು. ಅವರಿಂದ ಮರೆಯಾಗಿರುವುದನ್ನೂ ಆತನು ಬಲ್ಲನು.

*ಇಲ್ಲಿಂದ **3ನೆಯ ಕಾಂಡ ಆರಂಭ.**

ಆತನು ಸ್ವತಃ ತಿಳಿಯಗೊಡಿಸುವ ಹೊರತು ಆತನ ಜ್ಞಾನ ಭಂಡಾರದಿಂದ ಯಾವ ವಿಷಯವನ್ನೂ ಅವರು ತಿಳಿಯಲಾರರು. ಅವನ ಅಧಿಕಾರವು[88] ಆಕಾಶಗಳನ್ನೂ ಭೂಮಿಯನ್ನೂ ವ್ಯಾಪಿಸಿದೆ. ಅವುಗಳ ಸಂರಕ್ಷಣೆಯು ಆತನಿಗೆ ದಣಿಸುವಂಥ ಕಾರ್ಯವಲ್ಲ. ಅವನು ಏಕೈಕ ಮಹೋನ್ನತನೂ ಸರ್ವ ಶ್ರೇಷ್ಠನೂ ಆಗಿರುತ್ತಾನೆ.

بِمَا شَاءَ ۚ وَسِعَ كُرْسِيُّهُ السَّمٰوٰتِ وَالْأَرْضَ ۖ
وَلَا يَئُودُهُ حِفْظُهُمَا ۚ وَهُوَ الْعَلِيُّ الْعَظِيمُ ﴿٢٥٥﴾

256. ಧರ್ಮದ ವಿಷಯದಲ್ಲಿ ಯಾವುದೇ ಒತ್ತಾಯ ಬಲಾತ್ಕಾರಗಳಿಲ್ಲ.[89] ಸನ್ಮಾರ್ಗವು ದುರ್ಮಾರ್ಗದಿಂದ ಬೇರ್ಪಡಿಸಲ್ಪಟ್ಟಿದೆ. ಇನ್ನು 'ತಾಗೂತ'(ಅತಿಕ್ರಮ)[90]ನ್ನು ನಿರಾಕರಿಸಿ ಅಲ್ಲಾಹನಲ್ಲಿ ವಿಶ್ವಾಸವಿಟ್ಟಾತನು ಎಂದೆಂದಿಗೂ ಮುರಿಯದಂತಹ ಬಲವಾದ ಆಧಾರವನ್ನು ನೆಚ್ಚಿಕೊಂಡನು. (ಅವನು ಆಶ್ರಯ ಪಡೆದ) ಅಲ್ಲಾಹನು ಸರ್ವಶ್ರುತನೂ ಸರ್ವಜ್ಞನೂ ಆಗಿರುತ್ತಾನೆ.

لَا إِكْرَاهَ فِي الدِّينِ ۖ قَدْ تَبَيَّنَ الرُّشْدُ مِنَ
الْغَيِّ ۚ فَمَنْ يَكْفُرْ بِالطَّاغُوتِ وَيُؤْمِنْ بِاللَّهِ
فَقَدِ اسْتَمْسَكَ بِالْعُرْوَةِ الْوُثْقَىٰ لَا انْفِصَامَ
لَهَا ۗ وَاللَّهُ سَمِيعٌ عَلِيمٌ ﴿٢٥٦﴾

257. ಅಲ್ಲಾಹನು ವಿಶ್ವಾಸಿಗಳ ರಕ್ಷಕ ಮಿತ್ರನಾಗಿರುತ್ತಾನೆ ಮತ್ತು ಅವನು ಇವರನ್ನು ಅಂಧಕಾರದಿಂದ ಹೊರತೆಗೆದು ಪ್ರಕಾಶಕ್ಕೆ ತರುತ್ತಾನೆ ಮತ್ತು ನಿರಾಕರಣೆ ಮಾರ್ಗವನ್ನನುಸರಿಸುವವರ ರಕ್ಷಕ ಮಿತ್ರರು ಅತಿಕ್ರಮಿ[91]ಗಳಾಗಿದ್ದಾರೆ. ಅವರು ಇವರನ್ನು ಪ್ರಕಾಶದಿಂದ ಅಂಧಕಾರಗಳ ಕಡೆಗೆ ಎಳೆದೊಯ್ಯುತ್ತಾರೆ. ಇವರು ನರಕಾಗ್ನಿಯವರಾಗಿದ್ದು ಸದಾ ಅಲ್ಲೇ ಇರುವರು.

اللَّهُ وَلِيُّ الَّذِينَ آمَنُوا يُخْرِجُهُمْ مِنَ
الظُّلُمَاتِ إِلَى النُّورِ ۖ وَالَّذِينَ كَفَرُوا أَوْلِيَاؤُهُمُ
الطَّاغُوتُ يُخْرِجُونَهُمْ مِنَ النُّورِ إِلَى الظُّلُمَاتِ ۗ
أُولَٰئِكَ أَصْحَابُ النَّارِ ۖ هُمْ فِيهَا خَالِدُونَ ﴿٢٥٧﴾

258. ನೀವೇನು ಇಬ್‌ರಾಹೀಮರೊಂದಿಗೆ ತರ್ಕ ಮಾಡಿದ ವ್ಯಕ್ತಿಯ[92] ಕುರಿತು ಗಮನಿಸಲಿಲ್ಲವೇ? ತರ್ಕವು ಇಬ್‌ರಾಹೀಮರ ಪ್ರಭು

أَلَمْ تَرَ إِلَى الَّذِي حَاجَّ إِبْرَاهِيمَ فِي رَبِّهِ أَنْ
آتَاهُ اللَّهُ الْمُلْكَ إِذْ قَالَ إِبْرَاهِيمُ رَبِّيَ الَّذِي

88. ಮೂಲದಲ್ಲಿ 'ಕುರ್ಸೀ' ಎಂಬ ಪದವನ್ನು ಉಪಯೋಗಿಸಲಾಗಿದೆ. ಸಾಮಾನ್ಯವಾಗಿ ಸರಕಾರ ಅಥವಾ ಅಧಿಕಾರದ ಬಗ್ಗೆ ಹೇಳುವಾಗ ಈ ಪದವನ್ನು ಸೂಚ್ಯವಾಗಿ ಪ್ರಯೋಗಿಸಲಾಗುತ್ತದೆ. ಇತರ ಭಾಷೆಗಳಲ್ಲೂ ಕುರ್ಚಿ ಅಥವಾ ಆಸನ ಎಂಬ ಪದವನ್ನು ಸಾಮಾನ್ಯವಾಗಿ ಆಡಳಿತಾಧಿಕಾರಕ್ಕೆ ಬಳಸಲಾಗುತ್ತದೆ. ಈ ಪದದಿಂದಾಗಿಯೇ ಈ ಸೂಕ್ತ 'ಆಯತುಲ್ ಕುರ್ಸೀ' ಎಂಬ ಹೆಸರಿನಿಂದ ಪ್ರಸಿದ್ಧವಿದೆ. ಇದರಲ್ಲಿ ಬೇರೆಲ್ಲಿಯೂ ಕಾಣಸಿಗದಂತಹ ರೀತಿಯಲ್ಲಿ ಅಲ್ಲಾಹನ ಸಂಪೂರ್ಣ ಮತ್ತು ಸಮಗ್ರ ಪರಿಚಯ ಮಾಡಿಸಲಾಗಿದೆ. ಆದ್ದರಿಂದಲೇ ಇದು ಪವಿತ್ರ ಕುರ್‌ಆನಿನ ಅತ್ಯಂತ ಶ್ರೇಷ್ಠ ವಾಕ್ಯವೆಂದು ಪ್ರವಾದಿವಚನದಲ್ಲಿ ಹೇಳಲಾಗಿದೆ.

89. ಅರ್ಥಾತ್- ಸತ್ಯವಿಶ್ವಾಸ ಸ್ವೀಕರಿಸುವಂತೆ ಯಾರನ್ನೂ ನಿರ್ಬಂಧಿಸುವಂತಿಲ್ಲ.

90. ತನ್ನ ನ್ಯಾಯಸಮ್ಮತ ಪರಿಧಿಯನ್ನು ಮೀರಿದ ಪ್ರತಿಯೊಬ್ಬ ವ್ಯಕ್ತಿಯನ್ನೂ ಅರ್ಥಕೋಶದಲ್ಲಿ 'ತಾಗೂತ್' ಎನ್ನಲಾಗುತ್ತದೆ. ಪವಿತ್ರ ಕುರ್‌ಆನಿನ ಪಾರಿಭಾಷಿಕದಲ್ಲಿ 'ತಾಗೂತ್' ಎಂದರೆ ದೇವನ ದಾಸ್ಯದ ಪರಿಧಿಯನ್ನು ಮೀರಿ ಸ್ವತಃ ದೇವತ್ವ ಮತ್ತು ಪ್ರಭುತ್ವವನ್ನು ವಾದಿಸಿಕೊಳ್ಳುವ ಹಾಗೂ ದೇವನ ದಾಸರಿಂದ ತನ್ನ ದಾಸ್ಯ ಮಾಡಿಸುವ ದಾಸನಾಗಿದ್ದಾನೆ.

91. ಇಲ್ಲಿ ತಾಗೂತ್ ಎಂಬ ಪದವನ್ನು ಅನೇಕ ತಾಗೂತ್‌ಗಳು ಎಂಬರ್ಥದಲ್ಲಿ ಉಪಯೋಗಿಸಲಾಗಿದೆ. ಅರ್ಥಾತ್- ದೇವನಿಂದ ವಿಮುಖನಾಗುವ ಮೂಲಕ ಮಾನವ ಒಬ್ಬ 'ತಾಗೂತ್'ನ ಕಪಿಮುಷ್ಠಿಯಲ್ಲಿ ಮಾತ್ರ ಸಿಲುಕುವುದಿಲ್ಲ, ಬದಲಾಗಿ ಹಲವಾರು ತಾಗೂತ್‌ಗಳು ಅವನ ಮೇಲೆ ಎರಗುತ್ತಾರೆ.

92. 'ವ್ಯಕ್ತಿ' ಎಂದರೆ 'ನಮ್ರೂದ್', ಅವನು ಹ. ಇಬ್‌ರಾಹೀಮರ(ಅ) ದೇಶವಾದ ಇರಾಕ್‌ನ ರಾಜನಾಗಿದ್ದ.

ಯಾರು ಎಂಬುದರ ಕುರಿತು ಮತ್ತು ಅಲ್ಲಾಹನು ಆ ವ್ಯಕ್ತಿಗೆ ಅಧಿಕಾರವನ್ನು ಕೊಟ್ಟಿದ್ದುದರ ಆಧಾರದಲ್ಲಿ. "ಜೀವನ ಮತ್ತು ಮರಣ ಯಾರ ಅಂಕೆಯಲ್ಲಿರುವುದೋ ಅವನು ನನ್ನ ಪ್ರಭು" ಎಂದು ಇಬ್‌ರಾಹೀಮರು ಹೇಳಿದಾಗ ಅವನು, "ಜೀವನ ಮತ್ತು ಮರಣ ನನ್ನ ಅಧಿಕಾರದಲ್ಲಿದೆ" ಎಂದನು. ಇಬ್‌ರಾಹೀಮರು, "ಸರಿ, ಹಾಗಾದರೆ ಅಲ್ಲಾಹನು ಸೂರ್ಯನನ್ನು ಪೂರ್ವ ದಿಕ್ಕಿನಿಂದ ಮೂಡಿಸುತ್ತಾನೆ. ನೀನು ಅದನ್ನು ಪಶ್ಚಿಮ ದಿಕ್ಕಿನಿಂದ ಮೂಡಿಸು" ಎಂದರು. ಇದನ್ನು ಕೇಳಿ ಆ ಸತ್ಯನಿಷೇಧಿ ದಿಗ್ಭ್ರಮೆಗೊಂಡನು. ಆದರೆ ಅಕ್ರಮಿಗಳಿಗೆ ಅಲ್ಲಾಹನು ಸನ್ಮಾರ್ಗವನ್ನು ತೋರಿಸು ವುದಿಲ್ಲ.

يُحْيِي وَيُمِيتُ قَالَ أَنَا أُحْيِي وَأُمِيتُ ۖ قَالَ
إِبْرَاهِيمُ فَإِنَّ اللَّهَ يَأْتِي بِالشَّمْسِ مِنَ الْمَشْرِقِ
فَأْتِ بِهَا مِنَ الْمَغْرِبِ فَبُهِتَ الَّذِي كَفَرَ ۗ
وَاللَّهُ لَا يَهْدِي الْقَوْمَ الظَّالِمِينَ ﴿٢٥٨﴾

259. ಅಥವಾ ತಲೆ ಕೆಳಗಾಗಿ ಬೊಕ್ಕ ಬೋರಲಾಗಿ ಬಿದ್ದಿದ್ದ ಗ್ರಾಮವೊಂದನ್ನು ಹಾದು ಹೋಗುತ್ತಿದ್ದ ಇನ್ನೋರ್ವ ವ್ಯಕ್ತಿಯ ದೃಷ್ಟಾಂತವನ್ನು ಗಮನಿಸಿರಿ. ಅವನು, "ನಾಶವಾಗಿದ್ದ ಈ ಗ್ರಾಮಕ್ಕೆ ಅಲ್ಲಾಹನು ಪುನಃ ಹೇಗೆ ಜೀವದಾನ ಮಾಡುವನು?" ಎಂದನು. ಆಗ ಅಲ್ಲಾಹನು ಅವನ ಪ್ರಾಣಹರಣಗೈದನು. ಅವನು ನೂರು ವರುಷಗಳ ತನಕ ಶವವಾಗಿ ಬಿದ್ದಿದ್ದನು. ಅನಂತರ ಅಲ್ಲಾಹನು ಅವನನ್ನು ಪುನಃ ಜೀವಂತಗೊಳಿಸಿ, "ನೀನು ಎಷ್ಟು ಕಾಲ ಬಿದ್ದುಕೊಂಡಿದ್ದೆ?" ಎಂದು ಕೇಳಿದನು. ಅವನು, "ಒಂದು ದಿನ ಅಥವಾ ಕೆಲವು ತಾಸುಗಳಿದ್ದಿರಬಹುದು" ಎಂದನು. "ಅಲ್ಲ; ನಿನ್ನ ಮೇಲೆ ನೂರು ವರುಷಗಳು ಇದೇ ಸ್ಥಿತಿಯಲ್ಲಿ ಸಂದುಹೋಗಿವೆ. ಈಗ ನಿನ್ನ ಆಹಾರವನ್ನೂ ಪಾನೀಯವನ್ನೂ ನೋಡು. ಅವುಗಳಲ್ಲಿ ಯಾವುದೇ ಮಾರ್ಪಾಟುಂಟಾಗಿಲ್ಲ. ಅತ್ತ ನಿನ್ನ ಕತ್ತೆಯನ್ನು ನೋಡು (ಅದರ ಅಸ್ಥಿಪಂಜರವೂ ಶಿಥಿಲವಾಗಿ ಹೋಗುತ್ತಲಿದೆ). ನಾವು ನಿನ್ನನ್ನು ಜನರಿಗೆ ಒಂದು ದೃಷ್ಟಾಂತವನ್ನಾಗಿ ಮಾಡಲಿಚ್ಛಿಸಿದುದ ರಿಂದ ಹೀಗೆ ಮಾಡಿದ್ದೇವು. ಮತ್ತೆ ನಾವು ಈ ಅಸ್ಥಿಪಂಜರವನ್ನೆಬ್ಬಿಸಿ ಅದರ ಮೇಲೆ ಮಾಂಸವನ್ನು ಹೇಗೆ ಹೊದಿಸಿ ಬಿಡುತ್ತೇ ವೆಂಬುದನ್ನು ನೋಡು" ಎಂದು ಅಲ್ಲಾಹನು ಹೇಳಿದನು. ಹೀಗೆ ವಸ್ತುಸ್ಥಿತಿ ಅವನ ಮುಂದೆ ವ್ಯಕ್ತವಾದಾಗ ಅವನು, "ಅಲ್ಲಾಹನು ಪ್ರತಿಯೊಂದು ವಸ್ತುವಿನ ಮೇಲೆ ಅಧಿಕಾರ ಹೊಂದಿ ದ್ದಾನೆಂಬುದನ್ನು ನಾನು ಬಲ್ಲೆ" ಎಂದನು.

أَوْ كَالَّذِي مَرَّ عَلَىٰ قَرْيَةٍ وَهِيَ خَاوِيَةٌ
عَلَىٰ عُرُوشِهَا قَالَ أَنَّىٰ يُحْيِي هَٰذِهِ اللَّهُ
بَعْدَ مَوْتِهَا ۖ فَأَمَاتَهُ اللَّهُ مِائَةَ عَامٍ
ثُمَّ بَعَثَهُ ۖ قَالَ كَمْ لَبِثْتَ ۖ قَالَ لَبِثْتُ
يَوْمًا أَوْ بَعْضَ يَوْمٍ ۖ قَالَ بَل لَّبِثْتَ مِائَةَ
عَامٍ فَانظُرْ إِلَىٰ طَعَامِكَ وَشَرَابِكَ لَمْ
يَتَسَنَّهْ ۖ وَانظُرْ إِلَىٰ حِمَارِكَ وَلِنَجْعَلَكَ
آيَةً لِّلنَّاسِ ۖ وَانظُرْ إِلَى الْعِظَامِ كَيْفَ
نُنشِزُهَا ثُمَّ نَكْسُوهَا لَحْمًا ۚ فَلَمَّا تَبَيَّنَ لَهُ
قَالَ أَعْلَمُ أَنَّ اللَّهَ عَلَىٰ كُلِّ شَيْءٍ قَدِيرٌ ﴿٢٥٩﴾

260. "ಪ್ರಭೂ, ಮೃತ್ಯುವಶವಾದವರನ್ನು ನೀನು ಹೇಗೆ ಪುನರ್ಭವ ಗೊಳಿಸುತ್ತೀ ಎಂಬುದನ್ನು ನನಗೆ ತೋರಿಸಿಕೊಡು" ಎಂದು

وَإِذْ قَالَ إِبْرَاهِيمُ رَبِّ أَرِنِي كَيْفَ تُحْيِي
الْمَوْتَىٰ ۖ قَالَ أَوَلَمْ تُؤْمِن ۖ قَالَ بَلَىٰ وَلَٰكِن

ಲِيَطْمَئِنَّ قَلْبِي ۖ قَالَ فَخُذْ أَرْبَعَةً مِنَ الطَّيْرِ
فَصُرْهُنَّ إِلَيْكَ ثُمَّ اجْعَلْ عَلَىٰ كُلِّ جَبَلٍ
مِنْهُنَّ جُزْءًا ثُمَّ ادْعُهُنَّ يَأْتِينَكَ سَعْيًا ۚ
وَاعْلَمْ أَنَّ اللَّهَ عَزِيزٌ حَكِيمٌ ﴿٢٦٠﴾ ع ٣٥ ٣

ಇಬ್‌ರಾಹೀಮರು ಕೇಳಿದ ಸಂದರ್ಭವನ್ನೂ ಸ್ಮರಿಸಿರಿ. "ಏನು, ನಿಮಗೆ ವಿಶ್ವಾಸವಿಲ್ಲವೇ" ಎಂದು ಕೇಳಿದಾಗ ಅವರು "ವಿಶ್ವಾಸವಿದೆ; ಆದರೆ ಮನಸ್ಸಂತೃಪ್ತಿ ಬಯಸುತ್ತೇನೆ"[93] ಎಂದರು. ಆಗ ಅಲ್ಲಾಹನು, "ಹಾಗಾದರೆ ನೀನು ನಾಲ್ಕು ಪಕ್ಷಿಗಳನ್ನು ಪಳಗಿಸಿ ಅನಂತರ ಅವುಗಳ ಒಂದೊಂದು ಭಾಗವನ್ನು ಒಂದೊಂದು ಬೆಟ್ಟದ ಮೇಲೆ ಇರಿಸು. ಆಮೇಲೆ ಅವುಗಳನ್ನು ಕೂಗಿ ಕರೆ. ಅವು ನಿನ್ನ ಬಳಿ ಧಾವಿಸಿ ಬರುವುವು. ಅಲ್ಲಾಹನು ಮಹಾ ಪ್ರತಾಪಿಯೂ ಯುಕ್ತಿಪೂರ್ಣನೂ ಆಗಿರುತ್ತಾನೆಂಬುದನ್ನು ಚೆನ್ನಾಗಿ ಅರಿತುಕೊ" ಎಂದನು.

مَثَلُ الَّذِينَ يُنْفِقُونَ أَمْوَالَهُمْ فِي سَبِيلِ
اللَّهِ كَمَثَلِ حَبَّةٍ أَنْبَتَتْ سَبْعَ سَنَابِلَ
فِي كُلِّ سُنْبُلَةٍ مِائَةُ حَبَّةٍ ۗ وَاللَّهُ
يُضَاعِفُ لِمَنْ يَشَاءُ ۗ وَاللَّهُ وَاسِعٌ عَلِيمٌ ﴿٢٦١﴾

261. ಅಲ್ಲಾಹನ ಮಾರ್ಗದಲ್ಲಿ ತಮ್ಮ ಸಂಪತ್ತನ್ನು ಖರ್ಚು ಮಾಡುವವರ ಖರ್ಚಿನ ಉಪಮೆ, ಒಂದು ಕಾಳನ್ನು ಬಿತ್ತಿ ಅದರಿಂದ ಏಳು ತೆನೆಗಳು ಹೊರಟು, ಪ್ರತಿಯೊಂದು ತೆನೆಯಲ್ಲಿ ನೂರು ಕಾಳುಗಳಿರುವಂತಿದೆ. ಇದೇ ರೀತಿಯಲ್ಲಿ ಅಲ್ಲಾಹನು ತಾನುದ್ದೇಶಿಸಿದವನ ಕರ್ಮಗಳಿಗೆ ವೃದ್ಧಿಯನ್ನು ದಯಪಾಲಿಸುತ್ತಾನೆ. ಅವನು ಅತ್ಯಂತ ಉದಾರಿಯೂ ಸರ್ವಜ್ಞನೂ ಆಗಿರುತ್ತಾನೆ.

الَّذِينَ يُنْفِقُونَ أَمْوَالَهُمْ فِي سَبِيلِ
اللَّهِ ثُمَّ لَا يُتْبِعُونَ مَا أَنْفَقُوا مَنًّا وَلَا
أَذًى ۙ لَهُمْ أَجْرُهُمْ عِنْدَ رَبِّهِمْ وَلَا
خَوْفٌ عَلَيْهِمْ وَلَا هُمْ يَحْزَنُونَ ﴿٢٦٢﴾

262. ಅಲ್ಲಾಹನ ಮಾರ್ಗದಲ್ಲಿ ತಮ್ಮ ಸಂಪತ್ತನ್ನು ಖರ್ಚು ಮಾಡುವವರ, ಖರ್ಚುಮಾಡಿದುದನ್ನು ಆಡಿಕೊಳ್ಳದವರ ಮತ್ತು ಪರಪೀಡನಗೈಯದವರ ಪ್ರತಿಫಲವು ಅವರ ಪ್ರಭುವಿನ ಬಳಿ ಇದೆ. ಅವರಿಗೆ ಯಾವತ್ತು ಭಯ ಮತ್ತು ವ್ಯಥೆಯ ಸಂಭವವಿಲ್ಲ.

قَوْلٌ مَعْرُوفٌ وَمَغْفِرَةٌ خَيْرٌ مِنْ صَدَقَةٍ
يَتْبَعُهَا أَذًى ۗ وَاللَّهُ غَنِيٌّ حَلِيمٌ ﴿٢٦٣﴾

263. ಒಂದು ಸವಿನುಡಿ ಮತ್ತು ಕ್ಷಮಾಗುಣವು ಮನನೋಯಿಸುವ ದಾನಕ್ಕಿಂತ ಉತ್ತಮ. ಅಲ್ಲಾಹನು ನಿರಪೇಕ್ಷನು ಮತ್ತು ಸಹನಶೀಲತೆ ಅವನ ವಿಶೇಷತೆಯಾಗಿದೆ.

يَا أَيُّهَا الَّذِينَ آمَنُوا لَا تُبْطِلُوا صَدَقَاتِكُمْ
بِالْمَنِّ وَالْأَذَىٰ كَالَّذِي يُنْفِقُ مَالَهُ
رِئَاءَ النَّاسِ وَلَا يُؤْمِنُ بِاللَّهِ وَالْيَوْمِ
الْآخِرِ ۖ فَمَثَلُهُ كَمَثَلِ صَفْوَانٍ عَلَيْهِ
تُرَابٌ فَأَصَابَهُ وَابِلٌ فَتَرَكَهُ صَلْدًا ۖ

264. ಓ ಸತ್ಯವಿಶ್ವಾಸಿಗಳೇ, ತನ್ನ ಸಂಪತ್ತನ್ನು ಆಡಂಬರಕ್ಕಾಗಿ ಖರ್ಚು ಮಾಡುವವನಂತೆ ಹಾಗೂ ಅಲ್ಲಾಹ್ ಮತ್ತು ಪರಲೋಕದಲ್ಲಿ ವಿಶ್ವಾಸವಿರಿಸದವನ ಹಾಗೆ ಉಪಕಾರಭಾರ ವಿರಿಸಿಯೂ ನೋಯಿಸಿಯೂ ನಿಮ್ಮ ದಾನಧರ್ಮಗಳನ್ನು ನೀವು ನಿಷ್ಫಲಗೊಳಿಸಿಕೊಳ್ಳಬೇಡಿರಿ. ಅವನ ಖರ್ಚಿನ ಉಪಮೆಯು - ಮಣ್ಣಿನ ಮೇಲ್ಪದರವಿರುವ ಒಂದು ಬಂಡೆಯಿದ್ದು ಜೋರಾಗಿ ಮಳೆ ಸುರಿದಾಗ ಮಣ್ಣೆಲ್ಲಾ ಕೊಚ್ಚಿ ಹೋಗಿ ಕೇವಲ ಬಂಡೆಯು

93. ಅರ್ಥಾತ್- ಪ್ರತ್ಯಕ್ಷ ದರ್ಶನದಿಂದಾಗುವ ಮನಸ್ಸಂತೃಪ್ತಿ.

ಮಾತ್ರ ಉಳಿದಿರುವಂತಿದೆ. ಇಂತಹವರು ತಾವು ದಾನ ಮಾಡಿ ಗಳಿಸಿದೆವೆಂದೆಣಿಸಿರುವ ಪುಣ್ಯವೇನೂ ಅವರ ಕೈ ಸೇರದು. ಸತ್ಯನಿಷೇಧಿಗಳಿಗೆ ಮಾರ್ಗದರ್ಶನ ಮಾಡುವ ಪರಿಪಾಠವನ್ನು ಅಲ್ಲಾಹನು ಇಟ್ಟುಕೊಂಡಿರುವುದಿಲ್ಲ.[94]

لَا يَقْدِرُونَ عَلَىٰ شَيْءٍ مِّمَّا كَسَبُوا ۗ وَاللَّهُ
لَا يَهْدِي الْقَوْمَ الْكَافِرِينَ ﴿٢٦٤﴾

265. ಇದಕ್ಕೆ ವ್ಯತಿರಿಕ್ತವಾಗಿ ತನ್ನ ಸಂಪತ್ತನ್ನು ಕೇವಲ ಅಲ್ಲಾಹನ ಸಂತೃಪ್ತಿಗಾಗಿ ಸಂಪೂರ್ಣ ಸ್ಥಿರಚಿತ್ತತೆ ಮತ್ತು ಉಪಶಾಂತಿಯಿಂದ ಖರ್ಚು ಮಾಡುವವರ ಖರ್ಚಿನ ಉಪಮೆ- ಒಂದು ಉನ್ನತ ಪಾತಳಿಯಲ್ಲಿ ಒಂದು ಉದ್ಯಾನವಿದ್ದು ಚೆನ್ನಾಗಿ ಮಳೆಗರೆದಾಗ ಅದು ಇಮ್ಮಡಿ ಫಲ ಕೊಡುವಂತೆ ಮತ್ತು ಒಂದು ವೇಳೆ ಜಡಿಮಳೆ ಬಾರದಿದ್ದರೂ ಲಘುವಾದ ಜಿನುಗು ಮಳೆಯೂ ಅದಕ್ಕೆ ಸಾಕಾಗುವಂತೆ. ನೀವು ಮಾಡುವುದೆಲ್ಲಾ ಅಲ್ಲಾಹನ ವೀಕ್ಷಣೆಯಲ್ಲಿದೆ.

وَمَثَلُ الَّذِينَ يُنفِقُونَ أَمْوَالَهُمُ ابْتِغَاءَ
مَرْضَاتِ اللَّهِ وَتَثْبِيتًا مِّنْ أَنفُسِهِمْ كَمَثَلِ
جَنَّةٍ بِرَبْوَةٍ أَصَابَهَا وَابِلٌ فَآتَتْ أُكُلَهَا
ضِعْفَيْنِ فَإِن لَّمْ يُصِبْهَا وَابِلٌ فَطَلٌّ ۗ
وَاللَّهُ بِمَا تَعْمَلُونَ بَصِيرٌ ﴿٢٦٥﴾

266. ನಿಮ್ಮಲ್ಲೊಬ್ಬನ ಬಳಿ ತಳದಲ್ಲಿ ಕಾಲುವೆಗಳು ಹರಿಯುತ್ತಿರುವ, ಖರ್ಜೂರ, ದ್ರಾಕ್ಷೆ ಮತ್ತು ನಾನಾ ವಿಧದ ಫಲಗಳಿಂದ ತುಂಬಿದ ಒಂದು ತೋಟವಿದ್ದು, ಅವನು ಸ್ವತಃ ವೃದ್ಧನಾಗಿ ಅವನ ಎಳೆ ಹರೆಯದ ಮಕ್ಕಳು ದುರ್ಬಲರಾಗಿದ್ದ ಸ್ಥಿತಿಯಲ್ಲಿ ಅದು (ಆ ತೋಟ) ಒಂದು ಅತ್ಯುಷ್ಣ ಚಂಡಮಾರುತಕ್ಕೆ ಸಿಲುಕಿ ಸುಟ್ಟು ಹೋಗುವುದನ್ನು ಅವನು ಇಷ್ಟಪಡುವನೇ?[95] ಹೀಗೆ ನೀವು ಚಿಂತನೆ ಮಾಡಬಹುದೆಂದು ಅಲ್ಲಾಹನು ನಿಮ್ಮ ಮುಂದೆ ದೃಷ್ಟಾಂತಗಳನ್ನು ವಿವರಿಸುತ್ತಾನೆ.

أَيَوَدُّ أَحَدُكُمْ أَن تَكُونَ لَهُ جَنَّةٌ مِّن
نَّخِيلٍ وَأَعْنَابٍ تَجْرِي مِن تَحْتِهَا
الْأَنْهَارُ لَهُ فِيهَا مِن كُلِّ الثَّمَرَاتِ وَ
أَصَابَهُ الْكِبَرُ وَلَهُ ذُرِّيَّةٌ ضُعَفَاءُ فَأَصَابَهَا
إِعْصَارٌ فِيهِ نَارٌ فَاحْتَرَقَتْ ۗ كَذَٰلِكَ
يُبَيِّنُ اللَّهُ لَكُمُ الْآيَاتِ لَعَلَّكُمْ تَتَفَكَّرُونَ ﴿٢٦٦﴾

267. ಓ ಸತ್ಯವಿಶ್ವಾಸಿಗಳೇ, ನೀವು ಸಂಪಾದಿಸಿದ ಸಂಪತ್ತಿನಿಂದ ಮತ್ತು ನಾವು ನಿಮಗಾಗಿ ಭೂಮಿಯಿಂದ ಉತ್ಪಾದಿಸಿದವುಗಳಿಂದ ಉತ್ತಮವಾದವುಗಳನ್ನು ದೇವ ಮಾರ್ಗದಲ್ಲಿ ಖರ್ಚು ಮಾಡಿರಿ. ಅವನ ಮಾರ್ಗದಲ್ಲಿ ಕೊಡಲು ಅತ್ಯಂತ ಕೆಟ್ಟ ವಸ್ತುವನ್ನು ಪ್ರತ್ಯೇಕಿಸಿಡಲು ಪ್ರಯತ್ನಿಸಬಾರದು. ವಸ್ತುತಃ ಯಾರಾದರೂ

يَا أَيُّهَا الَّذِينَ آمَنُوا أَنفِقُوا مِن طَيِّبَاتِ
مَا كَسَبْتُمْ وَمِمَّا أَخْرَجْنَا لَكُم مِّنَ
الْأَرْضِ ۖ وَلَا تَيَمَّمُوا الْخَبِيثَ مِنْهُ

94. ಇಲ್ಲಿ ಸತ್ಯನಿಷೇಧಿ ಎಂಬ ಪದ ಕೃತಘ್ನ ಮತ್ತು ಅನುಗ್ರಹಗಳನ್ನು ನಿರಾಕರಿಸುವವನೆಂಬ ಅರ್ಥದಲ್ಲಿ ಪ್ರಯೋಗವಾಗಿದೆ.

95. ಅರ್ಥಾತ್- ನಿಮ್ಮ ಇಡೀ ಜೀವನ ಸಂಪಾದನೆಯಿಂದ ಪ್ರಯೋಜನ ಪಡೆಯಲು ನೀವು ಅತಿ ಹೆಚ್ಚು ನಿರ್ಬಂಧಿತರಾಗಿದ್ದ ಮತ್ತು ಮತ್ತೊಮ್ಮೆ ಸಂಪಾದಿಸುವ ಅವಕಾಶವೂ ಇಲ್ಲದಿರುವ ಸೂಕ್ಷ್ಮ ಘಟ್ಟದಲ್ಲಿ ಅದು ಸರ್ವನಾಶವಾಗುವುದನ್ನು ನೀವು ಇಷ್ಟಪಡುತ್ತೀರಾ? ಹಾಗಾದರೆ ಲೋಕದಲ್ಲಿ ಜೀವಿತಾವಧಿಯನ್ನು ಕಳೆದ ನಂತರ ಪರಲೋಕಕ್ಕೆ ತಲಪಿದಾಗ ಇಲ್ಲಿ ಲೋಕದ ನಮ್ಮೆಲ್ಲಾ ಸಾಧನೆಗಳಿಗೆ ಯಾವ ಬೆಲೆಯೂ ಇಲ್ಲ, ಲೋಕದಲ್ಲಿ ನಾವು ಸಂಪಾದಿಸಿದ್ದೆಲ್ಲವೂ ಅಲ್ಲೇ ಉಳಿಯಿತು. ಪರಲೋಕದ ಸವಿಯುಣ್ಣಲು ನಾವು ಅಲ್ಲಿ ಏನನ್ನೂ ಸಂಪಾದಿಸಲೇ ಇಲ್ಲ ಎಂದು ಏಕಾಏಕಿಯಾಗಿ ತಿಳಿದುಬಿಡುವ ರೀತಿಯಲ್ಲಿ ಪರಲೋಕಕ್ಕೆ ಪಾದಾರ್ಪಣೆ ಮಾಡಲು ನೀವು ಇಚ್ಛಿಸುವುದಾದರೂ ಹೇಗೆ?

ಅದೇ ವಸ್ತುವನ್ನು ನಿಮಗೆ ಕೊಟ್ಟಾಗ ಅಲಕ್ಷಿಸುವ ಹೊರತು ನೀವೂ ಅದನ್ನು ಸ್ವೀಕರಿಸಲು ಇಷ್ಟಪಡಲಾರಿರಿ. ಅಲ್ಲಾಹನು ನಿರಪೇಕ್ಷನಾಗಿದ್ದು ಅತ್ಯುನ್ನತ ಗುಣವಿಶೇಷಗಳನ್ನು ಹೊಂದಿದವ ನಾಗಿರುತ್ತಾನೆ.

تُنْفِقُوْنَ وَلَسْتُمْ بِاٰخِذِيْهِ اِلَّآ اَنْ
تُغْمِضُوْا فِيْهِ ؕ وَاعْلَمُوْٓا اَنَّ اللّٰهَ غَنِيٌّ حَمِيْدٌ ﴿۲۶۷﴾

268. ಶೈತಾನನು ನಿಮ್ಮನ್ನು ದಾರಿದ್ರ್ಯದಿಂದ ಭಯಭೀತಗೊಳಿಸುತ್ತಾನೆ ಮತ್ತು ಅಶ್ಲೀಲ ಕಾರ್ಯಗಳನ್ನೆಸಗುವ ಪ್ರಚೋದನೆಯನ್ನೀಯುತ್ತಾನೆ. ಆದರೆ, ಅಲ್ಲಾಹನು ನಿಮಗೆ ತನ್ನ ಕ್ಷಮೆ ಹಾಗೂ ಅನುಗ್ರಹದ ವಚನವನ್ನೀಯುತ್ತಾನೆ. ಅಲ್ಲಾಹನು ಮಹಾ ವಿಶಾಲನೂ ಸರ್ವಜ್ಞನೂ ಆಗಿರುತ್ತಾನೆ.

اَلشَّيْطٰنُ يَعِدُكُمُ الْفَقْرَ وَيَاْمُرُكُمْ
بِالْفَحْشَآءِ ۚ وَاللّٰهُ يَعِدُكُمْ مَّغْفِرَةً مِّنْهُ
وَفَضْلًا ؕ وَاللّٰهُ وَاسِعٌ عَلِيْمٌ ﴿۲۶۸﴾

269. ಅವನು ತನಗಿಷ್ಟ ಬಂದವರಿಗೆ 'ಸದ್ವಿವೇಕ' ಪ್ರದಾನ ಮಾಡುತ್ತಾನೆ. ಸದ್ವಿವೇಕ ಪ್ರಾಪ್ತವಾದವನಿಗೆ ವಾಸ್ತವದಲ್ಲಿ ಮಹಾ ಸಂಪತ್ತು ಪ್ರಾಪ್ತವಾಯಿತೆಂದೇ ಅರ್ಥ. ಇವುಗಳಿಂದ ಬುದ್ಧಿಜೀವಿಗಳು ಮಾತ್ರ ಉಪದೇಶ ಪಡೆಯುತ್ತಾರೆ.

يُّؤْتِي الْحِكْمَةَ مَنْ يَّشَآءُ ۚ وَمَنْ يُّؤْتَ
الْحِكْمَةَ فَقَدْ اُوْتِيَ خَيْرًا كَثِيْرًا ؕ وَمَا
يَذَّكَّرُ اِلَّآ اُولُوا الْاَلْبَابِ ﴿۲۶۹﴾

270. ನೀವು ಖರ್ಚು ಮಾಡಿದುದೂ ನೀವು ಹರಕೆ[96] ಹೊತ್ತುದೂ ಅಲ್ಲಾಹನಿಗೆ ತಿಳಿದಿದೆ. ಅಕ್ರಮಿಗಳಿಗೆ ಸಹಾಯಕರು ಯಾರೂ ಇಲ್ಲ.

وَمَآ اَنْفَقْتُمْ مِّنْ نَّفَقَةٍ اَوْ نَذَرْتُمْ مِّنْ
نَّذْرٍ فَاِنَّ اللّٰهَ يَعْلَمُهٗ ؕ وَمَا لِلظّٰلِمِيْنَ
مِنْ اَنْصَارٍ ﴿۲۷۰﴾

271. ನಿಮ್ಮ ದಾನಧರ್ಮಗಳನ್ನು ಬಹಿರಂಗವಾಗಿ ಕೊಡುವುದಿದ್ದರೂ ಒಳ್ಳೆಯದೇ. ಆದರೆ ರಹಸ್ಯವಾಗಿ ಬಡಬಗ್ಗರಿಗೆ ಕೊಡುವುದು ಹೆಚ್ಚು ಉತ್ತಮ. ಈ ಕ್ರಮದಿಂದಾಗಿ ನಿಮ್ಮ ಹಲವಾರು ದೋಷಗಳು ಪರಿಹಾರಗೊಳ್ಳುವುವು. ಅಲ್ಲಾಹನಿಗಂತೂ ನೀವು ಮಾಡುತ್ತಿರುವುದರ ಅರಿವು ಇದ್ದೇ ಇದೆ.

اِنْ تُبْدُوا الصَّدَقٰتِ فَنِعِمَّا هِيَ ۚ وَاِنْ
تُخْفُوْهَا وَتُؤْتُوْهَا الْفُقَرَآءَ فَهُوَ خَيْرٌ
لَّكُمْ ؕ وَيُكَفِّرُ عَنْكُمْ مِّنْ سَيِّاٰتِكُمْ ؕ
وَاللّٰهُ بِمَا تَعْمَلُوْنَ خَبِيْرٌ ﴿۲۷۱﴾

272. ಜನರಿಗೆ ಸನ್ಮಾರ್ಗ ನೀಡುವ ಹೊಣೆಗಾರಿಕೆಯೇನೂ ನಿಮ್ಮ ಮೇಲಿಲ್ಲ. ಅಲ್ಲಾಹನು ತಾನಿಚ್ಛಿಸಿದಾತನಿಗೆ ಸನ್ಮಾರ್ಗ ನೀಡುತ್ತಾನೆ. ನೀವು ದಾನಧರ್ಮಗಳಲ್ಲಿ ಖರ್ಚು ಮಾಡುವುದೆಲ್ಲಾ ನಿಮ್ಮ

لَيْسَ عَلَيْكَ هُدٰىهُمْ وَلٰكِنَّ اللّٰهَ يَهْدِيْ
مَنْ يَّشَآءُ ؕ وَمَا تُنْفِقُوْا مِنْ خَيْرٍ فَلِاَنْفُسِكُمْ

96. ಹರಕೆ ಎಂದರೆ ವ್ಯಕ್ತಿ ತನ್ನ ಇಷ್ಟಾರ್ಥ ಪೂರ್ತಿಯಾದರೆ ತನ್ನ ಮೇಲೆ ಕಡ್ಡಾಯವಲ್ಲದ ಸತ್ಕರ್ಮವೊಂದನ್ನು ಮಾಡುವ ಬಗ್ಗೆ ಕರಾರು ಮಾಡುವುದಾಗಿದೆ. ಅದು ಅಲ್ಲಾಹನೊಂದಿಗೆ ಯಾಚಿಸಲಾದ ಧರ್ಮಸಮ್ಮತವಾದ ಇಷ್ಟಾರ್ಥವಾಗಿದ್ದರೆ ಮತ್ತು ಅದು ಪೂರ್ತಿಯಾದರೆ ಅವನು ಮಾಡಬೇಕೆಂದು ಭಾವಿಸಿರುವ ಕೆಲಸವೂ ಅಲ್ಲಾಹನಿಗೆ ಸಲ್ಲುವಂತಹುದೇ ಆಗಿದ್ದರೆ ಅಂತಹ ಹರಕೆ ದೇವಾನುಸರಣೆಯಲ್ಲಾಗಿದೆ. ಅದನ್ನು ಪೂರ್ತೀಕರಿಸುವುದು ಪುಣ್ಯದಾಯಕವಾಗಿದೆ. ಅನ್ಯಥಾ ಹಾಗೆ ಹರಕೆ ಹೊರುವುದು ಪಾಪವಾಗಿದೆ ಮತ್ತು ಅದನ್ನು ಈಡೇರಿಸುವುದು ಶಿಕ್ಷಾರ್ಹವಾಗಿದೆ.

ಸ್ವಂತದ ಒಳಿತಿಗಾಗಿ ಮಾತ್ರ. ಅಲ್ಲಾಹನ ಸಂಪ್ರೀತಿಯನ್ನು ಬಯಸಿಯೇ ನೀವು ಖರ್ಚು ಮಾಡುತ್ತೀರಷ್ಟೆ. ಹಾಗಿದ್ದರೆ ನೀವು ದಾನಧರ್ಮಗಳಲ್ಲಿ ಖರ್ಚು ಮಾಡುವ ಸಂಪತ್ತಿನ ಸಂಪೂರ್ಣ ಪ್ರತಿಫಲ ನಿಮಗೆ ಕೊಡಲಾಗುವುದು. ನಿಮ್ಮ ಹಕ್ಕುಚ್ಯುತಿ ಖಂಡಿತ ಆಗಲಾರದು.

وَمَا تُنْفِقُوْنَ اِلَّا ابْتِغَآءَ وَجْهِ اللّٰهِ ؕ وَمَا
تُنْفِقُوْا مِنْ خَيْرٍ يُّوَفَّ اِلَيْكُمْ وَاَنْتُمْ لَا
تُظْلَمُوْنَ ﴿۲۷۲﴾

273. ಅಲ್ಲಾಹನ ಮಾರ್ಗದಲ್ಲಿ ಕಾರ್ಯವೆಸಗುವ ಭರದಲ್ಲಿ ತಮ್ಮ ಸ್ವಂತ ಜೀವನೋಪಾಯಕ್ಕಾಗಿ ಭೂಮಿಯಲ್ಲಿ ಶ್ರಮ ಪಡಲು ಸಾಧ್ಯವಾಗದಿರುವ ಬಡಜನರು ಮುಖ್ಯವಾಗಿ ಸಹಾಯಕ್ಕೆ ಅರ್ಹರಾಗಿದ್ದಾರೆ. ಅರಿವಿಲ್ಲದವನು ಅವರ ಸ್ವಾಭಿಮಾನವನ್ನು ಕಂಡು ಅವರು ಸ್ಥಿತಿವಂತರಾಗಿದ್ದಾರೆಂದೇ ಊಹಿಸುತ್ತಾನೆ. ನೀವು ಅವರ ಮುಖಭಾವಗಳಿಂದ ಅವರ ಆಂತರಿಕ ಸ್ಥಿತಿಯನ್ನು ತಿಳಿದುಕೊಳ್ಳಬಲ್ಲಿರಿ. ಆದರೆ, ಅವರು ಜನರ ಬೆಂಬತ್ತಿ ಬೇಡುವವರಲ್ಲ. ಅವರ ಸಹಾಯಾರ್ಥವಾಗಿ ನೀವು ಖರ್ಚು ಮಾಡುವ ಸಂಪತ್ತು ಅಲ್ಲಾಹನಿಂದ ಮರೆಯಾಗಿರದು.

لِلْفُقَرَآءِ الَّذِيْنَ اُحْصِرُوْا فِىْ سَبِيْلِ اللّٰهِ لَا
يَسْتَطِيْعُوْنَ ضَرْبًا فِى الْاَرْضِ يَحْسَبُهُمُ
الْجَاهِلُ اَغْنِيَآءَ مِنَ التَّعَفُّفِ ۚ تَعْرِفُهُمْ
بِسِيْمٰهُمْ ۚ لَا يَسْـَٔلُوْنَ النَّاسَ اِلْحَافًا ؕ وَمَا
تُنْفِقُوْا مِنْ خَيْرٍ فَاِنَّ اللّٰهَ بِهٖ عَلِيْمٌ ﴿۲۷۳﴾

274. ತಮ್ಮ ಸಂಪತ್ತನ್ನು ಆಹೋರಾತ್ರಿ ರಹಸ್ಯವಾಗಿಯೂ ಬಹಿರಂಗ ವಾಗಿಯೂ ಖರ್ಚು ಮಾಡುವವರ ಪ್ರತಿಫಲ ಅವರ ಪ್ರಭುವಿನ ಬಳಿ ಇದೆ. ಅವರಿಗೆ ಯಾವ ಭಯವೂ ವ್ಯಥೆಯೂ ಇರುವುದಿಲ್ಲ.

اَلَّذِيْنَ يُنْفِقُوْنَ اَمْوَالَهُمْ بِالَّيْلِ وَالنَّهَارِ
سِرًّا وَّعَلَانِيَةً فَلَهُمْ اَجْرُهُمْ عِنْدَ رَبِّهِمْ ۚ
وَلَا خَوْفٌ عَلَيْهِمْ وَلَا هُمْ يَحْزَنُوْنَ ﴿۲۷۴﴾

275. ಆದರೆ ಬಡ್ಡಿ ತಿನ್ನುವವರ ಅವಸ್ಥೆಯು ಶೈತಾನನ ಸೋಂಕಿನಿಂದ ಹುಚ್ಚನಾದವನಂತಿದೆ.[97] ಅವರು, 'ವ್ಯಾಪಾರವೂ ಬಡ್ಡಿಯಂತೆಯೇ ಇದೆಯಲ್ಲವೇ?'[98] ಎಂದೆನ್ನುವುದೇ ಈ ಅವಸ್ಥೆಯಲ್ಲಿ ಸಿಲುಕಿ ಬಿದ್ದಿರಲು ಕಾರಣ. ವಸ್ತುತಃ ಅಲ್ಲಾಹನು ವ್ಯಾಪಾರವನ್ನು ಧರ್ಮಸಮ್ಮತ ಗೊಳಿಸಿರುತ್ತಾನೆ ಮತ್ತು ಬಡ್ಡಿಯನ್ನು ನಿಷಿದ್ಧಗೊಳಿಸಿರುತ್ತಾನೆ. ಆದುದರಿಂದ ತನ್ನ ಪ್ರಭುವಿನ ವತಿಯಿಂದ ಈ ಉಪದೇಶ ತಲಪಿದಾತನು ಮುಂದೆ ಬಡ್ಡಿಯ ವ್ಯವಹಾರವನ್ನು ವರ್ಜಿಸಿದರೆ, ಗತಕಾಲದಲ್ಲಿ ತಿಂದುದು ತಿಂದಾಯಿತು ಮತ್ತು

اَلَّذِيْنَ يَاْكُلُوْنَ الرِّبٰوا لَا يَقُوْمُوْنَ اِلَّا كَمَا
يَقُوْمُ الَّذِىْ يَتَخَبَّطُهُ الشَّيْطٰنُ مِنَ الْمَسِّ ؕ
ذٰلِكَ بِاَنَّهُمْ قَالُوْٓا اِنَّمَا الْبَيْعُ مِثْلُ الرِّبٰوا ۘ
وَاَحَلَّ اللّٰهُ الْبَيْعَ وَحَرَّمَ الرِّبٰوا ؕ فَمَنْ
جَآءَهٗ مَوْعِظَةٌ مِّنْ رَّبِّهٖ فَانْتَهٰى فَلَهٗ
مَا سَلَفَ ؕ وَاَمْرُهٗٓ اِلَى اللّٰهِ ؕ وَمَنْ عَادَ فَاُولٰٓئِكَ

97. ಅರಬರು ಹುಚ್ಚನನ್ನು 'ಮಜ್ನೂನ್' ಅರ್ಥಾತ್ ಸಮ್ಮೋಹಿತನೆಂದು ಕರೆಯುತ್ತಿದ್ದರು. ಯಾವುದಾದರೂ ವ್ಯಕ್ತಿಯ ಬಗ್ಗೆ ಅವನು ಹುಚ್ಚನಾಗಿದ್ದಾನೆ ಎನ್ನಬೇಕಾದರೆ ಅವನಿಗೆ ಯಕ್ಷಬಾಧೆ ತಟ್ಟಿದೆ ಎನ್ನುತ್ತಿದ್ದರು. ಈ ನುಡಿಗಟ್ಟನ್ನೇ ಉಪಯೋಗಿಸಿ ಪವಿತ್ರ ಕುರ್‌ಆನ್ ಬಡ್ಡಿಕೋರನನ್ನು ಬುದ್ಧಿಭ್ರಮಣೆಯಾದವನಿಗೆ ಹೋಲಿಸಿದೆ.

98. ಅರ್ಥಾತ್- ಅವರ ದೃಷ್ಟಿಕೋನದಲ್ಲಿರುವ ದೋಷವೇನೆಂದರೆ ಅವರು ವ್ಯಾಪಾರದಲ್ಲಿ ಅಸಲಿನ ಮೇಲೆ ಪಡೆಯಲಾಗುವ ಲಾಭ ಮತ್ತು ಬಡ್ಡಿಯ ನಡುವೆ ವ್ಯತ್ಯಾಸ ಕಲ್ಪಿಸುವುದಿಲ್ಲ. ಅವೆರಡೂ ಒಂದೇ ತೆರನಾದವು ಎಂದು ಅವರು ಭಾವಿಸುತ್ತಾರೆ. ವ್ಯಾಪಾರದಲ್ಲಿ ತೊಡಗಿಸಲಾದ ಹಣಕ್ಕೆ ಲಾಭ ಧರ್ಮಸಮ್ಮತವೆಂದಾದರೆ, ಸಾಲ ನೀಡಲ್ಪಟ್ಟ ಹಣಕ್ಕೆ ಲಾಭ ಪಡೆದರೆ ಅದು ನಿಷಿದ್ಧವಾಗುವುದು ಹೇಗೆ? ಎಂದು ಅವರು ವಾದಿಸುತ್ತಿದ್ದರು.

أَصْحَٰبُ ٱلنَّارِ ۖ هُمْ فِيهَا خَٰلِدُونَ ﴿٢٧٥﴾

ಅವರ ಪ್ರಕರಣವು ಅಲ್ಲಾಹನ ವಶವಿದೆ.[99] ಈ ಆದೇಶದ ಅನಂತರವೂ ಈ ಕೃತ್ಯವನ್ನು ಪುನರಾವರ್ತಿಸಿದರೆ, ಅಂತಹವರು ನರಕವಾಸಿಗಳಾಗಿದ್ದು ಸದಾ ಅಲ್ಲೇ ನರಳುತ್ತಿರುವರು.

يَمْحَقُ ٱللَّهُ ٱلرِّبَوٰا۟ وَيُرْبِى ٱلصَّدَقَٰتِ ۗ وَٱللَّهُ
لَا يُحِبُّ كُلَّ كَفَّارٍ أَثِيمٍ ﴿٢٧٦﴾

276. ಅಲ್ಲಾಹನು ಬಡ್ಡಿಯ ವ್ಯವಹಾರವನ್ನು ಅಳಿಸಿಬಿಡುತ್ತಾನೆ ಮತ್ತು ದಾನಧರ್ಮಗಳನ್ನು ವೃದ್ಧಿಸುತ್ತಾನೆ. ಅಲ್ಲಾಹನು ಕೃತಘ್ನ ದುಷ್ಕರ್ಮಿಗಳನ್ನು ಮೆಚ್ಚುವುದಿಲ್ಲ.

إِنَّ ٱلَّذِينَ ءَامَنُوا۟ وَعَمِلُوا۟ ٱلصَّٰلِحَٰتِ وَ
أَقَامُوا۟ ٱلصَّلَوٰةَ وَءَاتَوُا۟ ٱلزَّكَوٰةَ لَهُمْ أَجْرُهُمْ
عِندَ رَبِّهِمْ وَلَا خَوْفٌ عَلَيْهِمْ وَلَا
هُمْ يَحْزَنُونَ ﴿٢٧٧﴾

277. ವಿಶ್ವಾಸವಿರಿಸುವವರ, ಸತ್ಕರ್ಮಗಳನ್ನು ಮಾಡುವವರ, ನಮಾಝನ್ನು ಸಂಸ್ಥಾಪಿಸುವವರ ಮತ್ತು ಝಕಾತ್ ಕೊಡುವವರ ಪ್ರತಿಫಲ ನಿಶ್ಚಯವಾಗಿಯೂ ಅವರ ಪ್ರಭುವಿನ ಬಳಿ ಇದೆ. ಅವರಿಗೆ ಯಾವ ಭಯವೂ ವ್ಯಥೆಯೂ ಇರುವುದಿಲ್ಲ.

يَٰٓأَيُّهَا ٱلَّذِينَ ءَامَنُوا۟ ٱتَّقُوا۟ ٱللَّهَ وَذَرُوا۟ مَا
بَقِىَ مِنَ ٱلرِّبَوٰٓا۟ إِن كُنتُم مُّؤْمِنِينَ ﴿٢٧٨﴾

278. ಓ ಸತ್ಯವಿಶ್ವಾಸಿಗಳೇ! ಅಲ್ಲಾಹನನ್ನು ಭಯಪಡಿರಿ. ನೀವು ನಿಜಕ್ಕೂ ವಿಶ್ವಾಸಿಗಳಾಗಿರುವಿರಾದರೆ, ಜನರಿಂದ ನಿಮಗೆ ಬರತಕ್ಕ ಬಡ್ಡಿಯನ್ನು ಬಿಟ್ಟುಬಿಡಿರಿ.

فَإِن لَّمْ تَفْعَلُوا۟ فَأْذَنُوا۟ بِحَرْبٍ مِّنَ ٱللَّهِ
وَرَسُولِهِۦ ۖ وَإِن تُبْتُمْ فَلَكُمْ رُءُوسُ
أَمْوَٰلِكُمْ لَا تَظْلِمُونَ وَلَا تُظْلَمُونَ ﴿٢٧٩﴾

279. ನೀವು ಹಾಗೆ ಮಾಡದಿದ್ದರೆ ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಕಡೆಯಿಂದ ನಿಮ್ಮ ವಿರುದ್ಧ ಯುದ್ಧ ಘೋಷಣೆಯಿದೆಯೆಂದು ನಿಮಗೆ ತಿಳಿದಿರಲಿ.[100] ಇನ್ನಾದರೂ ಪಶ್ಚಾತ್ತಾಪ ಪಟ್ಟರೆ (ಮತ್ತು ಬಡ್ಡಿಯನ್ನು ವರ್ಜಿಸಿದರೆ) ಅಸಲು ಹಣ ಪಡೆಯಲು ನೀವು ಹಕ್ಕುದಾರರಾಗಿರುತ್ತೀರಿ. ನೀವು ಅಕ್ರಮವೆಸಗಲೂ ಬಾರದು. ನಿಮ್ಮ ಮೇಲೆ ಅಕ್ರಮವಾಗಲೂ ಬಾರದು.

99. ಅವನು ತಿಂದು ಬಿಟ್ಟ ಬಡ್ಡಿಯನ್ನು ಅಲ್ಲಾಹನು ಮನ್ನಿಸುತ್ತಾನೆಂದು ಇಲ್ಲಿ ಹೇಳಲಾಗಿಲ್ಲ. ಬದಲಾಗಿ ಅದರ ತೀರ್ಮಾನ ಅಲ್ಲಾಹನ ಕೈಯಲ್ಲಿದೆ ಎಂದು ಹೇಳಲಾಗಿದೆ. ಆದ್ದರಿಂದ "ತಿಂದುದು ತಿಂದಾಯಿತು" ಎಂದು ಹೇಳಿದರೆ ಅದನ್ನು ಅಲ್ಲಾಹನು ಕ್ಷಮಿಸಿದ್ದಾನೆ ಎಂದು ಅರ್ಥವಲ್ಲ. ಬದಲಾಗಿ ಆ ಮೂಲಕ ಕಾನೂನಿನಲ್ಲಿರುವ ರಿಯಾಯಿತಿಯನ್ನು ಮಾತ್ರ ಸೂಚಿಸಲಾಗಿದೆ. ಅಂದರೆ ಒಬ್ಬನು ಬಡ್ಡಿ ತಿಂದಿದ್ದರೆ ಅದನ್ನು ಮರಳಿಸುವ ಬೇಡಿಕೆಯನ್ನು ಕಾನೂನಿನ ಮೂಲಕ ಮುಂದಿಡಲಾಗದೆಂದು ಈ ಸೂಕ್ತ ಸೂಚಿಸುತ್ತದೆ.

100. ಈ ಸೂಕ್ತ ಮಕ್ಕಾ ವಿಜಯದ ನಂತರ ಅವತೀರ್ಣಗೊಂಡಿತ್ತು. ಆಗ ಅರಬ್ ಜಗತ್ತು ಇಸ್ಲಾಮೀ ಸರಕಾರದ ಅಧೀನವಾಗಿತ್ತು. ಅದಕ್ಕೆ ಮೊದಲು ಬಡ್ಡಿಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಲಾಗಿತ್ತಾದರೂ ಅದನ್ನು ಕಾನೂನಿನ ಮೂಲಕ ನಿಷೇಧಿಸಲಾಗಿರಲಿಲ್ಲ. ಈ ಸೂಕ್ತ ಅವತೀರ್ಣವಾದ ನಂತರ ಇಸ್ಲಾಮೀ ಸರಕಾರದ ಸರಹದ್ದಿನೊಳಗೆ ಬಡ್ಡಿಯ ವ್ಯವಹಾರ ನಡೆಸುವುದು ಒಂದು ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸಲ್ಪಟ್ಟಿತು. ಈ ಸೂಕ್ತದ ಕೊನೆಯ ಪದಗಳ ಆಧಾರದಲ್ಲಿ ಹ. ಇಬ್ನು ಅಬ್ಬಾಸ್, ಹ. ಹಸನ್ ಬಸರೀ, ಹ.ಇಬ್ನು ಸೀನ್ ಮತ್ತು ಹ. ರಬೀಅ್ ಬಿನ್ ಅನಸ್(ರ) ಅವರ ಪ್ರಕಾರ ಇಸ್ಲಾಮೀ ಸಾಮ್ರಾಜ್ಯದಲ್ಲಿ ಬಡ್ಡಿ ತಿನ್ನುವವನನ್ನು ಬಡ್ಡಿ ವ್ಯವಹಾರ ತ್ಯಜಿಸಿ ಪಶ್ಚಾತ್ತಾಪ ಪಡುವಂತೆ ಒತ್ತಾಯಿಸಬೇಕು. ಅದಕ್ಕೆ ಅವನು ಸಿದ್ಧನಾಗದಿದ್ದರೆ ಅವನನ್ನು ವಧಿಸಬೇಕು. ಇತರ ಕರ್ಮಶಾಸ್ತ್ರಜ್ಞರ ಪ್ರಕಾರ ಅಂತಹ ವ್ಯಕ್ತಿಯನ್ನು ಬಂಧಿಸಿ, ಬಡ್ಡಿಯ ವ್ಯವಹಾರವನ್ನು ತ್ಯಜಿಸುವ ವಚನ ನೀಡುವ ತನಕವೂ ಅವನನ್ನು ಬಂಧನದಲ್ಲಿರಿಸಿದರೆ ಸಾಕಾಗುತ್ತದೆ.

280. ನಿಮ್ಮ ಸಾಲಗಾರನು 'ಕಾಸಿಲ್ಲದವನಾದರೆ' ಅವನಿಗೆ ಸುಸ್ಥಿತಿಯುಂಟಾಗುವ ತನಕ ಸಮಯಾವಕಾಶ ಕೊಡಿರಿ ಮತ್ತು ನೀವು ದಾನರೂಪದಲ್ಲಿ ಸಾಲವನ್ನೇ ಬಿಟ್ಟು ಕೊಟ್ಟರೆ ಅದು ನಿಮ್ಮ ಮಟ್ಟಿಗೆ ಇನ್ನಷ್ಟು ಉತ್ತಮವಾಗಿರುವುದು, ನೀವು ಅರಿತವರೇ ಆಗಿದ್ದರೆ.[101]

وَإِنْ كَانَ ذُو عُسْرَةٍ فَنَظِرَةٌ إِلَىٰ مَيْسَرَةٍ ۚ
وَأَنْ تَصَدَّقُوا خَيْرٌ لَكُمْ ۖ إِنْ كُنْتُمْ تَعْلَمُونَ ﴿٢٨٠﴾

281. ನೀವು ಅಲ್ಲಾಹನ ಕಡೆಗೆ ಮರಳಿಸಲ್ಪಡುವ ದಿನದ ಅವಮಾನ ಹಾಗೂ ಕಷ್ಟಗಳಿಂದ ಭಯಪಡಿರಿ. ಅಲ್ಲಿ ಪ್ರತಿಯೊಬ್ಬನಿಗೂ ಅವನು ಗಳಿಸಿದ ಪುಣ್ಯ ಅಥವಾ ಪಾಪಗಳ ಸರ್ವ ಸಂಪೂರ್ಣ ಪ್ರತಿಫಲ ಸಿಗುವುದು ಮತ್ತು ಯಾರ ಮೇಲೂ ಎಷ್ಟು ಮಾತ್ರಕ್ಕೂ ಅನ್ಯಾಯವಾಗಲಾರದು.

وَاتَّقُوا يَوْمًا تُرْجَعُونَ فِيهِ إِلَى اللَّهِ ۖ ثُمَّ
تُوَفَّىٰ كُلُّ نَفْسٍ مَا كَسَبَتْ وَهُمْ لَا يُظْلَمُونَ ﴿٢٨١﴾ ٣٨ ع ٨ ٢

282. ಓ ಸತ್ಯವಿಶ್ವಾಸಿಗಳೇ! ನೀವು ಅವಧಿಯನ್ನು ನಿಶ್ಚಯಿಸಿಕೊಂಡು ಪರಸ್ಪರ ಸಾಲದ ಲೇವಾದೇವಿ[102] ಮಾಡುವಾಗ ಅದನ್ನು ಬರೆದಿಟ್ಟುಕೊಳ್ಳಿರಿ. ಬರಹಗಾರನೊಬ್ಬನು ಉಭಯತ್ರರಲ್ಲಿ ಯಾರಿಗೂ ಅನ್ಯಾಯವಾಗದಂತೆ ಕರಾರು ಪತ್ರ ಬರೆಯಬೇಕು. ಅಲ್ಲಾಹನು ಯಾರಿಗೆ ಬರವಣಿಗೆಯ ಅರ್ಹತೆ ಪ್ರದಾನ ಮಾಡಿರುವನೋ ಅವನು ಬರೆಯಲು ನಿರಾಕರಿಸಬಾರದು. ಅವನು ಬರೆಯಬೇಕು. ಸಾಲಕ್ಕೆ ಬಾಧ್ಯಸ್ಥನಾದವನು (ಸಾಲ ಪಡೆಯುವಾತನು) ಒಕ್ಕಣೆಯನ್ನು ಬರೆಯಿಸಬೇಕು. ಅವನು ತನ್ನ ಪ್ರಭುವಾದ ಅಲ್ಲಾಹನನ್ನು ಭಯಪಡಬೇಕು. ಇತ್ಯರ್ಥಗೊಂಡ ವ್ಯವಹಾರದಲ್ಲಿ ತಾರತಮ್ಯ ಮಾಡಬಾರದು. ಆದರೆ ಸಾಲ ಪಡೆದವನು ಅಲ್ಪಮತಿ ಅಥವಾ ದುರ್ಬಲನಾಗಿದ್ದರೆ ಅಥವಾ ಒಕ್ಕಣೆ ಹೇಳಲಾರದವನಾಗಿದ್ದರೆ ಅವನ ರಕ್ಷಕನು ನ್ಯಾಯ ಪೂರ್ಣವಾಗಿ ಒಕ್ಕಣೆ ಬರೆಯಿಸಬೇಕು. ಅನಂತರ ನಿಮ್ಮ ಪುರುಷರ ಪೈಕಿ ಇಬ್ಬರನ್ನು ಸಾಕ್ಷಿಯಾಗಿರಿಸಿಕೊಳ್ಳಬೇಕು. ಇಬ್ಬರು ಪುರುಷರು ಸಿಗದಿದ್ದರೆ, ಒಬ್ಬ ಪುರುಷನೂ ಇಬ್ಬರು ಸ್ತ್ರೀಯರೂ ಬೇಕು. ಇದು ಒಬ್ಬಳು ಮರೆತು ಬಿಟ್ಟರೆ ಇನ್ನೊಬ್ಬಳು ನೆನಪಿಗೆ

يَا أَيُّهَا الَّذِينَ آمَنُوا إِذَا تَدَايَنْتُمْ بِدَيْنٍ
إِلَىٰ أَجَلٍ مُسَمًّى فَاكْتُبُوهُ ۚ وَلْيَكْتُبْ
بَيْنَكُمْ كَاتِبٌ بِالْعَدْلِ ۚ وَلَا يَأْبَ كَاتِبٌ
أَنْ يَكْتُبَ كَمَا عَلَّمَهُ اللَّهُ ۚ فَلْيَكْتُبْ وَلْيُمْلِلِ
الَّذِي عَلَيْهِ الْحَقُّ وَلْيَتَّقِ اللَّهَ رَبَّهُ وَلَا
يَبْخَسْ مِنْهُ شَيْئًا ۚ فَإِنْ كَانَ الَّذِي عَلَيْهِ
الْحَقُّ سَفِيهًا أَوْ ضَعِيفًا أَوْ لَا يَسْتَطِيعُ أَنْ
يُمِلَّ هُوَ فَلْيُمْلِلْ وَلِيُّهُ بِالْعَدْلِ ۚ
وَاسْتَشْهِدُوا شَهِيدَيْنِ مِنْ رِجَالِكُمْ ۖ
فَإِنْ لَمْ يَكُونَا رَجُلَيْنِ فَرَجُلٌ وَامْرَأَتَانِ
مِمَّنْ تَرْضَوْنَ مِنَ الشُّهَدَاءِ أَنْ تَضِلَّ
إِحْدَاهُمَا فَتُذَكِّرَ إِحْدَاهُمَا الْأُخْرَىٰ ۚ

101. ಈ ಸೂಕ್ತದ ಆಧಾರದಲ್ಲಿ ಪರಿಗಣಿಸಲಾದ ನಿಯಮವೇನೆಂದರೆ ಸಾಲ ಮರುಪಾವತಿ ಮಾಡಲಾಗುವ ಸ್ಥಿತಿಯಲ್ಲಿರುವ ಸಾಲಗಾರನಿಗೆ ಇನ್ನಷ್ಟು ಕಾಲಾವಕಾಶ ನೀಡುವಂತೆ ಸಾಲ ನೀಡಿದವರನ್ನು ಇಸ್ಲಾಮೀ ನ್ಯಾಯಾಲಯ ಒತ್ತಾಯಿಸಬಹುದು. ಕೆಲವೊಮ್ಮೆ ಸಾಲವನ್ನು ಆಂಶಿಕವಾಗಿ ಅಥವಾ ಪೂರ್ತಿಯಾಗಿ ಮನ್ನಾ ಮಾಡಿಸುವ ಅಧಿಕಾರವೂ ಅದಕ್ಕಿರುವುದು. ಕರ್ಮಶಾಸ್ತ್ರಜ್ಞರು ನೀಡಿರುವ ವಿವರಗಳ ಪ್ರಕಾರ ಒಬ್ಬ ವ್ಯಕ್ತಿಯ ವಾಸದ ಮನೆ, ಅಡುಗೆಯ ಪಾತ್ರೆಗಳು, ಉಡುವ ಬಟ್ಟೆ ಮತ್ತು ಉಪಜೀವನಕ್ಕಾಗಿ ಬಳಸುವ ಸಲಕರಣೆಗಳನ್ನು ಎಂತಹ ಪರಿಸ್ಥಿತಿಯಲ್ಲೂ ವಶಪಡಿಸಿಕೊಳ್ಳುವಂತಿಲ್ಲ.

102. ಇದರಿಂದ ಸಾಲಕ್ಕೆ ಅವಧಿಯನ್ನು ನಿಶ್ಚಯಿಸಬೇಕು ಎಂಬ ವಿಧಿ ಹೊರಡುತ್ತದೆ.

وَلَا يَأْبَ الشُّهَدَاءُ إِذَا مَا دُعُوا ۚ وَلَا
تَسْأَمُوا أَنْ تَكْتُبُوهُ صَغِيرًا أَوْ كَبِيرًا إِلَىٰ
أَجَلِهِ ۚ ذَٰلِكُمْ أَقْسَطُ عِنْدَ اللَّهِ وَأَقْوَمُ لِلشَّهَادَةِ
وَأَدْنَىٰ أَلَّا تَرْتَابُوا ۖ إِلَّا أَنْ تَكُونَ تِجَارَةً
حَاضِرَةً تُدِيرُونَهَا بَيْنَكُمْ فَلَيْسَ عَلَيْكُمْ
جُنَاحٌ أَلَّا تَكْتُبُوهَا ۗ وَأَشْهِدُوا إِذَا تَبَايَعْتُمْ ۚ
وَلَا يُضَارَّ كَاتِبٌ وَلَا شَهِيدٌ ۚ وَإِنْ
تَفْعَلُوا فَإِنَّهُ فُسُوقٌ بِكُمْ ۗ وَاتَّقُوا اللَّهَ ۖ
وَيُعَلِّمُكُمُ اللَّهُ ۗ وَاللَّهُ بِكُلِّ شَيْءٍ عَلِيمٌ ﴿٢٨٢﴾

ತರಲಿಕ್ಕಾಗಿ. ಈ ಸಾಕ್ಷಿದಾರರು ನಿಮ್ಮೊಳಗಿನ ಸ್ವೀಕಾರಾರ್ಹ ಸಾಕ್ಷಿದಾರರಲ್ಲಾಗಿರಬೇಕು. ಸಾಕ್ಷಿದಾರರೊಡನೆ ಸಾಕ್ಷಿ ನಿಲ್ಲಲು ಹೇಳಿದಾಗ ಅವರು ನಿರಾಕರಿಸಬಾರದು. ವ್ಯವಹಾರವು ಚಿಕ್ಕದಿರಲಿ ಅಥವಾ ದೊಡ್ಡದಿರಲಿ-ಅವಧಿಯ ನಿರ್ಣಯದೊಂದಿಗೆ ಅದರ ಕರಾರು ಪತ್ರವನ್ನು ಬರೆಯಿಸಿಕೊಳ್ಳುವುದರ ಬಗ್ಗೆ ಉದಾಸೀನರಾಗದಿರಿ. ಈ ಕ್ರಮವು ಅಲ್ಲಾಹನ ಬಳಿ ನಿಮಗೆ ಹೆಚ್ಚು ನ್ಯಾಯಬದ್ಧವಾಗಿದೆ. ಇದರಿಂದ ಸಾಕ್ಷ್ಯ ನೆಲೆಗೊಳ್ಳಲು ಹೆಚ್ಚು ಸುಲಭವಾಗುತ್ತದೆ ಮತ್ತು ನೀವು ಸಂಶಯಗ್ರಸ್ತರಾಗುವ ಸಂಭಾವ್ಯತೆಯು ಕಡಿಮೆಯಾಗುತ್ತದೆ. ನೀವು ಪರಸ್ಪರ ಕೈ ಬದಲಾವಣೆಯೊಂದಿಗೆ ಮಾಡಿಕೊಳ್ಳುವ ವ್ಯಾಪಾರ ಸಂಬಂಧ ಲೇವಾದೇವಿಗಳನ್ನು ಬರೆದಿಡದಿದ್ದರೆ ದೋಷವಿಲ್ಲ. ಆದರೆ ವ್ಯಾಪಾರ ವ್ಯವಹಾರಗಳನ್ನು ಇತ್ಯರ್ಥಪಡಿಸಿಕೊಳ್ಳುವಾಗ ಸಾಕ್ಷಿದಾರರನ್ನು ಇರಿಸಿಕೊಳ್ಳಿರಿ. ಬರಹಗಾರರನ್ನೂ ಸಾಕ್ಷಿದಾರರನ್ನೂ ಸತಾಯಿಸಬಾರದು. ಹಾಗೆ ಮಾಡಿದರೆ ಅದು ನೀವು ಮಾಡುವ ಪಾಪವಾಗುವುದು. ಅಲ್ಲಾಹನ ಕ್ರೋಧದಿಂದ ಭಯಪಡಿರಿ. ಅವನು ನಿಮಗೆ ಸರಿಯಾದ ಕರ್ಮವಿಧಾನದ ಶಿಕ್ಷಣವನ್ನೀಯುತ್ತಾನೆ ಮತ್ತು ಅವನು ಸರ್ವ ವಿಷಯಗಳ ಅಭಿಜ್ಞನಾಗಿರುತ್ತಾನೆ.

وَإِنْ كُنْتُمْ عَلَىٰ سَفَرٍ وَلَمْ تَجِدُوا كَاتِبًا
فَرِهَانٌ مَقْبُوضَةٌ ۖ فَإِنْ أَمِنَ بَعْضُكُمْ
بَعْضًا فَلْيُؤَدِّ الَّذِي اؤْتُمِنَ أَمَانَتَهُ وَلْيَتَّقِ
اللَّهَ رَبَّهُ ۗ وَلَا تَكْتُمُوا الشَّهَادَةَ ۚ وَمَنْ
يَكْتُمْهَا فَإِنَّهُ آثِمٌ قَلْبُهُ ۗ وَاللَّهُ بِمَا
تَعْمَلُونَ عَلِيمٌ ﴿٢٨٣﴾

283. ನೀವು ಪ್ರಯಾಣದಲ್ಲಿದ್ದು ಕರಾರುಪತ್ರವನ್ನು ಬರೆಯಿಸಲು ಬರೆಹಗಾರನಾರೂ ಸಿಗದಿದ್ದರೆ, ಅಡವು ಪಡೆದು ವ್ಯವಹಾರ ನಡೆಸಿಕೊಳ್ಳಿರಿ.[103] ನೀವು ಪರಸ್ಪರ ವಿಶ್ವಾಸವಿರಿಸಿಕೊಂಡು ವ್ಯವಹಾರವನ್ನೇನಾದರೂ ನಡೆಸಿಕೊಂಡರೆ, ವಿಶ್ವಾಸವಿರಿಸಲ್ಪಟ್ಟಾತನು 'ಅಮಾನತ'ನ್ನು (ಅಡವು ಪಡೆದ ವಸ್ತುವನ್ನು) ಹಿಂದಿರುಗಿಸಬೇಕು ಮತ್ತು ತನ್ನ ಪಾಲಕ ಪ್ರಭುವಾದ ಅಲ್ಲಾಹನನ್ನು ಭಯಪಡಬೇಕು. ನೀವು ಸಾಕ್ಷ್ಯವನ್ನು ಅಡಗಿಸಬೇಡಿರಿ. ಸಾಕ್ಷ್ಯವನ್ನಡಗಿಸುವಾತನ ಹೃದಯವು ಪಾಪ ಕಲುಷಿತವಾಗಿದೆ ಮತ್ತು ಅಲ್ಲಾಹನು ನಿಮ್ಮ ಕರ್ಮಗಳಿಂದ ಅಜ್ಞನಾಗಿಲ್ಲ.

لِلَّهِ مَا فِي السَّمَاوَاتِ وَمَا فِي الْأَرْضِ ۗ وَإِنْ

284. ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವುದೆಲ್ಲವೂ ಅಲ್ಲಾಹನದು.

103. ಅಡವು ಪಡೆಯುವುದರ ಉದ್ದೇಶವು ಸಾಲ ಕೊಡುವಾತನಿಗೆ ಅದರ ಮರುಪಾವತಿಯ ಬಗ್ಗೆ ಸಮಾಧಾನವಾಗುವುದು ಮಾತ್ರ. ಆದರೆ ತಾನು ಕೊಟ್ಟ ಸಂಪತ್ತಿಗೆ ಪ್ರತಿಯಾಗಿ ಅಡವಿಟ್ಟ ವಸ್ತುವಿನಿಂದ ಪ್ರಯೋಜನ ಪಡೆಯುವ ಅಧಿಕಾರ ಅವನಿಗಿಲ್ಲ. ಏಕೆಂದರೆ ಅದು ಬಡ್ಡಿ ಎನಿಸಿಕೊಳ್ಳುವುದು. ಆದರೆ ಯಾವುದೇ ಜಾನುವಾರನ್ನು ಅಡವಿಡಲಾಗಿದ್ದರೆ ಅದರ ಹಾಲನ್ನು ಉಪಯೋಗಿಸ ಬಹುದು. ಹಾಗೆಯೇ ಸವಾರಿ ಮತ್ತು ಸರಕು ಸಾಗಣೆಗಾಗಿಯೂ ಅದನ್ನು ಬಳಸಬಹುದು. ಇದು ವಾಸ್ತವದಲ್ಲಿ ಅಡವು ಪಡೆದಾತನು ಜಾನುವಾರಿಗೆ ಕೊಡುವ ಮೇವಿನ ಪ್ರತಿಫಲವಾಗಿದೆ.

تُبْدُوْا مَا فِيْٓ اَنْفُسِكُمْ اَوْ تُخْفُوْهُ يُحَاسِبْكُمْ
بِهِ اللّٰهُ ۭ فَيَغْفِرُ لِمَنْ يَّشَاۗءُ وَيُعَذِّبُ مَنْ
يَّشَاۗءُ ۭ وَاللّٰهُ عَلٰي كُلِّ شَيْءٍ قَدِيْرٌ ٢٨٤

ನಿಮ್ಮ ಮನದಿಂಗಿತಗಳನ್ನು ನೀವು ಬಹಿರಂಗಗೊಳಿಸಿದರೂ ಬಚ್ಚಿಟ್ಟರೂ ಅಲ್ಲಾಹನು ನಿಮ್ಮಿಂದ ಅವುಗಳ ಲೆಕ್ಕಾಚಾರ ಪಡೆದೇ ತೀರುವನು. ಅನಂತರ ತನಗಿಷ್ಟ ಬಂದವರನ್ನು ಕ್ಷಮಿಸುವ ಮತ್ತು ತನಗಿಷ್ಟ ಬಂದವರನ್ನು ಶಿಕ್ಷಿಸುವ ಅಧಿಕಾರ ಅವನಿಗಿದೆ. ಅಲ್ಲಾಹನು ಪ್ರತಿಯೊಂದು ವಿಷಯದಲ್ಲಿ ಅಧಿಕಾರವಿರುವವನಾಗಿರುತ್ತಾನೆ.

اٰمَنَ الرَّسُوْلُ بِمَآ اُنْزِلَ اِلَيْهِ مِنْ رَّبِّهٖ
وَالْمُؤْمِنُوْنَ ۭ كُلٌّ اٰمَنَ بِاللّٰهِ وَمَلٰۗىِٕكَتِهٖ
وَكُتُبِهٖ وَرُسُلِهٖ ۣلَا نُفَرِّقُ بَيْنَ اَحَدٍ
مِّنْ رُّسُلِهٖ ۣ وَقَالُوْا سَمِعْنَا وَاَطَعْنَا ڭ
غُفْرَانَكَ رَبَّنَا وَاِلَيْكَ الْمَصِيْرُ ٢٨٥

285. ಸಂದೇಶವಾಹಕರು ತನ್ನ ಪ್ರಭುವಿನ ವತಿಯಿಂದ ಅವತೀರ್ಣಗೊಂಡುದರ ಮೇಲೆ ವಿಶ್ವಾಸವಿರಿಸಿದ್ದಾರೆ ಮತ್ತು ಈ ಸಂದೇಶವಾಹಕರ ಮೇಲೆ ವಿಶ್ವಾಸವಿಡುವವರು ಸಹ ಈ ಬೋಧನೆಯನ್ನು ಹೃತ್ಪೂರ್ವಕ ಸ್ವೀಕರಿಸಿದ್ದಾರೆ. ಇವರೆಲ್ಲರೂ ಅಲ್ಲಾಹನಲ್ಲಿಯೂ ಅವನ ದೇವಚರರಲ್ಲಿಯೂ ಅವನ ದಿವ್ಯಗ್ರಂಥಗಳಲ್ಲಿಯೂ ಅವನ ಸಂದೇಶವಾಹಕರಲ್ಲಿಯೂ ವಿಶ್ವಾಸವಿರಿಸುತ್ತಾರೆ. "ನಾವು ಅಲ್ಲಾಹನ ಸಂದೇಶವಾಹಕರ ನಡುವೆ ಯಾವತ್ತು ತಾರತಮ್ಯವನ್ನಿರಿಸುವುದಿಲ್ಲ. ನಾವು ಆಜ್ಞೆಯನ್ನು ಆಲಿಸಿದೆವು ಮತ್ತು ಅನುಸರಣೆಯನ್ನು ಸ್ವೀಕರಿಸಿದೆವು. ನಮ್ಮ ಪ್ರಭೂ, ನಾವು ನಿನ್ನಿಂದ ಪಾಪವಿಮೋಚನೆಯನ್ನು ಬಯಸುತ್ತೇವೆ ಮತ್ತು ನಮಗೆ ನಿನ್ನ ಕಡೆಗೇ ಮರಳಲಿಕ್ಕಿದೆ" ಎಂದು ಅವರನ್ನುತ್ತಾರೆ.

لَا يُكَلِّفُ اللّٰهُ نَفْسًا اِلَّا وُسْعَهَا ۭ لَهَا
مَا كَسَبَتْ وَعَلَيْهَا مَا اكْتَسَبَتْ ۭ رَبَّنَا لَا
تُؤَاخِذْنَآ اِنْ نَّسِيْنَآ اَوْ اَخْطَاْنَا ۚ رَبَّنَا
وَلَا تَحْمِلْ عَلَيْنَآ اِصْرًا كَمَا حَمَلْتَهٗ
عَلَي الَّذِيْنَ مِنْ قَبْلِنَا ۚ رَبَّنَا وَلَا تُحَمِّلْنَا
مَا لَا طَاقَةَ لَنَا بِهٖ ۚ وَاعْفُ عَنَّا ۪
وَاغْفِرْ لَنَا ۪ وَارْحَمْنَا ۪ اَنْتَ مَوْلٰىنَا
فَانْصُرْنَا عَلَي الْقَوْمِ الْكٰفِرِيْنَ ٢٨٦

286. ಅಲ್ಲಾಹನು ಯಾವ ಜೀವಿಯ ಮೇಲೂ ಅವನ ಶಕ್ತಿಗೆ ಮೀರಿದ ಹೊಣೆ ಹೊರಿಸುವುದಿಲ್ಲ. ಪ್ರತಿಯೊಬ್ಬನು ಗಳಿಸಿದ ಪುಣ್ಯದ ಫಲ ಅವನಿಗೆ ಸಿಗುವುದು ಮತ್ತು ಅವನು ಶೇಖರಿಸಿದ ಪಾಪದ ದಂಡವೂ ಅವನ ಮೇಲೆಯೇ ಇರುವುದು. (ಓ ಸತ್ಯವಿಶ್ವಾಸಿಗಳೇ! ನೀವು ಹೀಗೆ ಯಾಚಿಸಿರಿ:) ಓ ನಮ್ಮ ಪ್ರಭೂ, ನಮ್ಮಿಂದ ಪ್ರಮಾದವಶಾತ್ ಅಪರಾಧಗಳಾಗಿಬಿಟ್ಟರೆ ಅವುಗಳಿಗಾಗಿ ನಮ್ಮನ್ನು ಹಿಡಿಯಬೇಡ. ಪ್ರಭೂ, ನಮ್ಮ ಪೂರ್ವಿಕರ ಮೇಲೆ ಹೊರಿಸಿದಂತಹ ಹೊರೆಯನ್ನು ನಮ್ಮ ಮೇಲೆ ಹೊರಿಸಬೇಡ. ಓ ನಮ್ಮ ಪ್ರಭೂ, ನಮ್ಮಿಂದ ಹೊರಲು ಸಾಧ್ಯವಾಗದ ಹೊರೆಯನ್ನು ನಮ್ಮ ಮೇಲೆ ಹೊರಿಸಬೇಡ. ನಮ್ಮ ಪಾಪಗಳನ್ನು ಪರಿಹರಿಸು, ನಮ್ಮನ್ನು ಕ್ಷಮಿಸು, ನಮ್ಮ ಮೇಲೆ ಕೃಪೆದೋರು. ನೀನೇ ನಮ್ಮ ಒಡೆಯ. ಸತ್ಯನಿಷೇಧಿಗಳ ಎದುರು ನಮಗೆ ಸಹಾಯ ಮಾಡು.